ಶಿಶುವಿಹಾರ

ಶ್ರೀಮತಿ ಎಂ ಜಿ ಗೌಡರ

1975

ಕನ್ನಡ ಅಧ್ಯಯನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-24

ಪ್ರಕಟಣೆ 27

ಶಿಶು ವಿಹಾರ

ಶ್ರೀಮತಿ ಎಂ. ಜಿ. ಗೌಡರ

1975

ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು-560024

ಶಿಶುವಿಹಾರ (ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ವಿಭಾಗದಿಂದ ಸಿದ್ಧಗೊಂಡು ಸಂವಹನ ಸಮಿತಿ ಪ್ರಕಾಶಿತ) ಪ್ರಥಮ ಮುದ್ರಣ 1975, ಪ್ರತಿಗಳು–1000. ಪುಟ xii+102, ಬೆಲೆ: ಸಾದಾ ಪ್ರತಿ – ರೂ. 7–50
ಕ್ಯಾಲಿಕೊ ಪ್ರತಿ – ರೂ. 10–50

ಪ್ರಧಾನ ಸಂಪಾದನೆ
ವೀ. ಚ. ಹಿತ್ತಲಮನಿ
ಪ್ರಾಧ್ಯಾಪಕರು

ಸಹ ಸಂಪಾದನೆ
ಸಿ. ಕೆ. ಕುಮುದಿನಿ
ಸಂಶೋಧನಾ ಸಹಾಯಕರು

ತಾಂತ್ರಿಕ ಪರಿಶೀಲನೆ
ಎನ್. ಜಯಮಣಿ
ಸಹಾಯಕ ಪ್ರಾಧ್ಯಾಪಿಕೆಯರು

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಮುದ್ರಣ
ಕೃಷಿ ವಿಶ್ವವಿದ್ಯಾನಿಲಯ ಅಚ್ಚುಕೂಟ
ಬೆಂಗಳೂರು–560024

ಮುನ್ನುಡಿ

ಇಂದಿನ ವಿಶ್ವದಲ್ಲಿನ ನಾಗಾಲೋಟದ ಜನಸಂಖ್ಯೆ ತಂದೊಡ್ಡಿದ ಹಲವಾರು ಸಮಸ್ಯೆಗಳಿಗೆ ಕೃಷಿ ಉತ್ಪಾದನೆಯ ಹೆಚ್ಚಳವೇ ಬಹುಮಟ್ಟಿಗೆ ಪರಿಹಾರ ಒದಗಿಸಲು ಸಾಧ್ಯ. ಕೃಷಿ ಉತ್ಪಾದನೆಯ ಹೆಚ್ಚಳವು ಕೃಷಿ ಸಂಶೋಧನೆಗಳ ಫಲಿತಾಂಶಗಳನ್ನಳವಡಿಸುವಿಕೆಯನ್ನು ಅವಲಂಬಿಸಿದೆ. ಕಳೆದ ಒಂದು ದಶಕದಲ್ಲಿ ಕೃಷಿ ಸಂಶೋಧನೆಯು ನಾನಾಮುಖವಾಗಿ ಬೆಳೆದಿದೆ. ಅದರ ಪ್ರಯೋಜನವನ್ನು ಕೆಲವು ರೈತರು ಪಡೆದಿದ್ದಾರೆ. ಅವರಲ್ಲಿ ಕೆಲವರು ಹೆಚ್ಚಿನ ಪ್ರಗತಿಯನ್ನು ಸಾಧಿಸಿ, ಜಾಗತಿಕ ಗರಿಷ್ಠ ಸಾಧನೆಯನ್ನು ನಾವೂ ಸಾಧಿಸಲು ಸಾಧ್ಯವೆಂಬ ಭರವಸೆಯ ದೃಷ್ಟಾಂತವೆನಿಸಿದ್ದಾರೆ. ಈ ಅಳವಡಿಕೆ ಹಾಗೂ ಸಾಧನೆಗಳು ಕೆಲವರ ಸ್ವತ್ತಾಗಿ ಉಳಿಯದೆ ಸಾರ್ವತ್ರಿಕವಾಗಬೇಕು. ಆಗ ರಾಷ್ಟ್ರದಲ್ಲಿ ನಿಜವಾದ ಕೃಷಿ ಪ್ರಗತಿ ಹಾಗೂ ಸಾಮಾಜಿಕ ಕಲ್ಯಾಣ ಮೂಡಿಬರುತ್ತವೆ. ಈ ಕಾರ್ಯಸಾಧನೆಯಲ್ಲಿ ಕೃಷಿವಿಜ್ಞಾನ ಸಾಹಿತ್ಯ ರಚನೆಯು ಮಹತ್ವದ ಅಂಶವಾಗಿದೆ. ಈ ದೃಷ್ಟಿಯಲ್ಲಿ ಕೃಷಿವಿಜ್ಞಾನ ಪುಸ್ತಕಗಳು ಪ್ರಾದೇಶಿಕ ಭಾಷೆಯಲ್ಲಿ ಪ್ರಕಟವಾಗುತ್ತಿರುವುದು ಔಚಿತ್ಯಪೂರ್ಣವಾಗಿದೆ.

ಸ್ವಾತಂತ್ರ್ಯಾನಂತರದ ಅಭ್ಯುದಯದ ಹಲವಾರು ಯತ್ನಗಳಲ್ಲಿ ರಾಷ್ಟ್ರೀಯ ಭಾಷೆಗಳ ಅಭಿವೃದ್ಧಿಯೂ ಒಂದು. ಹಿಂದಿ ಭಾಷೆಯೊಂದಿಗೇನೆ ಇತರ ಎಲ್ಲ ಪ್ರಾದೇಶಿಕ ಭಾಷೆಗಳ ಬೆಳವಣಿಗೆ ನಡೆಯಬೇಕೆಂದು ಸಂಸತ್ತು ನಿರ್ಧರಿಸಿದೆ. ಹಲವಾರು ಭಾಷೆಗಳು ಬಳಕೆಯಲ್ಲಿರುವ ನಮ್ಮ ರಾಷ್ಟ್ರದಲ್ಲಿ ಎಲ್ಲ ಭಾಷೆಗಳೂ ಸಮತೂಕವಾಗಿ ಬೆಳೆದು ಬಂದಾಗಲೇ ರಾಷ್ಟ್ರದ ಸಮಗ್ರತೆ ಬೆಳೆದುಬರುತ್ತದೆ. ಈ ಭಾಷೆಗಳು ಸಾಕಷ್ಟು ಅಭಿವೃದ್ಧಿ ಹೊಂದಿದಾಗ ಶಿಕ್ಷಣಮಾಧ್ಯಮಗಳಾಗಲು ಸಮರ್ಥವಾಗುತ್ತವೆ. ನಾಡಿನ ಭಾಷೆಗಳೆಲ್ಲವನ್ನೂ ಶಿಕ್ಷಣಮಾಧ್ಯಮಗಳಾಗುವಂತೆ ಬಲಗೊಳಿಸುವ ಹೊಣೆ ವಿವಿಧ ವಿಶ್ವವಿದ್ಯಾನಿಲಯಗಳದ್ದು. ಅವಕ್ಕನುಗುಣವಾಗಿ ಪ್ರಾದೇಶಿಕ ಭಾಷೆಗಳು ಕೃಷಿಶಿಕ್ಷಣ ಮಾಧ್ಯಮಗಳಾಗುವಂತೆ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾದ್ದು ಕೃಷಿ ವಿಶ್ವವಿದ್ಯಾನಿಲಯಗಳ ಕೆಲಸವಾಗಿದೆ. ನಮ್ಮ ಕೃಷಿ ವಿಶ್ವವಿದ್ಯಾನಿಲಯವು ಈ ಕಾರ್ಯಸಾಧನೆಗೋಸುಗ ಕನ್ನಡದಲ್ಲಿ ಕೃಷಿ ಸಾಹಿತ್ಯ ನಿರ್ಮಾಣ ಕೈಗೆತ್ತಿಕೊಂಡಿದೆ. ಇಷ್ಟುದಿನ ಇಂಗ್ಲಿಷ್ ಭಾಷೆಯಲ್ಲಿಯೇ ಶಿಕ್ಷಣ ಪಡೆದು, ಬಳಿಕ ನಡೆಸಿದ ಶಿಕ್ಷಕ ಹಾಗೂ ವಿಜ್ಞಾನಿಗಳಿಗೆ ಒಮ್ಮೆಲೇ ಪ್ರಾದೇಶಿಕ ಭಾಷೆಗಳಲ್ಲಿ ಗ್ರಂಥರಚನೆ ಮಾಡುವುದು ಸುಲಭ ಕಾರ್ಯವೇನಲ್ಲ. ಇಂಥದರಲ್ಲಿ ಈ ಕೆಲಸ ಪ್ರಾರಂಭವಾದ ಅಲ್ಪಾವಧಿಯಲ್ಲಿ ಕಾಲುಶತ ಗ್ರಂಥಗಳು ಪ್ರಕಟಗೊಂಡು ಜನಪ್ರಿಯವಾದುದು ಅತ್ಯಂತ ಹೆಮ್ಮೆಯ ಸಾಧನೆಯೇ ಸರಿ ! ಈ ಕೆಲಸ ಭರದಿಂದ ನಡೆದಷ್ಟು ಕೃಷಿ ಮುನ್ನಡೆಯು ತ್ವರಿತವಾಗಿ ನಡೆಯುವುದು.

ಉಪಯುಕ್ತ ಸಂಶೋಧನಾಧಾರಿತ ಆಳ ಅಭ್ಯಾಸದ ಫಲವಾಗಿ ಸೃಷ್ಟಿಗೊಂಡ ಕೃಷಿ ವಿಜ್ಞಾನ ಗ್ರಂಥಗಳು ನಮ್ಮ ರಾಜ್ಯದ ಕೃಷಿ ವಿದ್ಯಾರ್ಥಿ ಹಾಗೂ ಕೃಷಿಕರಿಗೆ ಅಮೂಲ್ಯ ಕೊಡಿಗೆಗಳಾಗುವುದರಲ್ಲಿ ಸಂದೇಹವಿಲ್ಲ. ಈ ಕಾರ್ಯ ಮಿಂಚಿನ ವೇಗದಿಂದ ನಡೆಯಲೆಂದು ನಾನು ಹಾರೈಸುತ್ತೇನೆ.

ಕೃಷಿ ವಿಶ್ವವಿದ್ಯಾನಿಲಯ
ಬೆಂಗಳೂರು–560024
ದಿನಾಂಕ 15–8–1975

ಹ. ರಾ. ಅರಕೇರಿ
ಉಪಕುಲಪತಿಗಳು

ಸಂಪಾದಕರ ಮಾತು

ಗೃಹ ವಿಜ್ಞಾನವು ಕೃಷಿವಿಜ್ಞಾನಗಳ ಒಂದು ಅಂಗ. ಕೃಷಿ ವಿಶ್ವವಿದ್ಯಾನಿಲಯವು ಒಂದು ಗೃಹ ವಿಜ್ಞಾನ ಕಾಲೇಜನ್ನು ಪ್ರಾರಂಭಿಸಿದೆಯಲ್ಲದೆ ಗೃಹ ವಿಜ್ಞಾನದ ಬಗೆಗೆ ಸಂಶೋಧನೆಗೂ ಅವಕಾಶಮಾಡಿಕೊಟ್ಟಿದೆ. ಸಾಮಾನ್ಯವಾಗಿ ಕೃಷಿ ಕ್ಷೇತ್ರಗಳಲ್ಲಿನ ನಿರ್ಣಯ ವಿವಿಧ ವ್ಯವಸಾಯ ರಂಗಗಳಿಗೆ ಸೇರಿದ್ದಾದರೆ ಗೃಹಗಳಿಗೆ ಸಂಬಂಧಪಟ್ಟ ನಿರ್ಣಯ ಗೃಹವಿಜ್ಞಾನಕ್ಕೆ ಸೇರಿದೆ. ಇದಕ್ಕಿರುವ 'ಗೃಹ ಅರ್ಥಶಾಸ್ತ್ರ'ವೆಂಬ ಪರ್ಯಾಯ ಪದವೂ ಔಚಿತ್ಯಪೂರ್ಣವಾಗಿದೆ. ಗೃಹಿಣಿಯು ಕೈತೋಟಗಳಲ್ಲಿ ಕಾಯಿಪಲ್ಲೆ (ತರಕಾರಿ), ಹೂ, ಹಣ್ಣು ಬೆಳೆಸುವಿಕೆ, ಹೊಲಗದ್ದೆಗಳಲ್ಲಿ ನಾಟಿ, ಕಳೆ, ಸುಗ್ಗಿ ಮೊದಲಾದ ಕೆಲವು ಕಾರ್ಯಮಾಡುವಿಕೆ, ಬಿತ್ತನೆ ಬೀಜ, ಬೇಸಾಯೋತ್ಪತ್ತಿ ಕಾಯ್ದಿಟ್ಟು ಸಂಸ್ಕರಣ ಗೊಳಿಸುವಿಕೆ, ಮನೆಯ ಓರಣ, ಪೌಷ್ಟಿಕ ಆಹಾರ, ಮಕ್ಕಳ ಪಾಲನೆ ಪೋಷಣೆ, ಗೃಹ ಸ್ವಾಸ್ಥ್ಯ ಹಾಗೂ ಸೌಂದರ್ಯ, ಕುಟುಂಬದ ಉಡುಗೆ ತೊಡಿಗೆಗಳ ವ್ಯವಸ್ಥೆ, ಈ ಕೆಲವು ಕಾರ್ಯಗಳಲ್ಲಿ ಗೃಹಿಣಿ ಅದರಲ್ಲಿಯೂ ಗ್ರಾಮಮಹಿಳೆ ಪಾಲುಗೊಳ್ಳುತ್ತಾಳೆ. ಇವು ಗಳ ಬಗೆಗಿನ ವಿಜ್ಞಾನ ಹಾಗೂ ತಾಂತ್ರಿಕತೆಯೇ ಗೃಹ ವಿಜ್ಞಾನವು.

ಗೃಹ ವಿಜ್ಞಾನಕ್ಕೆ ಸಂಬಂಧಪಟ್ಟ ಗ್ರಂಥಗಳನ್ನೆಲ್ಲ ಪ್ರಕಟಿಸಬೇಕೆಂಬುದು ನಮ್ಮ ಆಕಾಂಕ್ಷೆ. ಎರಡು ಪುಸ್ತಕಗಳು ಪ್ರಕಟಣೆ ಹಂತದಲ್ಲಿವೆ. ಮೊದಲನೆಯದು ಪೌಷ್ಟಿಕ ಆಹಾರ ; ಎರಡನೆಯದು ಈ ಶಿಶುವಿಹಾರ.

ಮಕ್ಕಳು ರಾಷ್ಟ್ರದ ಬಹುದೊಡ್ಡ ಆಸ್ತಿ. ಭಾವೀ ಜನಾಂಗ ಈ ಮಕ್ಕಳನ್ನೇ ಅವಲಂಬಿಸಿದೆ. ಅವರ ಪಾಲನೆ ಪೋಷಣೆಯಲ್ಲಿ ಉದಾಸೀನತೆ, ಕುಂದುಕೊರತೆಗಳು ತಲೆದೋರಿದಲ್ಲಿ ಮುಂದಿನ ಪೀಳಿಗೆ ದೋಷಪೂರಿತವಾಗಿ, ಹಲವು ಸಲ ಸಮಾಜ ಕಂಟಕ ವಾಗಿ ಪರಿಣಮಿಸುತ್ತದೆ. ಅಂಥ ರಾಷ್ಟ್ರ ದುರ್ಬಲಗೊಂಡು, ತೇಜೋಹೀನವಾಗಿ ಕಾಲಾಂತರದಲ್ಲಿ ಪರಕೀಯರ ಸ್ವತ್ತಾಗಿ ಕೊನೆಯಲ್ಲಿ ನಶಿಸಿಹೋಗುತ್ತದೆ. ಆ ಕಾರಣ ದಿಂದಾಗಿ ರಾಷ್ಟ್ರಾಭ್ಯುದಯ ಕಾರ್ಯದಲ್ಲಿ ಮಕ್ಕಳ ಕಲ್ಯಾಣಕಾರ್ಯಗಳಿಗೆ ವಿಶೇಷ ಗಮನ ಅವಶ್ಯ. ಎಳೆಯ ವಯಸ್ಸಿನಲ್ಲಿ ರೂಪಿತ ವ್ಯಕ್ತಿತ್ವವೇ ಮುಂದಿನ ವಿಕಾಸಕ್ಕೆ ಬುನಾದಿ. ಎಳೆಯ ಮಕ್ಕಳ ಮನಸ್ಸು ಮೇಣದಂಥದು. ಇಚ್ಛಿತ ರೂಪಕೊಡುವುದು ಆಗ ಸಾಧ್ಯ. ಶಿಶುವಿಹಾರಗಳು ಈ ಧ್ಯೇಯ ಸಾಧನೆಗೆ ತಕ್ಕವಾಗಿರಬೇಕು. ಎಳೆಯ ಮಕ್ಕಳಿಗೆ ಅಲ್ಲಿ ಉಲ್ಲಾಸದಿಂದ, ಪ್ರೀತಿಯಿಂದ, ಉತ್ಸಾಹದಿಂದ ನಕ್ಕು, ಕಲಿದು ಮನೋವಿಕಾಸಗೊಳಿಸಿ ಕೊಳ್ಳಲು ಸಕಲ ಸೌಕರ್ಯ ಆಸ್ಪದಗಳಿರಬೇಕು. ಮಕ್ಕಳಿರುವ ಮನೆ ಶೋಭಿಸುವಂತೆ ಶಿಶುವಿಹಾರಗಳಿರುವ ಗ್ರಾಮ (ಸಮಾಜ) ಶೋಭಿಸುತ್ತದೆ.

ಆದರ್ಶ ಶಿಶುವಿಹಾರದ ರೂಪರೇಷೆ ಈ ಚಿಕ್ಕಹೊತ್ತಿಗೆಯಲ್ಲಿದೆ. ಶಿಶುವಿಹಾರಗಳಲ್ಲಿನ ಶಿಕ್ಷಣ ಸ್ವರೂಪ. ಸಂಘಟನೆ, ಸ್ವಚ್ಛತೆ ಹಾಗೂ ಆರೋಗ್ಯಪಾಲನೆ, ಆಟಪಾಠಗಳು, ಸ್ಥೂಲ ಸ್ನಾಯುಗಳ ಚಟುವಟಿಕೆಗಳು, ಮುಕ್ತ ವ್ಯವಸಾಯ ಹಾಗೂ ಜ್ಞಾನೇಂದ್ರಿಯ ವಿಕಾಸ, ಕೈಕೆಲಸ, ಭಾಷಾಭ್ಯಾಸ ಮತ್ತು ಗಣಿತ, ಬಾಲಗೀತೆ, ನಾಟಕ, ಕಥೆ ಹಾಗೂ ಹರಟೆಗಳು, ಶಿಶುಗಳ ಪ್ರವಾಸ ಮತ್ತು ಸಾಧನಸಾಮಗ್ರಿ ಈ ಹಲವು ವಿಷಯಗಳ ವಿವೇಚನೆ ಈ ಪುಸ್ತಕದಲ್ಲಿದೆ.

ರಾಜ್ಯದ ಹಲವು ಸಮಾಜ ವಿಕಾಸಕ್ಷೇತ್ರಗಳಲ್ಲಿ ಮುಖ್ಯ ಸಮಾಜ ಶಿಕ್ಷಣ ಸಂಘಟಿಕೆಯಾಗಿ ಹಲವಾರು ವರ್ಷ ಅನುಭವ ಪಡೆದು ಈಗ ಕೆಲವು ವರ್ಷಗಳಿಂದ ಧಾರವಾಡದಲ್ಲಿನ ಗ್ರಾಮಾಭಿವೃದ್ಧಿ ತರಬೇತಿ ಕೇಂದ್ರದ ಗೃಹವಿಜ್ಞಾನ ವಿಭಾಗದ ಮುಖ್ಯ ಅಧ್ಯಾಪಿಕೆಯಾಗಿ ಕೆಲಸಮಾಡುತ್ತಿರುವ ಶ್ರೀಮತಿ ಮೇರಿ ಜಿ. ಗೌಡರ ಅವರು ಈ ಗ್ರಂಥ ಬರೆದಿದ್ದಾರೆ. ಅಲ್ಲಿನ ಶಿಶುವಿಹಾರವು ಗೃಹವಿಜ್ಞಾನ 'ಶಿಕ್ಷಣ ಕೇಂದ್ರದ ಪ್ರಯೋಗಶಾಲೆ. ಅಲ್ಲಿನ ಅನುದಿನದ ಕಾರ್ಯಕ್ರಮಗಳು ಅವರ ಮಾರ್ಗದರ್ಶನದಲ್ಲಿ ನಡೆಯುತ್ತವೆ. ಶಿಶುವಿಹಾರದ ಹಲವಾರು ಚಟುವಟಿಕೆಗಳನ್ನು ಬಿಂಬಿಸುವ ಈ ಗ್ರಂಥದಲ್ಲಿನ ಚಿತ್ರಗಳೂ ಅಲ್ಲಿಯ ಮುದ್ದು ಶಿಶುಗಳವುಗಳೇ. ಕೃಷಿ ವಿಶ್ವವಿದ್ಯಾನಿಲಯದ ಪಠ್ಯ ಪುಸ್ತಕಮಾಲೆಯಲ್ಲಿ ಈ ಗ್ರಂಥವನ್ನು ಪ್ರಕಟಿಸಲು ಒಪ್ಪಿ ಸಹಕರಿಸಿದ ಲೇಖಕಿಯರಿಗೆ ಅಭಿವಂದನೆಗಳು.

ಈ ಪುಸ್ತಕವು ರಾಜ್ಯದಲ್ಲಿನ ಶಿಶುವಿಹಾರ ಶಿಕ್ಷಕಿಯರಿಗೂ, ಗೃಹವಿಜ್ಞಾನ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿನಿಯರಿಗೂ ಹಾಗೂ ತಾಯಂದಿರಿಗೂ ಬಹುಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಶ್ರಾವಣಮಾಸ,
ರಾಕ್ಷಸನಾಮ ಸಂವತ್ಸರ, ಶಾಲಿವಾಹನ ಶಕ 1897,
ಕನ್ನಡ ಅಧ್ಯಯನ ವಿಭಾಗ,
ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ವೀ. ಚ. ಹಿತ್ತಲಮನಿ
ಕನ್ನಡ ಪ್ರಾಧ್ಯಾಪಕರು
ಹಾಗೂ ಕನ್ನಡ ಅಭಿವೃದ್ಧಿ ಸಮಿತಿ
ಕಾರ್ಯದರ್ಶಿಗಳು

ಲೇಖಕರ ಮಾತು

ಸಮಾಜ ವಿಕಾಸ ಹಾಗೂ ಸಮಾಜ ಕಲ್ಯಾಣಯೋಜನೆಗೆ ಪ್ರೋತ್ಸಾಹ, ಸಹಾಯಗಳಿಂದಾಗಿ ಕರ್ನಾಟಕ ರಾಜ್ಯದ ಅನೇಕ ಹಳ್ಳಿಗಳಲ್ಲಿ ಶಿಶುವಿಹಾರಗಳು ನಡೆಯುತ್ತಿವೆ. ಗ್ರಾಮೀಣ ಜನತೆಗೆ ಶಿಶುವಿಹಾರಗಳ ಬಗ್ಗೆ ಇರುವ ಸ್ಥೂಲಕಲ್ಪನೆಯೂ ಇವಕ್ಕೆ ಪೋಷಕವಾಗಿದೆ. ಇಂತಹ ಶಿಶುವಿಹಾರಗಳಲ್ಲಿ ಕೆಲವನ್ನು ಸ್ಥಳೀಯ ಮಹಿಳಾ ಮಂಡಲದವರು ನಡೆಸಿದರೆ, ಇನ್ನು ಕೆಲವನ್ನು ಗ್ರಾಮಪಂಚಾಯಿತಿ. ಸಹಕಾರ ಸಂಘ, ಸರಕಾರ ಅಥವಾ ಸರಕಾರೇತರ ಸಂಸ್ಥೆಗಳವರು ನಡೆಸುತ್ತಿದ್ದಾರೆ.

ಶಿಶುವಿಹಾರಗಳನ್ನು ನಡೆಸಲು ಸರಕಾರ ಕೆಲಮಟ್ಟಿಗೆ ಧನಸಹಾಯ ಮಾಡುತ್ತಿದ್ದರೂ, ಜನತೆಯ ವಂತಿಗೆ ಸಾಕಷ್ಟು ಇಲ್ಲದೆ ಅಲ್ಲಿ ಮಕ್ಕಳಿಗೆ ಸಿಗಬೇಕಾದ ಶಿಕ್ಷಣದಲ್ಲಿ ಅನೇಕ ಕೊರತೆಗಳು ಕಂಡುಬರುತ್ತಿವೆ. ಹಳ್ಳಿಗಳ ಪರಿಸ್ಥಿತಿಯನ್ನನುಲಕ್ಷಿಸಿ ಕಡಮೆ ಖರ್ಚಿನಲ್ಲಿ ಶಿಕ್ಷಕರು, ಪಾಲಕರು, ಸಂಚಾಲಕರು ಪರಸ್ಪರ ಸಹಾಯ, ಸಹಕಾರಗಳಿಂದ ಸ್ಥಳೀಯವಾಗಿ ಸಿಗತಕ್ಕ ಸಾಮಾನುಗಳನ್ನು ಉಪಯೋಗಿಸಿಕೊಂಡು ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡುವುದು ಸಾಧ್ಯವಿದೆ. ಇವಕ್ಕೆ ಕೆಲವು ನಿದರ್ಶನಗಳನ್ನು ಈ ಪುಸ್ತಕದಲ್ಲಿ ಕೊಡಲಾಗಿದೆ ; ಸಾಧನೆ, ಸಲಕರಣೆಗಳ ಅಭಾವದಿಂದ ಮಕ್ಕಳ ಶಿಕ್ಷಣಕ್ಕೆ ಕೊರತೆಯಾಗದಂತೆ ಕೆಲವು ಮುಖ್ಯ ಮೂಲ ವಿಷಯಗಳನ್ನಾದರೂ ಅವರಿಗೆ ಒದಗಿಸಿ, ಸರ್ವತೋಮುಖ ಬೆಳವಣಿಗೆಯಲ್ಲಿ ಸಹಾಯಕವಾಗುವಂತಹ ಕೆಲವು ಸೂಚನೆಗಳನ್ನು ಕೊಡಲಾಗಿದೆ.

ಶಿಶುವಿಹಾರಗಳು ಇತ್ತೀಚೆಗೆ ಹೆಚ್ಚುಹೆಚ್ಚಾಗಿ ಪ್ರಚಲಿತವಾಗುತ್ತಿವೆ. ಈ ಕ್ಷೇತ್ರದಲ್ಲಿ ತರಬೇತಿ ಪಡೆದ ಶಿಕ್ಷಕಿಯರ ಸಂಖ್ಯೆ ಅತಿ ಕಡಮೆ. ತರಬೇತಿ ಪಡೆದವರು ಹಳ್ಳಿಗಳಲ್ಲಿ ಕೆಲಸ ಮಾಡಲು ಹೆಚ್ಚಾಗಿ ಹೋಗುತ್ತಿಲ್ಲ. ಅಲ್ಲದೆ ಗ್ರಾಮೀಣ ಶಿಶುವಿಹಾರಗಳಲ್ಲಿಯ ಆರ್ಥಿಕ ಮುಗ್ಗಟ್ಟಿನಿಂದಾಗಿ ತರಬೇತಿ ಹೊಂದಿದವರಿಗೆ ಅಥವಾ ಹೆಚ್ಚಿನ ಶಿಕ್ಷಣ ಪಡೆದವರಿಗೆ ಸಾಕಷ್ಟು ಸಂಬಳ ಕೊಡುವುದು ಸಾಧ್ಯವಾಗದೇ ಇರುವುದೂ ಸಹ ಇದಕ್ಕೆ ಮತ್ತೊಂದು ಕಾರಣವಾಗಿದೆ. ಹೀಗಾಗಿ ಅನೇಕ ಕಡೆಗಳಲ್ಲಿ ಶಿಶುವಿಹಾರಗಳು 6–7ನೆಯ ವರ್ಗದವರೆಗಷ್ಟೆ ಓದಿರುವವರಿಂದ ನಡೆಸಲ್ಪಡುತ್ತಿವೆ. ಅವರಿಗೆ ಶಿಕ್ಷಣ ತರಬೇತಿಯೂ ಇರುವುದಿಲ್ಲ. ಎಂತಲೇ ಇಂತಹ ಶಿಶುವಿಹಾರಗಳ ಶಿಕ್ಷಕಿಯರಿಗೂ, ಸಂಚಾಲಕರಿಗೂ, ಮಕ್ಕಳ ಪಾಲಕರಿಗೂ ಮತ್ತು ಶಿಕ್ಷಣ ಹಿತೈಷಿಗಳಿಗೂ ಶಿಶುವಿಹಾರಗಳ ಶಿಕ್ಷಣ ವಿಧಾನ ತಿಳಿದರೆ ಮಕ್ಕಳ ಶಿಕ್ಷಣದಲ್ಲಿ ಸುಧಾರಣೆಯಾಗಬಹುದೆಂಬ ನಿರೀಕ್ಷೆಯಿಂದ ಈ ಪುಸ್ತಕ ಬರೆಯಲಾಗಿದೆ. ಕನ್ನಡದಲ್ಲಿ ಗ್ರಾಮೀಣ ಶಿಶುವಿಹಾರಗಳನ್ನು ಕುರಿತ ಸಾಹಿತ್ಯ, ಹೆಚ್ಚಾಗಿ ಇಲ್ಲವೆಂದೇ ಹೇಳಬಹುದು. ಈ ಸಾಹಿತ್ಯ ಕನ್ನಡದಲ್ಲಿ ಹುಲುಸಾಗಿ ಬೆಳೆಯಬೇಕಾಗಿದೆ.

ಈ ಕಿರುಹೊತ್ತಿಗೆಯಿಂದ ಮಕ್ಕಳ ಪುರೋಭಿವೃದ್ಧಿಗೆ ನನ್ನ ಅಲ್ಪ ಸೇವೆ ಸಲ್ಲಿಸ ಬಯಸುತ್ತೇನೆ. ಗ್ರಾಮೀಣ ಮಕ್ಕಳಿಗೆ ಇದರಿಂದ ಕಿಂಚಿತ್ತಾದರೂ ಪ್ರಯೋಜನವಾಗ ಬಹುದೆಂಬುದು ಅಂತರಾಳದ ನಂಬಿಕೆ.

ಗೃಹ ವಿಜ್ಞಾನ ವಿಭಾಗ,
ಗ್ರಾಮೀಣ ತರಬೇತಿ ಕೇಂದ್ರ,
ಧಾರವಾಡ.

ಎಂ. ಜಿ. ಗೌಡರ

ಪರಿವಿಡಿ

ಚಿತ್ರಗಳ ಪಟ್ಟಿ

ಶಿಶು ವಿಹಾರ

ಅಧ್ಯಾಯ 1

ಶಿಶುವಿಹಾರ ಶಿಕ್ಷಣ

ವ್ಯಕ್ತಿಯ ವೈಯಕ್ತಿಕ ಹಾಗೂ ಸಾಮಾಜಿಕ ಜೀವನಗಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣವು ಅವಶ್ಯ. ವ್ಯಕ್ತಿಯ ವರ್ತಮಾನಕಾಲದ ಬದುಕು ಗತಕಾಲದ ಅನುಭವಗಳನ್ನವಲಂಬಿಸಿರುತ್ತದೆ ಮಾತ್ರವಲ್ಲ, ಭವಿಷ್ಯ ಸಿದ್ಧತೆಯೂ ಅದರಲ್ಲಿರುತ್ತದೆ. ಈ ಅನುಭವಗಳ ಶ್ರೀಮಂತಿಕೆ, ಭವಿಷ್ಯ ಜೀವನದ ಸಿದ್ಧತೆ ಮತ್ತು ವರ್ತಮಾನಕಾಲದ ಸಂತೃಪ್ತ ಜೀವನಗಳಿಗೆ ಶಿಕ್ಷಣ ಅತ್ಯವಶ್ಯ. ಅದು ವ್ಯಕ್ತಿಯಲ್ಲಿ ಹುದುಗಿದ ಅಂತಃಶ್ಶಕ್ತಿಗಳಿಗೆ ತಕ್ಕ ನೀರೆರೆದು, ಪೋಷಿಸಿ ವಿಕಸನಗೊಳಿಸುತ್ತದೆ.

ವ್ಯಕ್ತಿಯ ಶಿಕ್ಷಣವು ಎಳಗೂಸಾಗಿರುವಾಗಲೇ ಪ್ರಾರಂಭವಾಗುತ್ತದೆ. ಎಳೆಯ ಮಗುವಿಗೆ ತನಗೆ ಯೋಗ್ಯವಾದುದಾವುದು, ಒಳ್ಳೆಯದಾವುದು ಎಂದು ತಿಳಿಯುವಷ್ಟು ವಿವೇಚನಾ ಶಕ್ತಿಯಿಲ್ಲದಿರುವುದು ಸಹಜ. ಆದ್ದರಿಂದ ಮಗುವಿನ ಶಿಕ್ಷಣ ಮತ್ತು ಅನುಭವಗಳು ಸಮೃದ್ಧವಾಗಿರುವಂತೆ ದೊಡ್ಡವರು ತಕ್ಕ ವಾತಾವರಣ ನಿರ್ಮಿಸ ಬೇಕಾಗುತ್ತದೆ. ಮಗು ತನ್ನ ಅಂತಃಶ್ಶಕ್ತಿಗಳಿಗನುಗುಣವಾಗಿ ಈ ವಾತಾವರಣದಿಂದ ಅನುಭವಗಳನ್ನು ಪಡೆದು ತನ್ನ ಜೀವನವನ್ನು ರೂಪಿಸಿಕೊಳ್ಳುತ್ತದೆ. ಅದು ದೊಡ್ಡದಾದ ಮೇಲೆ ತನ್ನ ಧ್ಯೇಯವನ್ನು ಮನಗಾಣಲು ಶಕ್ತವಾಗಿ ಅದನ್ನು ಸಾಧಿಸಲು ಬೇಕಾದ ಸಾಧನ ಮಾರ್ಗಗಳನ್ನು ಕೈಗೊಳ್ಳಬಲ್ಲದು. ಆದಕಾರಣ ಮಗುವಿನ ಈ ಬಾಲ್ಯದ ಅವಶ್ಯ ಅನುಭವಗಳ ಶ್ರೀಮಂತಿಕೆಗೆ ಪರಿಸರದ ಎಲ್ಲ ಹಿರಿಕಿರಿಯರ ನೆರವು ಸಹಕಾರಗಳು ಸಹ ಮುಖ್ಯವಾಗಿರುತ್ತವೆ. ಇಂಥ ಅವಕಾಶಗಳು ಶಿಶುವಿಹಾರಗಳಲ್ಲಿ ಸಮೃದ್ಧವಾಗಿರುತ್ತವೆ. ಮಗುವಿಗೆ ಬಾಲ್ಯದಲ್ಲಿ ಅನುಭವಗಳ ಶ್ರೀಮಂತ ವಾತಾವರಣ ಸಿಕ್ಕದೇ ಹೋದಲ್ಲಿ, ಅದರ ವರ್ತಮಾನ, ಭವಿಷ್ಯ ಜೀವನವು ಸುಗಮವಾಗಲಾರದು. ಮಗುವಿನ ಬದುಕನ್ನು ರೂಪಿಸುವುದರಲ್ಲಿ ತಾಯಿಯ ಪಾತ್ರವೂ ದೊಡ್ಡದು. ಹಾಗೆಯೇ ಮಗುವಿನ ಮೇಲೆ ನಿಶ್ಚಿತ ಪರಿಣಾಮ ಬೀರಲು ತಕ್ಕ ವಾತಾವರಣ ನಿರ್ಮಿಸಿ, ಅದರ ವೈಯಕ್ತಿಕ ಸಾಮಾಜಿಕ ವಿಕಾಸಗಳಿಗೆ ಯೋಗ್ಯ ಮಾರ್ಗದರ್ಶನ ನೀಡಿ ಅದರ ಅನೇಕ ಭಾವನಾತ್ಮಕ, ಐಚ್ಛಿಕ ಮತ್ತು ಬೌದ್ಧಿಕ ಅವಶ್ಯಕತೆಗಳನ್ನು ತಿಳಿದು ನೆರವಾಗುವುದರಲ್ಲಿ ಕುಟುಂಬದ ಸದಸ್ಯರೆಲ್ಲರೂ ಸಹಕರಿಸಬೇಕಾಗುತ್ತದೆ.

ಗ್ರಾಮೀಣ ಕುಟುಂಬಗಳಲ್ಲಿ ಎರಡೂವರೆಯಿಂದ ಆರು ವರ್ಷದವರೆಗೆ ಬೆಳೆದ ಮಕ್ಕಳು ಶಿಶುವಿಹಾರಗಳಿಗೆ ಬರುತ್ತಾರೆ. ಮಗುವಿನ ಮೊದಲ ಆರು ವರ್ಷಗಳು

ಬಹಳ ಮಹತ್ವದ ಕಾಲ. ಈ ಅವಧಿಯಲ್ಲಿ ಅವರ ಮನಸ್ಸು, ಶೀಲ, ಶಕ್ತಿಗಳು ತೀವ್ರವಾಗಿ ಬೆಳೆಯುವಷ್ಟು ಇನ್ನೆಂದಿಗೂ ಬೆಳೆಯಲಾರವು. ಮಾನಸಿಕ ಆರೋಗ್ಯದ ಅಡಿಗಲ್ಲನ್ನು ಹಾಕಲು ಸರಿಯಾದ ಕಾಲ ಬೇರೊಂದಿಲ್ಲ. ಹುಟ್ಟಿದಾಗ ಅಸಹಾಯಕವಾಗಿದ್ದು ಪರತಂತ್ರವಾಗಿದ್ದ ಕೂಸು ಆರು ವರ್ಷದ್ದಾಗುವಾಗ ಸಾಕಷ್ಟು ಪರಾವಲಂಬನೆಯನ್ನು ಬಿಟ್ಟಿರುತ್ತದೆ. ದೇಹದ ಕೆಲವು ಅಂಗಗಳ ಆಕಾರ ಈ ಕಾಲದಲ್ಲಿಯೇ ನಿಶ್ಚಿತವಾಗುತ್ತದೆ. ಹಾಗೆಯೇ ಮಗುವಿನ ಸ್ವಭಾವದ ಬೆಳವಣಿಗೆಯೂ ಸಹ. ಅದು ತನಗೆ ವಿಶಿಷ್ಟವಾದ ಸ್ವಭಾವವನ್ನು ಈ ಕಾಲದಲ್ಲಿಯೇ ತನ್ನ ಅನುಭವಗಳಿಂದಾಗಿ ನಿಶ್ಚಿತಗೊಳಿಸಿಕೊಳ್ಳುತ್ತದೆ; ಮುಂದೆ ಇದರಲ್ಲಿ ಹೆಚ್ಚು ಬದಲಾವಣೆಯಾಗುವುದಿಲ್ಲ. ಆದಕಾರಣ ಈ ವಯೋವಧಿಯಲ್ಲಿ ಮಗುವಿನ ಶಾರೀರಕ, ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆಗಳು ಆರೋಗ್ಯಕರವಾಗಿ ಬೆಳೆಯುವಂತೆ ನೋಡಿಕೊಳ್ಳಬೇಕು. ಈ ಅವಧಿಯು ಬಹಳ ಸೂಕ್ಷ್ಮವಾದುದೂ ಹೌದು. ಒಂದುವೇಳೆ ಈ ಕಾಲದಲ್ಲಿ ಮಾನಸಿಕ ಬೆಳವಣಿಗೆಯಲ್ಲಿ ತೊಂದರೆಯುಂಟಾದರೆ ಮುಂದೆ ಅದರ ನಿವಾರಣೆಯು ಸಾಧ್ಯವಾಗದೆ ಮಗು ಸಮಸ್ಯೆಯ ಮಗುವಾಗಿ ಪರಿಣಮಿಸಬಲ್ಲದು. ಈ ವಯೋವಧಿಯಲ್ಲಿ ಮಗು ಹೆಚ್ಚು ಕಷ್ಟಪಡದೆ ನಿರಾಯಾಸವಾಗಿ ಬಹಳಷ್ಟು ಜ್ಞಾನ ಸಂಗ್ರಹ ಮಾಡಿಕೊಳ್ಳುತ್ತದೆ. ಈ ಕಾಲದಲ್ಲಿ ಮಗು ಕಲಿಯುವಷ್ಟನ್ನು ದೊಡ್ಡವರಿಗೆ ಕಲಿಯಲು 60 ವರ್ಷ ಬೇಕಾಗುತ್ತದೆಂದು ಮೇಡಂ ಮಾಂಟೆಸ್ಸರಿ ಅಭಿಪ್ರಾಯಪಟ್ಟಿದ್ದಾರೆ. ಮಗುವಿನ ಈ ಬೆಳವಣಿಗೆ ನೈಸರ್ಗಿಕವಾಗಿರುತ್ತದೆ.

ಈ ವಯಸ್ಸಿನಲ್ಲಿ ಮಗುವಿನ ಮೆದುಳಿನ ಬೆಳವಣಿಗೆಯೂ ತೀವ್ರಗತಿಯಲ್ಲಿರುತ್ತದೆ; ಆಗ ಮೆದುಳಿನ ಪೂರ್ಣ ಬೆಳವಣಿಗೆಯ ಮುಕ್ಕಾಲುಪಾಲಿಗಿಂತಲೂ ಹೆಚ್ಚಿನ ಬೆಳವಣಿಗೆಯಾಗುತ್ತದೆ. ಈ ಅವಧಿಯಲ್ಲಿ ಮಕ್ಕಳ ಹಲ್ಲು, ವಸಡುಗಳ ಆರೋಗ್ಯವೂ ಆವಶ್ಯ. ಅನೇಕ ತಾಯಂದಿರು ಬಿದ್ದು ಹೋಗಬಹುದಾದ ಹಲ್ಲುಗಳೆಂದು ಅಲಕ್ಷ್ಯ ಮಾಡುತ್ತಾರೆ. ಈ ಅಲಕ್ಷ್ಯದಿಂದ ಕೆಲವೊಮ್ಮೆ ವಸಡು, ಹಲ್ಲುಗಳ ಆರೋಗ್ಯ ಕೆಡುವುದಲ್ಲದೆ ಮಗುವಿನ ಒಟ್ಟು ಆರೋಗ್ಯದ ಮೇಲೂ ದುಷ್ಪರಿಣಾಮಗಳಾಗುವ ಸಂಭವವಿರುತ್ತದೆ. ಅಲ್ಲದೆ ಈ ವಯಸ್ಸಿನ ಮಕ್ಕಳಿಗೆ ಪೌಷ್ಟಿಕಾಹಾರವೂ ಅತ್ಯವಶ್ಯಕವಾಗಿರುತ್ತದೆ. ತಾಯಿ ಹಾಲಿನ ಅಭ್ಯಾಸ ಬಿಟ್ಟನಂತರ ವಿವಿಧ ಆಹಾರಗಳನ್ನು ರೂಢಿಸಿಕೊಂಡು ಆರೋಗ್ಯವನ್ನು ಕಾಯ್ದುಕೊಳ್ಳುವಂತೆ ಉತ್ತಮ ಪೌಷ್ಟಿಕಾಹಾರದ ಅಭ್ಯಾಸ ಮಾಡಿಸಬೇಕಾಗುತ್ತದೆ. ಜೊತೆಗೆ ಮಕ್ಕಳಿಗೆ ನಿದ್ರೆಯೂ ಅಷ್ಟೇ ಅವಶ್ಯವಿರುತ್ತದೆ. ಅವರ ಕ್ಲುಪ್ತ ಮಲಮೂತ್ರ ವಿಸರ್ಜನೆಯ ಅಭ್ಯಾಸಗಳನ್ನು ಸಹ ಈ ಕಾಲದಲ್ಲಿ ರೂಢಿಸಬೇಕಾಗಿರುತ್ತದೆ. ಹಾಗೆಯೇ ಮೂಗು, ಕಿವಿ, ಗಂಟಲು, ಕಣ್ಣುಗಳ ಆರೋಗ್ಯವನ್ನು ಕಾಯ್ದಿರಿಸಿ ಒಳ್ಳೆಯ ವ್ಯಾಯಾಮ ಶಿಕ್ಷಣಗಳನ್ನು ನೀಡದಿದ್ದಲ್ಲಿ ಮೇಲಿಂದ ಮೇಲೆ ನೆಗಡಿ, ಕೆಮ್ಮು ಹಾಗೂ ಇತರ ಚಿಕ್ಕಪುಟ್ಟ ಕಾಯಿಲೆಗಳನ್ನು ಅನುಭವಿಸು

ತ್ತಾರೆ; ಅಲಕ್ಷ್ಯಮಾಡಿದಲ್ಲಿ ಮುಂದೆ ದೊಡ್ಡ ಕಾಯಿಲೆಗಳಿಗೆ ತುತ್ತಾಗುತ್ತಾರೆ. ಶಿಶುವಿಹಾರದಲ್ಲಿ ಉಪಾಹಾರ ಹಾಗೂ ಆರೋಗ್ಯ ಪರೀಕ್ಷೆಗಳ ಯೋಜನೆ ಇರುತ್ತದೆ. ಇದರಿಂದ ಮಗುವಿನ ಆರೋಗ್ಯ ಸುಧಾರಿಸುವುದಲ್ಲದೆ ಆರೋಗ್ಯದ ಅಭ್ಯಾಸಗಳು ಸಹ ರೂಢವಾಗುತ್ತವೆ.

ಈ ವಯಸ್ಸಿನ ಮಕ್ಕಳ ಶಾರೀರಕ ಚಟುವಟಿಕೆಯಲ್ಲಿ ವಿಶೇಷ ಬೆಳವಣಿಗೆ ಕಂಡುಬರುತ್ತದೆ. ಮಗುವಿನ ಶಕ್ತಿ, ಸ್ನಾಯು ಕ್ರಿಯೆಯ ವೇಗ ಮತ್ತು ನಿರ್ದಿಷ್ಟತೆ ಸಾಕಷ್ಟು ಬೆಳೆದಿರುತ್ತದೆ. ಹತ್ತುವ, ಜಿಗಿಯುವ ಇಲ್ಲವೇ ಓಡುವ ಕ್ರಿಯೆಗಳನ್ನು ಸುಲಭವಾಗಿ ಮಾಡುತ್ತದೆ: ಅಷ್ಟೇ ಅಲ್ಲ ನಡೆಯುವುದಕ್ಕಿಂತ ಓಡುವುದನ್ನೇ ಇಷ್ಟ ಪಡುತ್ತದೆ. ಅವರ ಅನೇಕ ಕ್ರಿಯೆಗಳು ತಾಳಬದ್ಧವಾಗಿರುತ್ತವೆ. ಮಕ್ಕಳ ಈ ತಾಳಲಯಬದ್ಧ ಚಟುವಟಿಕೆಗಳಿಗೆ ಚಾಲನೆ ಕೊಟ್ಟು ಅವರ ಕ್ರಿಯಾಶಕ್ತಿ ಹೆಚ್ಚಿಸ ಬೇಕಾಗುತ್ತದೆ.

ಮಗುವಿಗೆ ಈ ವಯಸ್ಸಿನಲ್ಲಿ ಚಿಕ್ಕದೊಡ್ಡ ಸ್ನಾಯುಗಳ ಸಂಯೋಜನೆಯಿಂದ ಕೆಲಸ ಮಾಡುವುದು ಸಾಧ್ಯವಾಗುವುದರಿಂದ ತನ್ನ ಕೆಲಸವನ್ನು ತಾನೇ ಮಾಡಲು ಇಷ್ಟ ಪಡುತ್ತದೆ. ತನ್ನ ಅಂಗಿಯನ್ನು ತಾನೇ ಹಾಕಿಕೊಳ್ಳುವುದು, ತನ್ನ ಸಾಮಾನುಗಳನ್ನು ತಾನೇ ಒಯ್ದು ಇಡುವುದು, ಕಸ ಗುಡಿಸುವುದು, ಸ್ವಚ್ಛ ಮಾಡುವುದು ಇತ್ಯಾದಿ ಕ್ರಿಯೆ ಗಳನ್ನೆಲ್ಲ ತಾನೇ ಮಾಡಬೇಕೆಂದು ಇಷ್ಟಪಡುತ್ತದೆ. ಮನೆಗಳಲ್ಲಿ ಸಾಮಾನ್ಯವಾಗಿ ಮಗುವಿನ ಈ ಸಾಮರ್ಥ್ಯದ ಬಗ್ಗೆ ಇನ್ನೂ ವಿಶ್ವಾಸವಿರದೆ 'ಬಿದ್ದೀಯ, ಕೆಡವಿ ಬಿಡು ತ್ತೀಯ, ಒಡೆಯುತ್ತೀಯ' ಎಂದು ಹೇಳುವುದರಿಂದ ಅವರ ಆತ್ಮವಿಶ್ವಾಸಕ್ಕೆ ಧಕ್ಕೆ ಯುಂಟಾಗುವ ಸಂಭವವಿರುತ್ತದೆ. ಶಿಶುವಿಹಾರಗಳಲ್ಲಿ ಮಗು ತನ್ನ ಕೆಲಸಕಾರ್ಯ ಗಳನ್ನು ತಾನೇ ಮಾಡಲವಕಾಶವಿರುವುದರಿಂದ ಹಾಗೂ ತನ್ನ ಓರಗೆಯ ಮಕ್ಕಳೂ ಮಾಡುವುದನ್ನು ನೋಡುವುದರಿಂದ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಒಳ್ಳೆಯ ಅವಕಾಶಗಳಿರುತ್ತವೆ.

ಶಿಶುವಿಹಾರದಲ್ಲಿ ಮಗುವಿನ ಬೌದ್ಧಿಕ ಮತ್ತು ಶಾರೀರಕ ಬೆಳವಣಿಗೆಗಳಿಗೆ ಸದವ ಕಾಶ, ಸಹಾಯ ಹಾಗೂ ಪ್ರೋತ್ಸಾಹಗಳು ಸಿಕ್ಕುವಂತೆ ಮಾನಸಿಕ ಬೆಳವಣಿಗೆಗೂ ಹೇರಳಾವಕಾಶ ಹಾಗೂ ನೆರವು ದೊರೆಯುತ್ತದೆ. ಮಗು ಸದೃಢವಾದ ಮಾನಸಿಕ ಆರೋಗ್ಯವುಳ್ಳ ವ್ಯಕ್ತಿಯಾಗಬೇಕು; ಜೀವನದಲ್ಲಿ ಬರಲಿರುವ ಎಡರುತೊಡರುಗಳನ್ನು ಎದುರಿಸಲು ಬೇಕಾದ ಶಕ್ತಿ, ಧೈರ್ಯ ಏಕಾಗ್ರತೆ ಮತ್ತು ಸಂಯಮವೇ ಮುಂತಾದ ಗುಣಗಳನ್ನು ರೂಢಿಸಿಕೊಳ್ಳಬೇಕು; ಹಾಗೆಯೇ ಅದು ಒಳ್ಳೆಯ ಸಮಾಜ ಜೀವಿ ಯಾಗಿಯೂ ಬೆಳೆಯಬೇಕಾಗುತ್ತದೆ. ಶಿಶುವಿಹಾರದಲ್ಲಿ ಕೈಗೊಳ್ಳುವ ವ್ಯಾವಹಾರಿಕ, ಜೀವನದ ಆಟಪಾಟಗಳು, ಮುಕ್ತ ವ್ಯವಸಾಯ, ಕೈಕೆಲಸ ಮುಂತಾದ ಚಟುವಟಿಕೆಗಳು

ಮತ್ತು ಓರಗೆಯ ಗುಂಪಿನ ಮಕ್ಕಳ ಜೊತೆಯಾಗಿ, ಒಂಟಿಯಾಗಿ ಆಟವಾಡುವ ಸಾಕಷ್ಟು ಅವಕಾಶಗಳಿಂದ ಆತ್ಮವಿಶ್ವಾಸ, ಧೈರ್ಯ, ಮುಂದಾಳುತ್ವಗಳ ಬೆಳವಣಿಗೆ ಸಾಧ್ಯವಾಗುತ್ತದೆ. ಅದರ ಭಾವನೆಗಳನ್ನು ಹತ್ತಿಕ್ಕುವುದರಿಂದ ಆಗುವ ಪರಿಣಾಮಗಳು ಅದನ್ನು ಸಮಸ್ಯೆಯ ಮಗುವನ್ನಾಗಿಸುತ್ತದೆ; ಇದರಿಂದಾಗಿ ಬೆರಳು ಚೀಪುವುದು, ಹಾಸಿಗೆಯಲ್ಲಿ ಮೂತ್ರ ಮಾಡುವುದು, ವಿನಾಕಾರಣ ಸಿಟ್ಟಿಗೇಳುವುದು, ಅಳುವುದು, ಉಗುರು ಕಡಿಯುವುದು ಇತ್ಯಾದಿ ದುರಭ್ಯಾಸಗಳನ್ನಾರಂಭಿಸುತ್ತದೆ. ಮಗುವಿನಲ್ಲಿ ತಪ್ಪುಭಾವನೆಗಳುದ್ಭವಿಸಿದ ಬಳಿಕ ಅಥವಾ ಮನಸ್ಸಿನ ಆಘಾತವಾದ ಮೇಲೆ ಅದನ್ನು ಸುಧಾರಿಸಯತ್ನಿಸುವುದಕ್ಕಿಂತ ಇಂಥ ಆಘಾತಗಳೇ ಬಾರದಂತೆ ನೋಡಿಕೊಳ್ಳುವುದು ಉತ್ತಮೋಪಾಯ. ಇದಕ್ಕೆ ತಕ್ಕ ಶಿಕ್ಷಣೋಪಚಾರಗಳು ಶಿಶುವಿಹಾರದಲ್ಲಿ ಸಿಕ್ಕುತ್ತವೆ; ಅದು ಓರಗೆಯವರ ಜೊತೆ ಆಟವಾಡುವಾಗ ತನ್ನ ಹತ್ತಿಕ್ಕಿದ ಮನೋಭಾವನೆಗಳನ್ನು ಕೆಲವೇಳೆ ಹೊರಚೆಲ್ಲಿ ಕಳೆದು. ಇಲ್ಲವೇ ಮರೆತು ಆಟದಿಂದ ಆನಂದ ಪಡೆಯುತ್ತದೆ.

ಹಳ್ಳಿಗಳಲ್ಲಿ ಮಕ್ಕಳ ಸ್ವಚ್ಛತೆಯ ಬಗ್ಗೆ ಹೆಚ್ಚು ಲಕ್ಷ್ಯವೀಯುತ್ತಿಲ್ಲ. ವ್ಯವಸ್ಥಿತತನ, ಶಿಸ್ತು, ವೈಯಕ್ತಿಕ ಆರೋಗ್ಯ, ಸ್ವಚ್ಛತೆಯ ನಿಯಮಗಳನ್ನು ಮಕ್ಕಳು ರೂಢಿಸಿಕೊಳ್ಳುವಲ್ಲಿ ಶಿಶುವಿಹಾರಗಳು ನೆರವಾಗುತ್ತವೆ. ಅಷ್ಟೇ ಅಲ್ಲದೆ ಸಮಾಜವಿಕಾಸ ಯೋಜನೆಗಳು ಹಾಗೂ ಪೌಷ್ಟಿಕ ಆಹಾರ; ಮಕ್ಕಳ, ಮಹಿಳೆಯರ ಸಮ್ಮಿಶ್ರ ಕಾರ್ಯಕ್ರಮ, ಕುಟುಂಬ ಹಾಗೂ ಮಕ್ಕಳ ಕಲ್ಯಾಣ ಮುಂತಾದ ಯೋಜನೆಗಳ ಅಂಗವಾಗಿ ಸಿಕ್ಕುವ ಆಹಾರ ವಿತರಣೆಯ ಮೂಲಕ ಮಕ್ಕಳ ಆರೋಗ್ಯ ಸುಧಾರಿಸುವುದರಲ್ಲಿ ಮತ್ತು ಆಹಾರದ ಬಗ್ಗೆ ಮಕ್ಕಳಿಗೇ ಅಲ್ಲದೆ ಅವರ ತಾಯಂದಿರಿಗೂ ಶಿಕ್ಷಣ ನೀಡುವುದರಲ್ಲಿ ಶಿಶುವಿಹಾರಗಳು ಮಹತ್ವದ ಪಾತ್ರವಹಿಸುತ್ತವೆ. ಅಲ್ಲಿ ಪೌಷ್ಟಿಕ ಆಹಾರದ ಮಹತ್ವ, ಅದನ್ನು ತಯಾರಿಸುವ ರೀತಿ, ಕೊಡಬೇಕಾದ ಪ್ರಮಾಣಗಳ ಬಗ್ಗೆ ತಿಳುವಳಿಕೆ ದೊರೆಯುವುದಲ್ಲದೆ ಆಹಾರಗಳ ತಯಾರಿಕೆಯಲ್ಲಿ ಮಕ್ಕಳಿಗೂ, ಅವರ ತಾಯಂದಿರಿಗೂ ಶಿಕ್ಷಣ ಸಿಕ್ಕುತ್ತದೆ. ತೋಟದ ಕೆಲಸಮಾಡುವಾಗ ಮಕ್ಕಳು ವಿವಿಧ ಆಹಾರದ, ವಿಶೇಷವಾಗಿ ತರಕಾರಿ, ಸೊಪ್ಪು ಹಾಗೂ ಹಣ್ಣುಗಳ ಗಿಡಗಳನ್ನು ಚಿಕ್ಕಪ್ರಮಾಣದಲ್ಲಿ ಬೆಳೆದರೆ ಆಗ ಅವುಗಳ ಬೇಸಾಯ ಹಾಗೂ ಉಪಯೋಗಗಳ ಬಗ್ಗೆ ತಿಳುವಳಿಕೆಯುಂಟಾಗುತ್ತದೆ. ತಾಯಂದಿರಿಗೂ ಕೂಡ ಮಕ್ಕಳ ಆಹಾರ ತಯಾರಿಸುವ, ಹಂಚುವ, ಅದಕ್ಕಾಗಿ ಸಾಮಾನುಗಳನ್ನು ಒದಗಿಸುವ ಅವಕಾಶವಿರುವುದರಿಂದ ಅವರಿಗೂ ಪೌಷ್ಟಿಕ ಆಹಾರದ ಶಿಕ್ಷಣ ಸಿಕ್ಕುತ್ತದೆ. ಇಂದು ಸಮಾಜವಿಕಾಸ ಯೋಜನೆಯ ಅಂಗವಾಗಿ ಅನೇಕಾನೇಕ ಹಳ್ಳಿಗಳಲ್ಲಿ ಶಿಶುವಿಹಾರಗಳು ಪ್ರಾರಂಭವಾಗಿವೆ. ಈ ದಿಸೆಯಲ್ಲಿ ಬಹಳಷ್ಟು ಹಣ ಖರ್ಚುಮಾಡಿದರೆ ಮಾತ್ರ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಲು ಸಾಧ್ಯವೆಂಬುದು ಕೆಲವರ ಅಭಿಪ್ರಾಯ. ಶಾಸ್ತ್ರೀಯವಾಗಿ ತಯಾರಿಸಿದ ಶಿಕ್ಷಣದ ಉಪಕರಣಗಳು, ಆಟಿಕೆಗಳು ಮತ್ತಿತರ ಸಾಧನಗಳು ಬಹಳ ಬೆಲೆಯುಳ್ಳವಾಗಿವೆ. ಅವುಗಳನ್ನು ಗ್ರಾಮೀಣ ಶಿಶುವಿಹಾರಗಳಿಗೆ

ಪೂರೈಸುವುದು, ಅನೇಕ ಕಡೆಗಳಲ್ಲಿ ಸಾಧ್ಯವಿಲ್ಲ: ಹಾಗೇದು ಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡಿಕೊಡದೆ ಇದ್ದರೆ ಅವರ ಬೆಳವಣಿಗೆಯ ಈ ಮಹತ್ವದ ಕಾಲ ವ್ಯರ್ಥವಾಗಿ ಹೋಗುತ್ತದೆ. ಅಷ್ಟೇ ಅಲ್ಲ, ತಪ್ಪು ಅಭ್ಯಾಸಗಳು ರೂಢಿಯಾಗಿ ಯಾವುದೇ ಕಾರಣದಿಂದ ಮಾನಸಿಕ ಆಘಾತ ಉಂಟಾದರೂ ಸಮಸ್ಯೆಯ ಮಕ್ಕಳಾಗಿ ಪರಿಣಮಿಸುವುದು ಮಾತ್ರವಲ್ಲ ಅವರ ತಿದ್ದಿಕೆಗೂ ಬಹಳ ಶ್ರಮಪಡಬೇಕಾಗುತ್ತದೆ. ಹಾದಿ ತಪ್ಪಿದ ಬಳಿಕ ತಿದ್ದುವುದಕ್ಕಿಂತ ಮೊದಲಿಗೆ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಂಡು, ತನ್ನ ಶಕ್ತಿಯನ್ನು ದೈಹಿಕವಾಗಿ, ಬೌದ್ಧಿಕವಾಗಿ, ಮಾನಸಿಕವಾಗಿ ಬೆಳೆಸಿಕೊಂಡು ಸಮಾಜದ ಒಬ್ಬ ಉತ್ತಮ ಪ್ರಜೆಯಾಗಿ ಬಾಳುವಂತೆ ತಯಾರಿಮಾಡುವುದೇ ಉತ್ತಮವಲ್ಲ. ಅನೇಕ ಹಳ್ಳಿಗಳಲ್ಲಿ ಶಿಶುವಿಹಾರ ಶಿಕ್ಷಣದ ಬಗ್ಗೆ ಜಾಗೃತಿ ಇದೆ. ಆದರೆ ಅದು ಉಪಯುಕ್ತವಾಗಿ ನಡೆಯುವಂತಿರಬೇಕಾದರೆ ಹಲಕೆಲವು ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುತ್ತದೆ. ಸರಕಾರದಿಂದ, ಜನತೆಯಿಂದ ಸಿಗುವಂಥ ಸಹಾಯದಿಂದ ಮಕ್ಕಳಿಗೆ ಕೇವಲ ಆಹಾರ ಮಾತ್ರ ಒದಗಿಸಿದರೆ ಸಾಲದು: ಮೂರು ನಾಲ್ಕು ತಾಸುಗಳವರೆಗೆ ಅವರನ್ನು ಒಂದೆಡೆ ಸೇರಿಸಿ ನಾಲ್ಕು ಹಾಡು, ನಾಲ್ಕು ಆಟ ಹೇಳಿದರೆ ಸಾಲದು: ಅವರ ಶಿಕ್ಷಣ ಶಾಸ್ತ್ರೀಯವಾಗಿದ್ದು ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗಬೇಕು. ಗ್ರಾಮದಲ್ಲಿ ಸಿಗತಕ್ಕ ನೈಸರ್ಗಿಕ ವಾತಾವರಣ, ಸುಲಭದಲ್ಲಿ ಸಿಗತಕ್ಕ ವಸ್ತುಗಳಿಂದಲೇ ಮಕ್ಕಳ ಶಿಕ್ಷಣವನ್ನು ಸಮರ್ಥವಾಗಿ ನಡೆಸಲು ಸಾಧ್ಯ. ಇದಕ್ಕೆ ಶಿಕ್ಷಕರು ಹಾಗೂ ಪಾಲಕರು ಒಟ್ಟಾಗಿ ಪ್ರಯತ್ನಿಸಿದಲ್ಲಿ ಮಗುವಿನ ವಿಕಾಸ ಚೆನ್ನಾಗಿ ಆಗಬಲ್ಲದು.

ಅಧ್ಯಾಯ 2

ಶಿಶುವಿಹಾರ ಸಂಘಟನೆ

ಹಳ್ಳಿಗಳಲ್ಲಿ ಶಿಶುವಿಹಾರಗಳನ್ನು ಪ್ರಾರಂಭಿಸುವುದು ಸುಲಭಧ ಕೆಲಸವಲ್ಲ. ಈ ಬಗೆಯ ಶಿಕ್ಷಣ ಅನೇಕರಿಗೆ ಹೊಸದು. ಮಕ್ಕಳು ಕುಟುಂಬದವರನ್ನೇ ಹೆಚ್ಚಾಗಿ ಹೊಂದಿಕೊಂಡು ಬೆಳೆದಿರುವುದರಿಂದ ಅವರನ್ನೆಲ್ಲ ಬಿಟ್ಟು ಶಿಶುವಿಹಾರಗಳಿಗೆ ಬರಲು ಮೊದಮೊದಲು ಇಷ್ಟಪಡುವುದಿಲ್ಲ. ತಂದೆತಾಯಿಗಳು ಹೊಲಗೆಲಸಕ್ಕೆ ಹೋದರೆ ಮನೆಯಲ್ಲಿಯ ಅಣ್ಣನೋ, ಅಕ್ಕನೋ ಈ ಚಿಕ್ಕ ಮಗುವನ್ನು ಕಂಕುಳಲ್ಲಿ ಎತ್ತಿಕೊಂಡು ತಾನು ಹೋದಲ್ಲೆಲ್ಲ, ಕರೆದುಕೊಂಡು ಹೋಗುತ್ತಿರುತ್ತಾರೆ. ಹೀಗಾಗಿ ಮಗುವಿಗೆ ಸ್ವೇಚ್ಛೆಯಿಂದ ತಿರುಗಾಡುವುದು ಬಹಳ ಇಷ್ಟವಾಗಿರುತ್ತದೆ. ಈ ಎಲ್ಲ ಪರಿಸ್ಥಿತಿಯನ್ನು ತಿಳಿದು ಶಿಕ್ಷಕಿ, ಈ ವಯಸ್ಸಿನ ಮಕ್ಕಳ ತಂದೆತಾಯಿಗಳಿಗೆ ತಿಳಿಹೇಳಿ ಶಿಶುವಿಹಾರಕ್ಕೆ ಬರತಕ್ಕ ಒಟ್ಟು ಮಕ್ಕಳ ಸಂಖ್ಯೆಯನ್ನು ಕಂಡುಹಿಡಿದು ಒಟ್ಟುಗೂಡಿಸುತ್ತ ಹೋಗಬೇಕು. ಮೊದಲಿಗೆ ಈ ಚಿಕ್ಕಮಕ್ಕಳ ಅಣ್ಣ-ಅಕ್ಕಂದಿರನ್ನು ಸೇರಿಸಿಕೊಂಡು ಆಟಪಾಟಗಳನ್ನಾಡಿಸುತ್ತಾ, ಅವರ ಸಹಾಯ ಪಡೆದು ಅಥವಾ ಅವರನ್ನೂ ಸೇರಿಸಿಕೊಂಡು ಶಿಶುವಿಹಾರವನ್ನು ಪ್ರಾರಂಭಿಸಬೇಕು. ಈ ಚಿಕ್ಕ ಮಕ್ಕಳಿಗೆ ಶಿಕ್ಷಕಿಯ ಪರಿಚಯ ಹೆಚ್ಚಾದಂತೆ, ಆಕೆಯಲ್ಲಿ ವಿಶ್ವಾಸ ಬೆಳೆದಂತೆ ದೊಡ್ಡ ಮಕ್ಕಳನ್ನು ಕಾರ್ಯಕ್ರಮದಲ್ಲಿ ನೇರವಾಗಿ ಸೇರಿಸದೆ ಪರೋಕ್ಷವಾಗಿ ಅಂದರೆ ಪುಟ್ಟಮಕ್ಕಳನ್ನು ಮನೆಯಿಂದ ಶಾಲೆಗೆ ಕಳಿಸುವುದಕ್ಕೆ ಮುಂಚೆ ಸ್ವಚ್ಛ ಮಾಡುವುದು. ಸ್ನಾನ ಮಾಡಿಸುವುದು. ಮನೆಗಳಲ್ಲಿ ಊಟ ಮಾಡಿಸುವುದು ಇತ್ಯಾದಿ ಕಾರ್ಯಗಳಲ್ಲಿ ಅವರ ಸಹಾಯ ಪಡೆಯಬೇಕು. ಹೀಗೆ ಚಿಕ್ಕ ಮಕ್ಕಳ ಜೊತೆಯಲ್ಲಿ ದೊಡ್ಡ ಮಕ್ಕಳ ಮತ್ತು ತಾಯಂದಿರ ಸಹಾಯವನ್ನು ಪಡೆಯುವುದರಿಂದ ಆ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಸಹಾಯ ಸಿಗುತ್ತದೆ. ಇದಲ್ಲದೆ ದೊಡ್ಡ ಮಕ್ಕಳನ್ನು ಸಹ ಶಾಲೆಗೆ ಕಳುಹಿಸಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಹೀಗೆ ಮಕ್ಕಳ ಕುಟುಂಬದ ಸದಸ್ಯರುಗಳ ಸಹಾಯ, ಸಹಕಾರ ಪಡೆಯುವುದಲ್ಲದೆ ಗ್ರಾಮದ ಪ್ರಮುಖರ ಸಹಾಯವನ್ನೂ ಪಡೆದುಕೊಳ್ಳಬೇಕಾಗುತ್ತದೆ. ಶಿಶುವಿಹಾರಕ್ಕೆ ಬೇಕಾದ ಕಟ್ಟಡ ಸ್ಥಳಗಳನ್ನು ದೊರಕಿಸುವಲ್ಲಿ ಮತ್ತು ಆಹಾರ ವಿತರಣೆ ಮತ್ತಿತರ ಕಾರ್ಯಗಳಿಗೆ ಬೇಕಾಗುವ ವಂತಿಗೆಯನ್ನು ಸಂಗ್ರಹಿಸುವಲ್ಲಿ ಗ್ರಾಮ ಪ್ರಮುಖರ ಸಹಾಯ ಪಡೆಯಬೇಕು. ಈ ದಿಸೆಯಲ್ಲಿ ಮಕ್ಕಳ ಕಾರ್ಯಚಟುವಟಿಕೆ ಹಾಗೂ ಪ್ರಗತಿಗಳನ್ನು ಅವರಿಗೆ ತಿಳಿಸುವುದರಿಂದ ಅವರಿಂದ ಹೆಚ್ಚಿನ ಸಹಕಾರ ಪಡೆಯಲು ಸಾಧ್ಯವಾಗುತ್ತದೆ. ಶಿಕ್ಷಕಿ, ಮಕ್ಕಳ ಆರೋಗ್ಯ ಪರೀಕ್ಷೆ ಮತ್ತು ಮಕ್ಕಳ ವೈಯಕ್ತಿಕ ಪ್ರಗತಿ

ಪತ್ರಿಕೆಗಳ ಮುಖಾಂತರ ಆಗಿರತಕ್ಕ ಬದಲಾವಣೆಗಳನ್ನು ಪಾಲಕರಿಗಲ್ಲದೆ ಶಿಶುವಿಹಾರ ಸಂಚಾಲಕರಿಗೂ ತಿಳಿಸಬಹುದು. ಮಕ್ಕಳ ಪಾಲಕರ ದಿನಾಚರಣೆ ಮುಂತಾದ ಸಮಾರಂಭಗಳನ್ನು ಏರ್ಪಡಿಸುವುದರಿಂದ ಮಕ್ಕಳ ಚಟುವಟಿಕೆಗಳನ್ನು 'ತೋರಿಸಬಹುದಲ್ಲದೆ, ಶಿಶುವಿಹಾರಕ್ಕೆ ಬೇಕಾದ ಆವಶ್ಯಕತೆಗಳು ಮತ್ತು ಆ ದಿಸೆಯಲ್ಲಿ ಅವರು ಸಹಾಯ ಮಾಡಬಹುದಾದ ವಿಧಾನಗಳನ್ನು ಕುರಿತು ಚರ್ಚಿಸಬಹುದು. ಸಮಾರಂಭಗಳಲ್ಲಿ ಮಕ್ಕಳು ಪಾಲಕರೆದುರಿಗೆ ಹಾಡು, ಕಥೆ, ಚಿತ್ರಪ್ರದರ್ಶನ, ನಾಟಕ, ಸಂಭಾಷಣೆ, ಗೊಂಬೆಯಾಟ ಇವುಗಳನ್ನು ಪ್ರದರ್ಶಿಸಿದರೆ ಎಂಥವರಿಗೂ ಆಶ್ಚರ್ಯವೆನಿಸುವುದು.

ಮಕ್ಕಳ ಮನೆಯವರ ಪರಿಚಯ ಮಾಡಿಕೊಂಡು ಮಕ್ಕಳ ಬೆಳವಣಿಗೆಯಲ್ಲಿ ಅವರ ಸಹಾಯ ಪಡೆಯುವುದು ಶಿಶುವಿಹಾರದ ಶಿಕ್ಷಕಿಗೆ ಅಗತ್ಯ. ಅದಕ್ಕಾಗಿ ಆಕೆ ಮಕ್ಕಳ ಮನೆಗೆ ಆಗಾಗ ಹೋಗಿ ವಿಶೇಷವಾಗಿ ಮಕ್ಕಳ ತಾಯಂದಿರನ್ನು ಭೇಟಿಮಾಡಬೇಕಲ್ಲದೆ ಅವರನ್ನೂ ಆಗಾಗ್ಗೆ ಶಿಶುವಿಹಾರಕ್ಕೆ ಬರುವಂತೆ ಆಹ್ವಾನಿಸಬೇಕು. ಇದರಿಂದ ಮಗುವಿನ ಪ್ರಗತಿಯಲ್ಲಿ ಬರತಕ್ಕ ಅಡಚಣೆಗಳು, ಕುಟುಂಬದಲ್ಲಿ ಮಗುವಿನ ಸ್ಥಾನ, ಅದರ ಸ್ವಭಾವ ಇತ್ಯಾದಿ ಮಾಹಿತಿಗಳನ್ನು ಸಂಗ್ರಹಿಸಲು ಸಾಧ್ಯವಾಗುತ್ತದೆ. ಹಾಗೆಯೇ ಮಕ್ಕಳ ಆರೋಗ್ಯ ಮತ್ತು ಬೆಳವಣಿಗೆಗೆ ಅಗತ್ಯವಿರುವ ಕೆಲವು ಸಲಹೆಗಳನ್ನು ತಾಯಂದಿರಿಗೆ ತಿಳಿಸಲು ಸಾಧ್ಯವಾಗುತ್ತದೆ. ಶಿಕ್ಷಕಿ ಕುಟುಂಬದ ಹಿತೈಷಿಯಂತೆ ಆಗಬೇಕು. ಮಕ್ಕಳನ್ನು ಹಳ್ಳಿಗರ ತೋಟ ಹೊಲಗಳಲ್ಲಿ ಬೆಳೆಯಿರುವಾಗ ಪ್ರವಾಸ ಕರೆದುಕೊಂಡು ಹೋಗಬೇಕು. ಗ್ರಾಮದವರು ಮಕ್ಕಳ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಷ್ಟಪಡುತ್ತಾರೆ. ಮಕ್ಕಳೂ ಕೂಡ ಈ ಪ್ರವಾಸದಲ್ಲಿ ಅನೇಕ ವಿಷಯಗಳನ್ನು ನಿಸರ್ಗದ ಮಡಿಲಲ್ಲಿ ಕಲಿಯಲು ಸಾಧ್ಯವಾಗುತ್ತದೆ.

ಹಳ್ಳಿಗಳಲ್ಲಿ ಉತ್ಸವ ಪ್ರಸಂಗಗಳು ಕಡಮೆಯಿದ್ದರೂ ಕೆಲವಾದರೂ ಹಬ್ಬ, ಜಾತ್ರೆಗಳು, ಜರುಗುತ್ತವೆ. ಶಿಶುವಿಹಾರ ಶಿಕ್ಷಕಿ ಅವರೊಂದಿಗೆ ಒಂದಾಗಿ ಈ ಸಮಾರಂಭಗಳಲ್ಲಿ ತಾನೂ ಭಾಗವಹಿಸಬೇಕು. ಅವರ ರೀತಿನೀತಿಗಳನ್ನು ತಿಳಿಯಬೇಕು. ಅವರೊಡನೆ ಒಂದಾಗಬೇಕು. ಅದೇ ಪ್ರಕಾರ ಯಾರ ಮನೆಯಲ್ಲಿ ಮರಣವಾದರೂ, ಕಾಯಿಲೆ ಇದ್ದರೊ ಅಂಥವರ ಮನೆಗಳಿಗೆ ಭೇಟಿಯಿತ್ತು ತನ್ನ ಸಹಾನುಭೂತಿ ವ್ಯಕ್ತಪಡಿಸಬೇಕು. ಆದರೆ ಗ್ರಾಮದ ಜಗಳ, ಪಕ್ಷ, ಪಂಗಡ ದ್ವೇಷ, ಅಸೂಯೆಗಳಿಂದ ದೂರವಿರಬೇಕಲ್ಲದೆ ತನ್ನ ಸಂಸ್ಥೆಯನ್ನೂ ದೂರವಾಗಿಡಬೇಕು : ಆದಾಗ್ಯೂ ಮಕ್ಕಳ ಅಥವಾ ಹಳ್ಳಿಯ ಕಲ್ಯಾಣ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ಹಳ್ಳಿಯಲ್ಲಿ ಯಾವುದಾದರೂ ಸೋಂಕು ರೋಗ ಹಬ್ಬಿದಾಗ ಹಳ್ಳಿಗರಿಗೆ ತಿಳಿವಳಿಕೆ ಕೊಡುವುದಲ್ಲದೆ, ಸ್ವಚ್ಛತೆ ಮುಂತಾದ ಆರೋಗ್ಯ ನಿಯಮಗಳನ್ನು ಪಾಲಿಸಲು ಸಹಾಯ ಮಾಡಬೇಕು. ಮಕ್ಕಳಿಗೆ ಜಂತುಗಳು ಆಗಿರುತ್ತವೆ ; ಕಣ್ಣುಬೇನೆ ಬರುತ್ತದೆ ; ಕಜ್ಜಿಗಳಾಗಿರುತ್ತವೆ. ಇಂಥ ಚಿಕ್ಕಪುಟ್ಟ ಕಾಯಿಲೆಗಳಿಗೆ ಔಷಧೋಪಚಾರಗಳನ್ನು ಸಹ ಆಕೆ ತಿಳಿದಿರಬೇಕು.

ಸ್ಥಳ, ಕಟ್ಟಡ : ಗ್ರಾಮಗಳಲ್ಲಿ ವಿಶಾಲವಾದ ದೊಡ್ಡ ದೊಡ್ಡ ಕಟ್ಟಡಗಳಿರುವುದಿಲ್ಲ. ಹೀಗಾಗಿ ಶಿಶುವಿಹಾರಗಳಿಗೆ ಯೋಗ್ಯವಾದ ಮನೆ ಸಿಕ್ಕುವುದೂ ಕಷ್ಟ. ಕೆಲವು ಕಡೆ ಮಠ, ಗುಡಿ, ಚಾವಡಿ ಅಥವಾ ಯಾರದೋ ಜಗಲಿಯ ಮೇಲೋ ಶಿಶುವಿಹಾರಗಳನ್ನು ನಡೆಸುವ ಪ್ರಸಂಗ ಬರಬಹುದು. ಆದಕಾರಣ ಗುಡಿಸಲಾದರೂ ಸರಿ ಸುರಕ್ಷಿತವಾದ, ವಿಶಾಲವಾದ ಸ್ಥಳಾವಕಾಶ ಸಿಕ್ಕುವಂತೆ ಪ್ರಯತ್ನಿಸಬೇಕು ಮಾತ್ರವಲ್ಲ, ಆರೋಗ್ಯದ ದೃಷ್ಟಿಯಿಂದ ಸಾಕಷ್ಟು ಗಾಳಿ ಬೆಳಕು ಇದ್ದು ಸುತ್ತಲೂ ಕೊಳಚೆ ಇಲ್ಲದಂಥ ಪ್ರದೇಶವನ್ನು ಆಯ್ಕೆಮಾಡಿಕೊಳ್ಳಬೇಕು. ಹತ್ತಿರದಲ್ಲಿ ತಿಪ್ಪೆಗಳೇನಾದರೂ ಇದ್ದರೆ ಮೊದಲು ಅವನ್ನು ತೆಗೆಸಬೇಕು. ಊರಿನಿಂದ ದೂರ ಹೊರಗೆ ಬಾಲವಾಡಿ ಇರುವುದಕ್ಕಿಂತ ಊರ ಹತ್ತಿರ ಅಥವಾ ಊರ ಮಧ್ಯದಲ್ಲಿ ಇರುವಂತೆ ನೋಡಿಕೊಳ್ಳಬೇಕು. ಇದರಿಂದ ಮಕ್ಕಳು ತಾವಾಗಿಯೇ ಶಿಶುವಿಹಾರಕ್ಕೆ ಬರಲು ಸಾಧ್ಯವಾಗುತ್ತದೆ. ಶಿಶುವಿಹಾರದ ಸುತ್ತಲೂ ಸ್ವಲ್ಪ ಖಾಲಿ ಸ್ಥಳವಿದ್ದು ಮಕ್ಕಳು ಚಿಕ್ಕದಾದರೂ ಒಂದು ಕೈತೋಟ ಮಾಡಿ ಅದರಲ್ಲಿ ಸೊಪ್ಪು, ತರಕಾರಿ, ಹೂವುಗಳನ್ನು ಕೆಲವಟ್ಟಿಗಾದರೂ ಬೆಳೆಯುವಂತಿರಬೇಕು. ಹಾಗೆಯೇ ಅಂಗಳದಲ್ಲಿ ದೊಡ್ಡಮರವೊಂದಿದ್ದರೆ ಮಕ್ಕಳ ಜೊತೆ ಕುಳಿತು ಆಟವಾಡಲು, ಗುಂಪಿನ ಚಟುವಟಿಕೆಗಳನ್ನು ನಡೆಸಲು ಅನುಕೂಲಕರ.

ಕೈಕಾಲು ತೊಳೆಯಲು, ಮಲಮೂತ್ರ ವಿಸರ್ಜನೆಗೆ ಹೋಗಲು, ಪಾತ್ರೆ ತೊಳೆಯಲು, ಕಸ ಹಾಕಲು, ಉಗುಳುವಿಕೆ ಮುಂತಾದ್ದಕ್ಕೆ ಪ್ರತ್ಯೇಕ ಸ್ಥಳವಿರಬೇಕು. ಮಕ್ಕಳಿಗೆ ಮಲಮೂತ್ರ ವಿಸರ್ಜನೆಯ ಸರಿಯಾದ ಪದ್ಧತಿ ಕಲಿಸುವುದು ಬಹಳ ಅವಶ್ಯ. ಮನೆಗಳಲ್ಲಿ ಈ ಬಗ್ಗೆ ಗಮನ ಕೊಡುವುದಿಲ್ಲವಾದ್ದರಿಂದ ಇದಕ್ಕೆ ಶಿಕ್ಷಕಿಯೇ ಹೆಚ್ಚು ಲಕ್ಷ್ಯವೀಯಬೇಕು. ಆಳವಲ್ಲದ ಉದ್ದವಾದ ತಗ್ಗು ತೆಗೆಸಿ ಅದರ ಮೇಲೆ ಮರದ ಹಲಗೆ ಜೋಡಿಸಿ ಮಕ್ಕಳಿಗೆ ಪಾಯಖಾನೆ (ಕಕ್ಕಸ) ಯಂತೆ ಉಪಯೋಗಿಸಲು ಕಲಿಸಬಹುದು. ತಗ್ಗು ತುಂಬಿದ ಮೇಲೆ ಅದರ ಮೇಲೆ ಮಣ್ಣು ಹಾಕಿ ಮುಚ್ಚಿಸಿ ಬೇರೆ ತಗ್ಗು ತೆಗೆಸಬೇಕು. ತುಂಬಿದ ತಗ್ಗನ್ನು ಸಾಧ್ಯವಿದ್ದರೆ ಸ್ವಚ್ಛಮಾಡಿಸಬೇಕು ; ಇಲ್ಲವಾದಲ್ಲಿ ಶೌಚಕ್ಕೆ ಹೋಗಿ ಬಂದಮೇಲೆ ಅದರ ಮೇಲೆ ಮಣ್ಣು ಹಾಕುವಂತೆ ಮಕ್ಕಳಿಗೆ ಕಲಿಸಬೇಕು. ಹಾಗೆಯೇ ಮೂತ್ರ ವಿಸರ್ಜನೆಗೂ ಇಂಥ ನಿಶ್ಚಿತ ಸ್ಥಳ ಇರಬೇಕು. ಇದಕ್ಕಾಗಿ $3 \times 3 \times 3$ ಅಡಿ ತಗ್ಗು ತೆಗೆದು ಅದರ ಮೇಲೆ ಹುಲ್ಲಿನ ಪದರ ಹಾಕಬೇಕು. ಅದು ಬಹಳ ಹಳೆಯದಾದಾಗ ತೆಗೆಸಿ ಹೊಸಹುಲ್ಲನ್ನು ಹಾಕಬೇಕು. ಈ ತೆಗೆದ ಹುಲ್ಲನ್ನು ತಿಪ್ಪೆಗೆ ಗೊಬ್ಬರಕ್ಕಾಗಿ ಹಾಕಬಹುದು. ಹಾಗೆಯೇ ಮಕ್ಕಳು ಕೈಕಾಲು ತೊಳೆದ ನೀರು, ಪಾತ್ರೆತೊಳೆದ ನೀರು ರಸ್ತೆಗೆ ಹೋಗಲು ಬಿಡದೆ, ಮಕ್ಕಳು ಮಾಡಿದ ತೋಟದ ಗಿಡಗಳಿಗೆ ಹರಿಯುವಂತೆ ಮಾರ್ಗಮಾಡಿರಬೇಕು. ಶಿಶುವಿಹಾರವೆಲ್ಲೇ ಇರಲಿ ಅಲ್ಲಿ ಮಲಮೂತ್ರ ವ್ಯವಸ್ಥೆ, ಕೈಕಾಲು ತೊಳೆಯುವ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಕಸಹಾಕುವ ವ್ಯವಸ್ಥೆಗಳು ಇರಲೇಬೇಕು.

ವಿವಿಧ ಚಟುವಟಿಕೆಗಳಿಗಾಗಿ ಉಪಯೋಗಿಸುವ ವಸ್ತುಗಳಿಗೆ ಸ್ಥಳಗಳನ್ನು ನಿಶ್ಚಿತವಾಗಿಡಬೇಕು. ಇದರಿಂದ ಮಕ್ಕಳಿಗೆ ತಮಗೆ ಬೇಕಾದ ಸಾಮಾನುಗಳನ್ನು ತಂದು ಮನದಣಿಯೆ ಆಡಿ ಮುಗಿಸಿದ ಬಳಿಕ ಮತ್ತೆ ಅದೇ ಸ್ಥಳದಲ್ಲಿಡಲು ಅಭ್ಯಾಸವಾಗುತ್ತದೆ. ತತ್ಫಲವಾಗಿ ಮಕ್ಕಳಲ್ಲಿ ವ್ಯವಸ್ಥಿತತನ, ಕೆಲಸವನ್ನು ಸುಲಭದಲ್ಲಿ ಸಮರ್ಥವಾಗಿ ಮಾಡುವ ಅಭ್ಯಾಸ ಬೆಳೆಯುತ್ತದೆ. ಈ ದಿಸೆಯಲ್ಲೂ ಶಿಕ್ಷಕಿ ತನ್ನ ಶಿಶುವಿಹಾರದ ಪರಿಸ್ಥಿತಿ, ಸಿಗತಕ್ಕ ಸಲಕರಣೆ ಸಾಧನಗಳಿಗನುಗುಣವಾಗಿ ಯೋಜನೆ . ಹಾಕಿಕೊಂಡು ಮುನ್ನಡೆಯಬಹುದು.

ಬಾಲವಾಡಿ (ಶಿಶುವಿಹಾರ) ಶಿಕ್ಷಕಿ : ಶಿಶುವಿಹಾರಕ್ಕೆ ಬರತಕ್ಕ ಮಗು ತನ್ನ ಕುಟುಂಬದ ಜನರ ಪ್ರೀತಿ, ರಕ್ಷಣೆಗಳಲ್ಲಿ ಬೆಳೆದಿದ್ದು ಅದೇ ಹೊರ ಜಗತ್ತಿಗೆ ಅಡಿಯಿಟ್ಟಿರುತ್ತದೆ. ಸಮಾಜ, ಸಹಪಾಠಿಗಳೊಂದಿಗೆ ಬೆಳೆಯಲು ಅಷ್ಟೇ ಕಾತರದಿಂದಿರುತ್ತದೆ. ತನ್ನ ಸುತ್ತಲಿನ ಜಗತ್ತಿನ ಬಗ್ಗೆ ಹೆಚ್ಚು ಹೆಚ್ಚು ತಿಳಿದು ಅದರ ಮೇಲೆ ತನ್ನ ಹತೋಟಿ ಸಾಧಿಸಲು ಯತ್ನಿಸುತ್ತದೆ. ಶಿಕ್ಷಕಿಯಾದವಳು ಮಗುವಿನ ಈ ಸ್ಥಿತಿಯನ್ನು ಚೆನ್ನಾಗಿ ಅರಿತುಕೊಳ್ಳಬೇಕು. ಅದಕ್ಕೆ ಬೇಕಾದ ಪ್ರೀತಿಯನ್ನೆರೆದು ಸುರಕ್ಷಿತತೆಯ ಅನುಭವಗಳನ್ನು ಒದಗಿಸಿಕೊಟ್ಟು ಆತ್ಮಾಭಿಮಾನ ಬೆಳೆಯುವಂತೆ ಅವಕಾಶಮಾಡಿಕೊಡಬೇಕು. ಮಗುವಿಗೆ ವಿಷಯ ತಿಳಿಯಲು, ಕಾರ್ಯಸಾಧಿಸಲು ಸಮಯ ಹಿಡಿಯುವುದೆಂತಲೋ ಅಥವಾ ಅದು ಅಸಮರ್ಥವಾಗಿದೆಯೆಂತಲೋ ಅದನ್ನೆಲ್ಲ ತಾನೇ ಮಾಡದೇ ಮಗು ತನ್ನ ಗುರಿ, ಕಾರ್ಯಗಳನ್ನು ತಾನೇ ಸಾಧಿಸುವಂತೆ ತಕ್ಕ ವಾತಾವರಣ, ಸಹಾಯ, ಸೌಲಭ್ಯಗಳನ್ನು ಒದಗಿಸಬೇಕು. ಈ ದಿಸೆಯಲ್ಲಿ ಮಕ್ಕಳ ಬಗ್ಗೆ ಸಹಾನುಭೂತಿಯಿರಬೇಕೇ ಹೊರತು ಎಂದಿಗೂ ಪರಾವಲಂಬಿಗಳಾಗುವಂತೆ ಮಾಡಬಾರದು.

ಶಿಕ್ಷಕಿಯಾದವಳು ಮಗುವಿನ ಸರ್ವಾಂಗೀಣ ವಿಕಾಸಕ್ಕಾಗಿ ಮಕ್ಕಳ ಪಾಲಕರೊಂದಿಗೆ ಸಂಪರ್ಕವಿಟ್ಟುಕೊಳ್ಳಬೇಕು. ಮಗು ಬಾಲವಾಡಿಯಲ್ಲಿ 3–4 ತಾಸು ಇದ್ದರೆ, ಉಳಿದೆಲ್ಲ ವೇಳೆಯನ್ನು ಮನೆಯಲ್ಲಿಯೇ ಕಳೆಯುತ್ತದೆ. ಸಾಮಾನ್ಯವಾಗಿ ಕುಟುಂಬದಲ್ಲಿಯ ವಾತಾವರಣ, ಸಂಪ್ರದಾಯ, ಹಿರಿಯರ ವರ್ತನೆ ಇತ್ಯಾದಿಗಳು ಮಗುವಿನ ಮನಸ್ಸಿನ ಮೇಲೆ, ನಡವಳಿಕೆಯ ಮೇಲೆ ಬಹಳಷ್ಟು ಪರಿಣಾಮ ಬೀರುತ್ತವೆ. ಇವುಗಳನ್ನರಿಯದೆಯೇ ಶಿಕ್ಷಕಿಗೆ ಮಗುವಿನ ಮನಸ್ಸು, ನಡೆವಳಿಕೆಗಳು ಸರಿಯಾಗಿ ಅರ್ಥವಾಗುವುದಿಲ್ಲ. ಅಷ್ಟೇ ಅಲ್ಲ, ಶಿಶುವಿಹಾರದಲ್ಲಿ ರೂಢಿಗೆ ತಂದ ಕೆಲವು ವಿಷಯ, ಅಭ್ಯಾಸಗಳ ಅನುಸರಣೆ ಇತ್ಯಾದಿಗಳು ಅಂತೆಯೇ ಕುಟುಂಬದಲ್ಲೂ ಸಹ ಸಾಮಾನ್ಯವಾಗಿ ಅನುಸರಣೆಗೆ ಬಾರದೇ ಹೋದಲ್ಲಿ ಆಕೆಯು ಅದಕ್ಕಾಗಿ ಪಟ್ಟ ಶ್ರಮವು ವ್ಯರ್ಥವಾಗಬಹುದು. ಅದಕಾರಣ ಶಿಕ್ಷಕಿಯಾದವಳು ಪಾಲಕರೊಂದಿಗೆ ಅದರಲ್ಲೂ ವಿಶೇಷವಾಗಿ ಮಕ್ಕಳ ತಾಯಂದಿರೊಡನೆ ಹೆಚ್ಚು ಸಂಪರ್ಕವಿಟ್ಟುಕೊಳ್ಳಬೇಕಾದುದು ಅನಿವಾರ್ಯ.

ಮಕ್ಕಳ ಆರೋಗ್ಯ ಪರೀಕ್ಷೆ ಮಾಡಿಸಿ ಅದರ ವಿವರಗಳನ್ನು ಪಾಲಕರಿಗೆ ತಿಳಿಸಬೇಕು. ಹಾಗೆಯೇ ಶಿಶುವಿಹಾರದಲ್ಲಿ ಮಕ್ಕಳ ಕಾರ್ಯಕ್ರಮಗಳನ್ನು ಏರ್ಪಡಿಸಿ ಆಗಾಗ ತಾಯಂದಿರೂ ನಿರೀಕ್ಷಿಸುವಂತೆ ಅವಕಾಶಗಳನ್ನು ಒದಗಿಸಬೇಕು. ಮಕ್ಕಳ ಉಪಾಹಾರ ತಯಾರಿಸುವಲ್ಲಿ ತಾಯಂದಿರ ಸಹಾಯ ಪಡೆಯಬೇಕು. ಮಕ್ಕಳು ಹಬ್ಬ ದಿನಾಚರಣೆಗಳನ್ನು ಆಚರಿಸುವಾಗ ಇಲ್ಲವೇ ಪ್ರವಾಸ ಹೊರಟಾಗ ತಾಯಂದಿರೂ, ಮತ್ತುಳಿದ ಹಿರಿಯರೂ ಭಾಗವಹಿಸಲು ಅವಕಾಶಮಾಡಿಕೊಡಬೇಕು.

ಅಧ್ಯಾಯ 3

ಸ್ವಚ್ಛತೆ ಹಾಗೂ ಆರೋಗ್ಯಪಾಲನೆ

ವ್ಯಾವಹಾರಿಕ ಬದುಕಿನಲ್ಲಿ ಸ್ವಾವಲಂಬನೆ ಸಾಧಿಸುವ ಅನೇಕ ಚಟುವಟಿಕೆಗಳಲ್ಲಿ ಸ್ವಚ್ಛತೆಯ ಕಾರ್ಯವೂ ಒಂದು.


ಸ್ವಚ್ಛತೆಯು ಜೀವನದಲ್ಲಿ ಅತ್ಯಂತ ಮಹತ್ವದ್ದು. ಚಿಕ್ಕಂದಿನಿಂದಲೇ ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸುವುದು ಅವಶ್ಯ. 2, 2½ ವರ್ಷದ ಮಗುವಿಗೂ ವೈಯಕ್ತಿಕ ಹಾಗೂ ಪರಿಸರದ ಸ್ವಚ್ಛತೆಯ ಕಾರ್ಯವಹಿಸಲು ಬರುತ್ತದೆ. ಮಕ್ಕಳಿಗೂ ಅದು ಇಷ್ಟವಾಗಿದ್ದು ಆನಂದದಿಂದ ಮಾಡುತ್ತಾರೆ. ಮಕ್ಕಳು ಮಣ್ಣಿನಲ್ಲಿ ಆಡುತ್ತಾರೆ; ಎಲ್ಲ ಕಡೆಗಳಲ್ಲಿ ಕೈ ಆಡಿಸುತ್ತಾರೆ. ಅವರಿಗೆ ಸ್ವಚ್ಛವಾದದ್ದು ಹೊಲಸಾದದ್ದರ ಪರಿಜ್ಞಾನವಿರುವುದಿಲ್ಲ ; ಅದೇ ಕೈಗಳಿಂದಲೇ ಊಟ ಮಾಡುತ್ತಾರೆ ; ಅದೇ ಬೆರಳನ್ನು ಬಾಯಲ್ಲಿ ಹಾಕಿಕೊಳ್ಳುತ್ತಾರೆ. ಅನೇಕ ವಸ್ತುಗಳನ್ನು ಬಾಯಲ್ಲಿ ಹಾಕಿ ಅನುಭವ ಪಡೆಯುವ ಅವರ ರೀತಿಯಿಂದ ಅನೇಕ ರೋಗಗಳಿಗೆ ತುತ್ತಾಗುವ ಸಂಭವವಿರುತ್ತದೆ. ಉಗುರು ತೆಗೆಯದೇ ಹೋದರೆ ಅದರಲ್ಲಿಯ ಹೊಲಸು ಊಟದ ಜೊತೆ ಹೊಟ್ಟೆಯಲ್ಲಿ ಹೋಗುತ್ತದೆ. ಕೂದಲು ತೊಳೆಯದೆ, ಬಾಚದೆ ಹೋದರೆ ಅದು ಮಾಸಲಾಗಿ ಹೇನುಗಳು ತುಂಬಿಕೊಳ್ಳುತ್ತವೆ. ಹಾಗೆಯೇ ಹಲ್ಲುಗಳ ಸ್ವಚ್ಛತೆ ಮತ್ತು ಚರ್ಮದ ಆರೋಗ್ಯವೂ ಅಷ್ಟೇ ಮಹತ್ವದ್ದು.

ಸ್ವಚ್ಛತೆಯಲ್ಲಿ ಸ್ವಾವಲಂಬನೆ

ಮಕ್ಕಳಿಗೆ ತಮ್ಮ ಪ್ರತಿಯೊಂದು ಕೆಲಸವನ್ನೂ ತಾವೇ ಮಾಡಬೇಕೆಂಬ ಹಂಬಲ ವಿರುತ್ತದೆ. ತಮ್ಮ ಕೈತೊಳೆಯಲು, ಮುಖ ತೊಳೆಯಲು ಎಷ್ಟು ಇಷ್ಟವೋ ಅಷ್ಟೇ ತಮ್ಮ ಸ್ಥಳದ ಕಸಗುಡಿಸಿ ಸ್ವಚ್ಛಮಾಡಲು ಇಲ್ಲವೇ ನೆಲ, ಮೇಜು, ಕುರ್ಚಿ, ಬಾಗಿಲು, ಕಿಟಕಿ, ಪಾತ್ರಗಳನ್ನು ಒರಸಿ ತೊಳೆದು ಶುಚಿಮಾಡಲು ಇಷ್ಟ; ಆನಂದವೂ ಕೂಡ. ಆದರೆ ಅವರಿಗೆ ಯೋಗ್ಯ ಮಾರ್ಗದರ್ಶನ ಮತ್ತು ಅವಶ್ಯವಿದ್ದಷ್ಟು ಮಾತ್ರ ದೊಡ್ಡವರ ಸಹಾಯ ಸಿಕ್ಕರೆ ಸ್ವಚ್ಛತೆಯ ಚಿಕ್ಕಚಿಕ್ಕ ಕಾರ್ಯಗಳ ಮೂಲಕ ಅದರ ಆವಶ್ಯಕತೆ ಮತ್ತು ಮಾಡುವ ರೀತಿಗಳನ್ನು ತಿಳಿದು ಆರೋಗ್ಯವಾಗಿ ಜೀವಿಸುವಂತಾಗುತ್ತಾರೆ.

ಮನೆಗಳಲ್ಲಿ ಕೆಲವು ಮಕ್ಕಳು ಸ್ನಾನಮಾಡುವಾಗ, ತಲೆಬಾಚಿಕೊಳ್ಳುವಾಗ, ಕೈಕಾಲು ತೊಳೆದುಕೊಳ್ಳುವಾಗ ಹಠಮಾಡುತ್ತಾರೆ. ಇದಕ್ಕೆ ಕಾರಣ ತಾಯಿ ತನ್ನ

ಕೆಲಸ ಬೇಗ ಬೇಗ ಮುಗಿಸುವ ಅವಸರದಲ್ಲಿ ಒರಟಾಗಿ ಮಗುವಿನ ಮೈ ತಿಕ್ಕಿ, ಕಣ್ಣು, ಬಾಯಿ ಇಲ್ಲವೇ ಮೂಗಿನಲ್ಲಿ ಎಂದಾದರೂ ನೀರು ಹೊಮ್ಮಿದ ಅನುಭವವಿದ್ದರೆ ಮಗು ಸ್ನಾನ, ಕೈಕಾಲು ತೊಳೆಯುವಿಕೆ, ಮುಖ ತೊಳೆಯುವಿಕೆಗಳಿಗೆ ಹಠಮಾಡುತ್ತದೆ. ಮಕ್ಕಳಿಗೆ ಹಿತವಾಗುವಷ್ಟು ಬಿಸಿ ನೀರಿದ್ದರೆ ಅದರಲ್ಲಿ ಆಟವಾಡಲು, ಚಟಪಟ



ಚಿತ್ರ 1 : ಮಕ್ಕಳ ಸ್ವಚ್ಛತೆ

ನೀರಲ್ಲಿ ಹೊಡೆದು ಅದು ಚಿಮ್ಮುವುದನ್ನು ನೋಡಿ ಆನಂದಪಡುವುದು ಬಹಳ ಇಷ್ಟ. ಆದರೆ ಮಗುವಿಗೆ ತನ್ನ ಸ್ವಚ್ಛತೆಯ ಕೆಲಸದಲ್ಲಿ ಆನಂದಕ್ಕಿಂತ ತೊಂದರೆಯೇ ಹೆಚ್ಚು ಎನಿಸುತ್ತಿದ್ದರೆ ಅದರ ದೃಷ್ಟಿಕೋನದಿಂದ ನೋಡದೆ ನಮ್ಮ ಅಭಿಮತವನ್ನೇ ಅದರ ಮೇಲೆ ಹೇರ ಹೊರಟಾಗ ಅದು ಪ್ರತಿಭಟಿಸುವುದು ಸಹಜವೇ !

ಸ್ವಚ್ಛತೆ ಆರೋಗ್ಯಕ್ಕೆ ಎಷ್ಟು ಅವಶ್ಯವೋ ಮನೋಲ್ಲಾಸಕ್ಕೂ ಅಷ್ಟೇ ಅವಶ್ಯ. ಅಸ್ವಚ್ಛ ವಾತಾವರಣದಲ್ಲಿ ಉಸಿರಾಡುವುದೂ ಹೆಚ್ಚುಕಾಲ ಇರುವುದೂ ಅಸಾಧ್ಯವಾದಂತೆ ಮನಸ್ಸಿನ ಏಕಾಗ್ರತೆ ಕಾಯ್ದುಕೊಂಡು ಉಲ್ಲಸಿತವಾಗಿ ಕಾರ್ಯಮಾಡುವುದೂ ಅಸಾಧ್ಯ. ಸ್ವಚ್ಛತೆಯು ಸೌಂದರ್ಯದ ಒಂದು ಭಾಗ. ಮಗುವಿನ ಬಟ್ಟೆ ಕೊಳೆಯಾಗಿದ್ದು ಕಣ್ಣು ಮೂಗುಗಳಲ್ಲಿ ಹೊಲಸು ತುಂಬಿದ್ದರೆ ಆ ಮಗು ಎಷ್ಟೇ ಸುಂದರವಾಗಿದ್ದರೂ ಅದನ್ನು ಎತ್ತಿ ಮುದ್ದಾಡಬೇಕು ಎಂದು ಯಾರಿಗೂ ಎನಿಸುವುದಿಲ್ಲ.

ಸ್ವಚ್ಛತೆಯು ಸೌಂದರ್ಯವನ್ನು ಹೆಚ್ಚಿಸುತ್ತದೆ. ಸೌಂದರ್ಯದ ಕಲ್ಪನೆ ಬೇರೆ ಬೇರೆಯಾಗಿದ್ದರೂ ಸ್ವಚ್ಛತೆ ಹಾಗೂ ಸೌಂದರ್ಯಗಳು ನಿಕಟವರ್ತಿಗಳು.

ಸ್ವಚ್ಛತೆಯ ಕಲ್ಪನೆ

ಮಕ್ಕಳಿಗೆ ಸ್ವಚ್ಛತೆ ಅಸ್ವಚ್ಛತೆಗಳ ಕಲ್ಪನೆ ಸರಿಯಾಗಿ ಬರಬೇಕು. ಕೂದಲು ಸ್ವಚ್ಛಮಾಡಿ ಬಾಚಿಕೊಳ್ಳುವ ಪೂರ್ವದಲ್ಲಿ ಹಾಗೂ ಅದರ ನಂತರ ಕಾಣುವ ರೀತಿ; ಮುಖ ತೊಳೆಯುವ ಮೊದಲು, ತೊಳೆದ ನಂತರ; ಕೊಳೆಬಟ್ಟೆ ಬಿಚ್ಚಿ ಸ್ವಚ್ಛ ಬಟ್ಟೆ ಹಾಕಿದ ನಂತರದ ವ್ಯತ್ಯಾಸಗಳು ಮಕ್ಕಳಿಗೆ ಕನ್ನಡಿಯಲ್ಲಿ ಮೇಲಿಂದ ಮೇಲೆ ಸ್ವತಃ ನೋಡಿನೋಡಿ ತಿಳಿಯುವಂತೆ ನೋಡಿಕೊಳ್ಳಬೇಕು. ಶಿಕ್ಷಕಿ ಸ್ವಚ್ಛತೆಯ ಕಲ್ಪನೆಯನ್ನು ಚಂದ, ಹೊಲಸು ಪ್ರಶ್ನೆಗಳ ಮೂಲಕ ಮಕ್ಕಳ ಗಮನಕ್ಕೆ ತರಬೇಕು.

ಮಕ್ಕಳ ಲಕ್ಷ್ಯ ತಾನಾಗಿಯೇ ಅಸ್ವಚ್ಛತೆಯ ಕಡೆಗೆ ಹೋಗುವುದಿಲ್ಲ. ಶಿಕ್ಷಕಿ ತಾನೇ ಪ್ರಯತ್ನ ಪೂರ್ವಕವಾಗಿ ಅವರ ಲಕ್ಷ್ಯಕ್ಕೆ ತರಬೇಕು. ಮೂಗು ಸೋರುತ್ತಿದ್ದರೂ ಹತ್ತಿರ ಕರವಸ್ತ್ರವಿದ್ದರೂ ಅದರ ಕಡೆ ಮಕ್ಕಳ ಲಕ್ಷ್ಯವಿರುವುದಿಲ್ಲ. ಆಗ ಅದಕ್ಕೆ ಆ ಬಗ್ಗೆ ನೆನಪುಮಾಡಿಕೊಡಬೇಕಾಗುತ್ತದೆ. ಈ ಬಗ್ಗೆ ಶಿಕ್ಷಕಿಯೂ ಪಾಲಕರೂ ತೀವ್ರ ಆಸ್ಥೆವಹಿಸಬೇಕಾಗುತ್ತದೆ. ಸ್ವಚ್ಛತೆಯ ಪರೀಕ್ಷೆ ಮಾಡುವುದು ಶಿಶುವಿಹಾರದ ದೈನಂದಿನ ಕಾರ್ಯಕ್ರಮಗಳಲ್ಲೊಂದಾಗಿರಬೇಕು. ಪರೀಕ್ಷೆ ಮಾಡಬೇಕಾದರೆ ಮಗು ಮೊದಲು ತಾನಾಗಿಯೇ ಸ್ವಚ್ಛವಾಗಿರಲು ಪ್ರಯತ್ನಪಡುವುದು ಸಹಜ (ಮಕ್ಕಳು ಒಬ್ಬರಿಗೊಬ್ಬರ ಸ್ವಚ್ಛತೆ ನೋಡುವಲ್ಲಿ ಅವಮಾನಪಡುವುದಿಲ್ಲ). ಸ್ವಚ್ಛತೆಯ ಕಲ್ಪನೆ ಬಂದು ಒಮ್ಮೆ ಅದನ್ನು ಪಾಲಿಸಲು ಶುರುಮಾಡಿದರೆ ಅದನ್ನು ಸ್ಥಿರಗೊಳಿಸಲು ತೊಂದರೆಯಾಗುವುದಿಲ್ಲ. ಇದನ್ನು ಶಿಶುವಿಹಾರಗಳಲ್ಲಿ ಸಾಧಿಸಬೇಕು.

ಸ್ವಚ್ಛತೆಯಿಂದಾಗಿ ಮಕ್ಕಳು ಆನಂದವನ್ನು ಅನುಭವಿಸುವಂತಾಗಬೇಕು. ಮುಖ ತೊಳೆದರೆ ಸ್ವಚ್ಛ ಎನಿಸುತ್ತದೆ, ಸ್ನಾನಮಾಡಿದರೆ ಉತ್ಸಾಹ ಬರುತ್ತದೆ, ಸ್ವಚ್ಛ ಬಟ್ಟೆ ಹಾಕಿದರೆ ಆನಂದವೆನಿಸುತ್ತದೆ; ಈ ರೀತಿ ಮಕ್ಕಳಿಗೆ ಅನಿಸಬೇಕು. ಈ ಅನುಭವ ಬರುವ ಹಾಗೆ ಮಕ್ಕಳಿಗೆ ಅವಕಾಶಮಾಡಿಕೊಡಬೇಕು. ಹಲ್ಲುಜ್ಜಿ, ತಲೆಬಾಚಿ, ಸ್ನಾನ ಮಾಡಿದ ನಂತರ 'ಎಷ್ಟು ಚಂದ ಕಾಣುತ್ತೀಯಲ್ಲಾ?' ಎಂದು ಮುಂತಾಗಿ ಶಿಕ್ಷಕಿ ಮಗುವಿಗೆ ಸೂಚಕ ಪ್ರಶ್ನೆ ಕೇಳಬೇಕು; ಸ್ವಚ್ಛತೆಯ ನಿರೀಕ್ಷಣೆ ಮಾಡಿ ಅದನ್ನು ಮಗುವಿನ ಗಮನಕ್ಕೆ ತಂದುಕೊಡುವಂಥ ಕೆಲವು ಸಾಧನಗಳ ಆವಶ್ಯಕತೆ ಇರುತ್ತದೆ. ಕನ್ನಡಿ ಇಂಥ ಒಂದು ಮಹತ್ವದ ಸಾಧನ. ಶಿಶುವಿಹಾರದಲ್ಲಿ ಮಗುವಿನ ಎತ್ತರದಷ್ಟು ಒಂದು ಕನ್ನಡಿಯಿದ್ದು ಅದನ್ನು ನೋಡಲು ನಿಲುಕುವಂತೆ ಹಾಕಿರಬೇಕು. ಮಕ್ಕಳು ಅದರಲ್ಲಿ ನೋಡಿ, ತಮ್ಮ ಕಣ್ಣು, ಮೂಗು, ಮುಖ, ಬಟ್ಟೆ ಸ್ವಚ್ಛವಾಗಿದೆಯೇ

ಎಂಬುದನ್ನು ತಾವೇ ಕಂಡುಕೊಳ್ಳುವಂತೆ ಶಿಕ್ಷಕಿಯು ಸೂಚನೆ ಕೊಡಬೇಕು. ಸ್ವಚ್ಛತೆಯ ಕಾರ್ಯಕ್ರಮವು ಶಿಶುವಿಹಾರದಲ್ಲಿ ಅವಶ್ಯವಾಗಿರಬೇಕು. ಈ ಕಾರ್ಯದ ಮೊದಲು ಮತ್ತು ಅನಂತರ ಮಕ್ಕಳು ಹೇಗೆ ಕಾಣುತ್ತಾರೆಂದು ಅವರ ಲಕ್ಷ್ಯಕ್ಕೆ ತರಬೇಕಾದುದು ಮುಖ್ಯ.

ಸ್ವಚ್ಛತೆ, ಸಾಮಾಜಿಕತೆ ಹಾಗೂ ಸಂಸ್ಕಾರ

ಸ್ವಚ್ಛತೆ ವೈಯಕ್ತಿಕವೆಂದರೂ ಸಹ ಮಗುವು ಸಾಮಾಜಿಕತೆಯನ್ನು ಬೆಳೆಸಿಕೊಳ್ಳುವಲ್ಲಿಯೂ ಸಹಾಯಕ. ಹೊಲಸಾದ ಮಗುವನ್ನು ಇತರರು ತಮ್ಮ ಆಟಪಾಟಗಳಲ್ಲಿ ಸೇರಿಸಿಕೊಳ್ಳುವುದಕ್ಕೆ ಸುಲಭವಾಗಿ ಇಷ್ಟಪಡುವುದಿಲ್ಲ. ತನ್ನ ಅಸ್ವಚ್ಛತೆಯಿಂದ ಇತರರಿಗೂ ತೊಂದರೆಯಾಗುತ್ತದೆಂಬ ಕಲ್ಪನೆಯು ಮಗುವಿಗೆ ಬರಬೇಕು. ತನ್ನ ಅಕ್ಕಪಕ್ಕದಲ್ಲಿರುವವರು ಸುತ್ತಲಿನ ಸ್ಥಳವನ್ನು ಸ್ವಚ್ಛವಾಗಿಟ್ಟುಕೊಂಡು ಬೇರೆಯವರಿಗೆ ಬೇಸರ ಬಾರದಂತೆ ನೋಡಿಕೊಳ್ಳುವುದರಿಂದ ಮಗುವಿನ ಸಂಸ್ಕಾರ ಹೆಚ್ಚುತ್ತದೆ.

ಶಿಶುವಿಹಾರದ ಪ್ರತಿಯೊಂದು ವಿಷಯದಲ್ಲಿ ಸ್ವಚ್ಛತೆಯನ್ನು ಕಾಯ್ದುಕೊಂಡು ಬರಬೇಕು. ಮಕ್ಕಳು ಇದನ್ನು ಪಾಲಿಸುವಲ್ಲಿ ಒತ್ತಾಯಮಾಡಬೇಕು. ಈ ಬಗ್ಗೆ ಯಾವ ನೆಪ ಅಥವಾ ಸವಲತ್ತು ನಡೆಯುವಂತಿಲ್ಲ: ಪಾಲಿಸಲೇಬೇಕಾದ ನಿಯಮವೆಂಬುದನ್ನು ಮಕ್ಕಳು ದೃಢಪಡಿಸಿಕೊಳ್ಳುವಂತಿರಬೇಕು. ಶಿಕ್ಷಕಿಯ ಉತ್ತಮ ಅಭ್ಯಾಸಗಳು ಮತ್ತು ಮಕ್ಕಳ ಯತ್ನಗಳಿಂದಾಗಿ ಇದನ್ನು ಪಾಲಿಸುವಲ್ಲಿ ಹೆಚ್ಚು ತೊಂದರೆಯಾಗಲಾರದು.

ಕೆಲವು ಮಕ್ಕಳು ಅನೇಕ ಕಾರಣಗಳಿಂದಾಗಿ ಈ ಸ್ವಚ್ಛತೆಯ ಕಾರ್ಯದಲ್ಲಿಯೂ ಹಿಂದುಳಿಯುತ್ತಾರೆ. ಶಿಕ್ಷಕಿ ಅಂಥವರನ್ನು ಸಹಾನುಭೂತಿಯಿಂದ ಕಂಡು ಅವರ ಕಡೆ ವಿಶೇಷ ಗಮನ ಕೊಡಬೇಕಾಗುತ್ತದೆ. ಸ್ವಚ್ಛತೆ ಕಾಯ್ದುಕೊಳ್ಳುವಲ್ಲಿ ಪಾಲಕರಿಗೆ ವಿಶೇಷ ಜವಾಬ್ದಾರಿ ಇರುತ್ತದೆ. ಶಿಶುವಿಹಾರದಲ್ಲಿ ಸ್ವಚ್ಛತೆಯ ತರಬೇತಿ ಇರುವುದೆಂದು ಪಾಲಕರು ತಮ್ಮ ಜವಾಬ್ದಾರಿಯನ್ನು ಬಿಟ್ಟುಕೊಡದೆ ಶಿಕ್ಷಣಕ್ಕೆ ಪೋಷಕವಾಗುವಂತೆ ಮನೆಯಿಂದಲೇ ಮಕ್ಕಳು ಸ್ವಚ್ಛವಾಗಿ ಬರುವಂತೆ ನೋಡಿಕೊಳ್ಳುವುದು ಮಕ್ಕಳ ಹಿತದೃಷ್ಟಿಯಿಂದ ಒಳ್ಳೆಯದು.

ಕೈಕಾಲು ತೊಳೆಯುವುದು : ಹಳ್ಳಿಗಳಲ್ಲಿ ಅನೇಕ ಮಕ್ಕಳು ಮನೆಯಿಂದ ಸ್ವಚ್ಛವಾಗಿ ಬರುವುದಿಲ್ಲ. ಅಂಥವರಿಗೆ ಕೈಕಾಲು, ಮುಖ ತೊಳೆಸುವುದು, ತಲೆ ಬಾಚುವುದು ಬಹಳ ಅವಶ್ಯ. ಮಕ್ಕಳು ಕಸಗುಡಿಸುವುದು, ತೋಟದ ಕೆಲಸಮಾಡುವುದೂ. ಮಣ್ಣು, ಉಸುಕು, ಬಣ್ಣಗಳಲ್ಲಿ ಕೈಗೆಲಸ ಮಾಡುವುದು : ಬಯಲಿನಲ್ಲಿ ಆಟವಾಡುವುದೂ ಉಂಟು. ಅವರ ಕೆಲಸ ಮುಗಿದ ಮೇಲೆ ಮತ್ತು ಉಪಾಹಾರಕ್ಕೆ ಮೊದಲು ಕೈತೊಳೆಯುವುದು ಬಹಳ ಅವಶ್ಯ.

ಮಕ್ಕಳಿಗೆ ನೀರಲ್ಲಿ ಆಟವಾಡುವುದು ಇಷ್ಟ. ಅವರೇ ಕೈಕಾಲು ತೊಳೆಯಲು ಮುಂದಾಗುತ್ತಾರೆ. ಶಿಕ್ಷಕಿ ಅವರಿಗೆ ಈ ಕ್ರಿಯೆಯಲ್ಲಿ ಸಾಮೂಹಿಕವಾಗಿ ಮತ್ತು ವೈಯಕ್ತಿಕವಾಗಿ ಮಾರ್ಗದರ್ಶನ ಮಾಡಬೇಕು.

ತರಬೇತಿಯ ಪೂರ್ವಸಿದ್ಧತೆಯಾಗಿ ಬಕೆಟ್, ನೀರು, ಸಾಬೂನು, ಒರೆಸಲು ವಸ್ತ್ರ, ನೀರು ಹಾಕಲು ಚಿಕ್ಕ ಮಗ್ ಅಥವಾ ಹಿಡಿಕೆಯ ಬಟ್ಟಲು ಹಾಗೂ ಕೈಕಾಲು ತೊಳೆದ ನೀರು ಮೋರಿಗೆ ಅಥವಾ ಗಿಡಗಳಿಗೆ ಹೋಗುವಂತೆ ಸ್ಥಳ ವ್ಯವಸ್ಥೆ ಇರಬೇಕು.

ಶಿಕ್ಷಕಿ, ಅರ್ಧಗೋಲಾಕಾರದಲ್ಲಿ ಅಥವಾ ಸ್ಥಳಾವಕಾಶಕ್ಕನುಗುಣವಾಗಿ ಎಲ್ಲ ಮಕ್ಕಳೂ ಕಾಣುವಂತೆ ಮಕ್ಕಳನ್ನು ಕೂರಿಸಬೇಕು. ಒಂದು ಮಗು ಹಿಡಿಕೆಯಿದ್ದ ಮಗ್‌ನಿಂದ ಕೈಮೇಲೆ ನೀರು ಹಾಕಬೇಕು. ತನ್ನ ಕೈಗಳು ಕೊಳೆಯಾಗಿರುವುದನ್ನು ಮಕ್ಕಳ ಗಮನಕ್ಕೆ ತಂದು, ಹಾಕುತ್ತಿದ್ದ ನೀರಿಗೆ ಕೈಚಾಚಿ ಮೊದಲು ಅಂಗೈತೊಳೆದು ನಂತರ ಕೈ ಹಿಂಬದಿಗೆ ಬೆರಳುಗಳನ್ನು ಒಂದೊಂದಾಗಿ ಉಗುರು ಸಹಿತ ತೊಳೆದು ಸ್ವಚ್ಛಮಾಡಿ, ಅದಕ್ಕೆ ಸಾಬೂನು ಹಚ್ಚಿ ತೊಳೆದುದನ್ನು ತೋರಿಸಬೇಕು. ಶಿಕ್ಷಕಿ, ಪ್ರತಿಯೊಂದು ಕ್ರಿಯೆ ಮಾಡುವಾಗ 'ನಾನು ಅಂಗೈ ತೊಳೆಯುತ್ತೇನೆ, ಹೀಗೆ ಬೆರಳು, ಉಗುರು ತೊಳೆಯುತ್ತೇನೆ' ಎಂಬುದಾಗಿ ಹೇಳಿ ಕಾರ್ಯಮಾಡಬೇಕು. ಕಾಲು ತೊಳೆಯುವಾಗಲೂ ಇದೇ ಪದ್ಧತಿ ಅನುಸರಿಸಬೇಕು. ಮಕ್ಕಳು ಬಾಗಿ ಕಾಲುಗಳನ್ನು ಕೈಯಿಂದ ಮುಟ್ಟಿ ತೊಳೆಯಲು ತೊಂದರೆಯಾಗುವುದರಿಂದ ಪಾದವನ್ನು ಚಿಕ್ಕ ಕಟ್ಟೆ ಇಲ್ಲವೇ ಡಬ್ಬದ ಮೇಲಿಟ್ಟು ಚೆನ್ನಾಗಿ ತೊಳೆಯುವ ವ್ಯವಸ್ಥೆ ಇರಬೇಕು.

ಮೂಗಿನ ಸ್ವಚ್ಛತೆ: ಮೂಗು ಸ್ವಚ್ಛಮಾಡುವ ಕೆಲಸ ಮಕ್ಕಳಿಗೆ ಸ್ವಲ್ಪ ಕಠಿಣ. ಮೂಗಿನ ಸಿಂಬಳ ತೆಗೆದು ವಸ್ತ್ರದಿಂದ ಒರೆಸುವುದು, ವಸ್ತ್ರದಲ್ಲಿಯೇ ಸಿಂಬಳ ತೆಗೆಯುವುದು, ಮೂಗಿನ ಸಿಂಬಳವನ್ನು ಸೀನಿ ಮೂಗನ್ನು ನೀರಿನಿಂದ ಸ್ವಚ್ಛ ಮಾಡುವುದು ಈ ರೀತಿ ಮೂರು ಕ್ರಿಯೆಗಳನ್ನು ಅವಶ್ಯಕತೆಗನುಸಾರವಾಗಿ ಮಾಡುತ್ತೇವೆ. ಮಕ್ಕಳಿಗೆ ಮೂಗಿನ ಸ್ವಚ್ಛತೆ ಮಾಡಲು ವಸ್ತ್ರದ ಅವಶ್ಯಕತೆ ಇರುತ್ತದೆ. ಅದು ಯಾವಾಗಲೂ ಹತ್ತಿರ ಇರಬೇಕು ಎಂಬ ರೂಢಿಯಾಗಬೇಕು. ಚಿಕ್ಕವಯಸ್ಸಿನಲ್ಲಿ ಅನೇಕ ಮಕ್ಕಳ ಮೂಗಿನಿಂದ ಸಿಂಬಳ ಬರುತ್ತಲೇ ಇರುತ್ತದೆ. ಕೆಲವು ಮಕ್ಕಳು ಅದನ್ನು ನಾಲಗೆಯಿಂದ ಚೀಪುತ್ತವೆ ; ತಮ್ಮ ಷರಟಿಗೋ, ಅಂಗಿಗೋ ಒರೆಸಿಕೊಳ್ಳುತ್ತವೆ ; ಇಲ್ಲವೇ ಕೈಯಿಂದ ತೆಗೆದು ಹತ್ತಿರದಲ್ಲಿದ್ದ ಗೋಡೆಗೋ, ಕಟ್ಟಿಗೆ ಸಾಮಾನುಗಳಿಗೋ ಒರೆಸಿಬಿಡುತ್ತವೆ. ಇದೆಲ್ಲ ಅಸಹ್ಯ, ಅಸ್ವಚ್ಛ ಎಂಬ ಕಲ್ಪನೆ ಅವಕ್ಕೆ ಬರಬೇಕು. ಮೂಗಿನ ಸ್ವಚ್ಛತೆಗಾಗಿ ಕರವಸ್ತ್ರ ಉಪಯೋಗಿಸುವ ಹವ್ಯಾಸ ಬರಬೇಕು. ಮೂಗಿನಲ್ಲಿ ಬಹಳ ಸಿಂಬಳ ಇದ್ದರೆ ಅದನ್ನು ಸೀನಿ ಹೊರಗೆ ಚೆಲ್ಲಲು ಒಂದು ತಗ್ಗು ಇರಬೇಕು. ಮಕ್ಕಳು ಅದರಲ್ಲಿಯೇ ಸಿಂಬಳ ಬೀಳುವಂತೆ ಸೀನಿ ಅದರ ಮೇಲೆ ಬೂದಿ

ಇಲ್ಲವೇ ಮಣ್ಣು ಮುಚ್ಚಬೇಕು. ಮಕ್ಕಳಿಗೆ ಬೇಕಾಗುವ ಇಂಥ ಕರವಸ್ತ್ರಗಳು ಮೆತ್ತಗೆ ಇರಬೇಕು. ಹಳೆಯ ಸೀರೆ ಅಥವಾ ಧೋತ್ರದ ತುಂಡಿನದಾದರೂ ಅಡ್ಡಿಯಿಲ್ಲ. ಆದರೆ ಅವು ಸ್ವಚ್ಛವಾಗಿರಬೇಕಾದುದು ಮುಖ್ಯ. ಶಿಶುವಿಹಾರದಲ್ಲಿ ಇದಕ್ಕಾಗಿ ಎರಡು ಡಬ್ಬಗಳಿದ್ದು ಒಂದರಲ್ಲಿ ಸ್ವಚ್ಛದಾದ ಮತ್ತು ಇನ್ನೊಂದರಲ್ಲಿ ಕೊಳೆಯಾದ ಕರವಸ್ತ್ರಗಳನ್ನು ಹಾಕುತ್ತಿರಬೇಕು. ಹಳ್ಳಿಗಳಲ್ಲಿ ಪಾಲಕರು ಈ ಬಗ್ಗೆ ಹೆಚ್ಚು ಗಮನಕೊಡುವುದಿಲ್ಲ. ಆದ್ದರಿಂದ ಶಿಕ್ಷಕಿಯು ಒತ್ತಾಯಪೂರ್ವಕವಾಗಿ ಮಕ್ಕಳಿಗೆ ಮೂಗಿನ ಸ್ವಚ್ಛತೆ ನೋಡಿಕೊಳ್ಳುವಂತೆ ಎಚ್ಚರಿಸುತ್ತಿರಬೇಕಾಗುತ್ತದೆ. ಈ ದಿಸೆಯಲ್ಲಿ ಪಾಲಕರಿಗೂ ವಿಷಯ ತಿಳಿಸಿ ಅವರ ಸಹಕಾರ ಪಡೆಯುವುದು ಉತ್ತಮ.

ಉಗುಳುವಿಕೆ : ಇಚ್ಛೆಬಂದಲ್ಲಿ ಪಚಪಚ ಎಂದು ಉಗುಳುವ ಅಭ್ಯಾಸ ಕೆಲವು ಮಕ್ಕಳಿಗೆ ಇರುತ್ತದೆ. ಇದಕ್ಕಾಗಿ ಅಂಗಳದಲ್ಲಿ 2–3 ದುಂಡು ಕಂಠದ ಗಡಿಗೆಯಲ್ಲಿ ಬೂದಿ ತುಂಬಿ ಇಡುವುದು ಒಳ್ಳೆಯದು. ಅದರಲ್ಲಿಯೇ ಉಗುಳುವಂತೆ, ಮಕ್ಕಳಿಗೆ ಆಗ್ರಹಪಡಿಸಬೇಕು. ಸಾಯಂಕಾಲ ಈ ಬೂದಿಯನ್ನು ತಿಪ್ಪೆಗೆ ಚೆಲ್ಲಿ ಹೊಸದಾಗಿ ಬೂದಿ ತುಂಬಿಡಬೇಕು.

ಹಲ್ಲಿನ ಸ್ವಚ್ಛತೆ : ಹಳ್ಳಿಗಳಲ್ಲಿ ಅನೇಕ ಮಕ್ಕಳ ಹಲ್ಲು ಹಳದಿ ಬಣ್ಣಕ್ಕೆ ತಿರುಗಿದ್ದು ಅನೇಕವು ಹುಳುಕಾಗಿರುತ್ತವೆ. ಅನೇಕ ಮಕ್ಕಳಿಗೆ ಪ್ರತಿನಿತ್ಯ ಹಲ್ಲು ತಿಕ್ಕಿ ಬಾಯಿ ತೊಳೆಯುವ ಅಭ್ಯಾಸವಿರುವುದಿಲ್ಲ. ತಾಯಂದಿರೂ ಈ ಬಗ್ಗೆ ಹೆಚ್ಚು ಆಗ್ರಹಪಡಿಸುವುದಿಲ್ಲ. ಆದಕಾರಣ ಶಿಶುವಿಹಾರಗಳಲ್ಲಿ ಕನಿಷ್ಠ ವಾರಕ್ಕೊಮ್ಮೆಯಾದರೂ ಹಲ್ಲು ಸ್ವಚ್ಛ ಮಾಡುವುದನ್ನು ಪ್ರತ್ಯಕ್ಷವಾಗಿ ತೋರಿಸಬೇಕು. ಹಾಗೆಯೇ ನಿತ್ಯವೂ ಮಕ್ಕಳ ಹಲ್ಲಿನ ಪರೀಕ್ಷೆಮಾಡಬೇಕು ; ಆಗಾಗ್ಗೆ ಅವರೊಡನೆ ಹಲ್ಲು ಮತ್ತಿತರ ಅವಯವಗಳ ಬಗ್ಗೆ ಹರಟೆ ಹೊಡೆಯುತ್ತಿರಬೇಕು.

ಹಲ್ಲು ತಿಕ್ಕುವ ಕಾರ್ಯಕ್ಕೆ ಪೂರ್ವಸಿದ್ಧತೆಯಾಗಿ ಹಲ್ಲುಪುಡಿ, ಮುಖ ಒರೆಸಲು ಟವೆಲು ನೀರು, ಚಿಕ್ಕ ಹಿಡಿಕೆ ಮಗ್ ಅಥವಾ ತಂಬಿಗೆಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು. ಶಿಕ್ಷಕಿ ಸ್ವತಃ ತನ್ನ ಹಲ್ಲುಗಳನ್ನು ಪುಡಿಯಿಂದ ತಿಕ್ಕುತ್ತ ಹಲ್ಲಿನ ಒಳಗೆ, ಹೊರಭಾಗಗಳನ್ನು ತಿಕ್ಕುವ ಬಗೆ, ನೀರು ಮುಕ್ಕಳಿಸುವ ರೀತಿ ಹಾಗೂ ನಾಲಿಗೆ ಚೊಕ್ಕಟಗೊಳಿಸುವಿಕೆ, ಹಲ್ಲು ತಿಕ್ಕಿದ ನಂತರ ಕಿವಿ, ಮೂಗು, ಕಣ್ಣು, ಕುತ್ತಿಗೆಗಳನ್ನು ಸ್ವಚ್ಛ ಮಾಡುವ ಕ್ರಮಗಳನ್ನು ತೋರಿಸಿಕೊಡಬೇಕು. ಆಮೇಲೆ ವಸ್ತ್ರದಿಂದ ಒರೆಸಿಕೊಂಡು ಹಲ್ಲು ಸ್ವಚ್ಛವಾದ ಬಗ್ಗೆ ಕನ್ನಡಿಯಲ್ಲಿ ನೋಡಬೇಕು. ಮಕ್ಕಳ ಎದುರಿನಲ್ಲಿ ಈ ಎಲ್ಲ ಕೃತಿ ನಡೆಸಿ ಬಳಿಕ ಅವರಿಗೆಲ್ಲ ಮುಖ ತೊಳೆದುಕೊಳ್ಳಲು ತಿಳಿಸಬೇಕು.

ವಿವಿಧ ಬಗೆಯ ದಂತೋಜ್ವಲ ಪುಡಿಗಳು ಬಳಕೆಯಲ್ಲಿವೆ. ಹಳ್ಳಿಗಳಲ್ಲಿ ಬೆರಣಿ (ಕುಳ್ಳು) ಅಥವಾ ಭತ್ತದ ಹೊಟ್ಟಿನ ಬೂದಿಗೆ ಉಪ್ಪು ಹಾಕಿ ಸಹ ಹಲ್ಲುಪುಡಿ ತಯಾರಿಸಬಹುದು.

ಉಗುರಿನ ಸ್ವಚ್ಛತೆ : ಮಕ್ಕಳ ಉಗುರು ಬೆಳೆದು ಅದರಲ್ಲಿ ಹೊಲಸು ತುಂಬಿ ಕೊಳಕಾಗಿ ಕಂಡುಬರುತ್ತದೆ. ಈ ಅಂಶದತ್ತ ಮಕ್ಕಳ ಗಮನ ಸೆಳೆಯಬೇಕು. ಅವರು ಬಾಯಲ್ಲಿ ಬೆರಳು ಹಾಕಿದಾಗ, ಊಟಮಾಡುವಾಗ, ಉಗುರಿನಲ್ಲಿಯ ಕೊಳೆ ಬಾಯಲ್ಲಿ ಸೇರಿ ಅನಾರೋಗ್ಯ ಮೂಲವಾಗಿರುತ್ತದೆ. ಆದಕಾರಣ ಮಕ್ಕಳಿಗೆ ಉಗುರು ತೆಗೆದು ಹಾಕುವ ಅಭ್ಯಾಸ ಮಾಡಿಸಬೇಕು. ಇದಕ್ಕಾಗಿ ಶಿಕ್ಷಕಿ ಉಗುರು. ಕತ್ತರಿ ಉಪಯೋಗಿಸುವುದೊಳಿತು.

2–3 ಚಿಕ್ಕ ಕತ್ತರಿಗಳು, ಬೆರಳು ಮುಳುಗಿಸಲು ಲೋಟಾದಲ್ಲಿ ನೀರು, ಕತ್ತರಿಸಿದ ಉಗುರು ಹಾಕಲು ಕಿರುಬಟ್ಟಲು, ಕೈ ಒರೆಸಲು ವಸ್ತ್ರ ಇತ್ಯಾದಿಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು. ಮೊದಲಿಗೆ, ಮಕ್ಕಳ ಉಗುರು ಪರೀಕ್ಷಿಸಿ ಅದು ಬೆಳೆದಿದೆ ಎಂಬ ಅಂಶವನ್ನು ಅವರ ಗಮನಕ್ಕೆ ತರಬೇಕು. ಬಳಿಕ ಎಲ್ಲರಿಗೂ ಕಾಣುವಂತೆ ಒಂದು ಮಗುವಿನ ಉಗುರು ಕತ್ತರಿಸಿ ತೋರಿಸಬೇಕು. ಹಾಗೆಯೇ ಶಿಕ್ಷಕಿ ಹಾಗೂ ದೊಡ್ಡ ಮಕ್ಕಳು ಸೇರಿ ತಮ್ಮ ತಮ್ಮ, ಮತ್ತಿತರ ಕಿರಿಯರ ಬೆಳೆದ ಉಗುರುಗಳನ್ನು ಕತ್ತರಿಸಬೇಕು. ಕ್ರಮೇಣ ಅವರು ತಮ್ಮ ಉಗುರನ್ನು ತಾವೇ ತೆಗೆಯಲು ಉತ್ತೇಜನ ಕೊಡಬೇಕು.

ಉಗುರುಗಳನ್ನು ಹಲ್ಲಿನಿಂದ ಕಡಿಯುವಿಕೆ ಒಂದು ದುರಭ್ಯಾಸ. ಈ ರೂಢಿಯಿದ್ದ ಮಕ್ಕಳ ಲಕ್ಷ್ಯವನ್ನು ಹರಟೆ ಮತ್ತು ಇತರ ಕೆಲಸಗಳ ಮೂಲಕ ಬೇರೆಡೆಗೆ ತೊಡಗಿಸಬೇಕು.

ಕೂದಲಿನ ಸ್ವಚ್ಛತೆ : ಪ್ರತಿಯೊಂದು ಮಗುವಿಗೆ ಒಂದರಂತೆ ಬಾಚಣಿಗೆ ಇದ್ದು ಅದನ್ನು ಅವರವರ ಕಾಗದ ಅಥವಾ ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟಿರಬೇಕು. ಹೆಚ್ಚು ಸಂಖ್ಯೆಯಲ್ಲಿ ಬಾಚಣಿಗೆ ತರುವುದು ಸಾಧ್ಯವಿಲ್ಲದಿದ್ದರೆ ಡೆಟಾಲ್ ಅಥವಾ ಫಿನೈಲ್ ನೀರು ಪಾತ್ರೆಯಲ್ಲಿ ಇಟ್ಟು ಒಬ್ಬರ ತಲೆ ಬಾಚಿದ ಬಾಚಣಿಗೆಯನ್ನು ಈ ನೀರಿನಲ್ಲಿ ಅದ್ದಿ ಮತ್ತೊಬ್ಬರು ಅದನ್ನು ಉಪಯೋಗಿಸಬೇಕು. ಬಾಚಿದಾಗ ಉದುರಿ ಬಿದ್ದ ಕೂದಲು ತೆಗೆದಿಡಲು ಒಂದು ಚೀಲವಿರಬೇಕು. ಹಾಗೆಯೇ ಒಂದು ಬಟ್ಟಲಿನಲ್ಲಿ ಕೊಬ್ಬರಿ ಎಣ್ಣೆ, ಚಿಕ್ಕ ಚಮಚೆಗಳೂ ಸಹ ಇರಬೇಕು.

ಮಕ್ಕಳಿಗೆ ಕೂದಲನ್ನು ಬಾಚುವುದು, ಗಂಟುಗಳಿದ್ದರೆ ಬಿಡಿಸುವುದು, ಎಣ್ಣೆ ಹಚ್ಚುವುದು, ಬಾಚಣಿಗೆ ಹಿಡಿದು ಉಪಯೋಗಿಸುವ ರೀತಿ ಮತ್ತು ಅದನ್ನು ಸ್ವಚ್ಛ ಮಾಡುವ ಕ್ರಮಗಳನ್ನು ಒಂದೊಂದಾಗಿ ತೋರಿಸಬೇಕು ; ಅನುಸರಿಸುವಂತೆಯೂ ನೋಡಿಕೊಳ್ಳಬೇಕು. ದೊಡ್ಡ ಮಕ್ಕಳು ಪರಸ್ಪರ ಬಾಚಿಕೊಳ್ಳುವುದಲ್ಲದೆ ಚಿಕ್ಕ ಮಕ್ಕಳಿಗೂ ತಲೆಬಾಚುವಂತೆ ನೋಡಿಕೊಳ್ಳಬೇಕು. ಗಂಡು ಹುಡುಗರ ಕೂದಲು ಬಹಳ ಬೆಳೆದಿರುತ್ತದೆ. ಅದನ್ನು ವ್ಯವಸ್ಥಿತವಾಗಿ ಕತ್ತರಿಸಿಕೊಂಡು ಬರುವಂತೆ ಉತ್ತೇಜನ ಕೊಡಬೇಕು. ಕೆಲವೊಮ್ಮೆ ಮನೆಯವರಿಗೆ ಹೇಳಿ ಮಗುವನ್ನು ಕ್ಷೌರಿಕನ ಕಡೆ ಕಳಿಸುವ ವ್ಯವಸ್ಥೆಯನ್ನು ಸಹ ಮಾಡಬೇಕಾಗುತ್ತದೆ.

ಹೇನು: ಕೆಲವು ಹೆಣ್ಣು, ಗಂಡು ಮಕ್ಕಳ ತಲೆಯಲ್ಲಿ ಹೇನು, ಹುಣ್ಣುಗಳು ಇರುವುದುಂಟು. ಅವು ಇಲ್ಲದಂತಾಗಬೇಕಾದರೆ ಮನೆಯವರಿಗೆ ಹೇನುನಾಶಕ ಔಷಧಿಗಳ ಬಗ್ಗೆ ಹೇಳಿ ಮನೆಯಲ್ಲಿದ್ದ ಎಲ್ಲ ಹೆಣ್ಣುಮಕ್ಕಳ ತಲೆಗೆ ಅದನ್ನು ಹಾಕಿ ಹೇನು ಹೋಗ ಲಾಡಿಸುವಂತೆ ಹೇಳಬೇಕು. ಔಷಧಿ ಉಪಯೋಗಿಸುವ ಬಗ್ಗೆ 'ಪ್ರತ್ಯಕ್ಷಿಸಿ' ತೋರಿಸ ಬೇಕು. ಶಿಶುವಿಹಾರದಲ್ಲಿ ಸಾಮೂಹಿಕ ಸ್ನಾನ ಮಾಡಿಸಲು ಅವಕಾಶಗಳಿದ್ದ ಪಕ್ಷದಲ್ಲಿ ಇಂಥ ಔಷಧಿ ಉಪಯೋಗಿಸುವುದು ಸುಲಭ ಸಾಧ್ಯ.

ಹೇನಿನ ನಿರ್ಮೂಲಕ್ಕಾಗಿ ಚಹಾಪುಡಿ ಹಾಕಿ ಕುದಿಸಿದ ನೀರು, ಕರ್ಪೂರ ಕರಗಿರುವ ಕೊಬ್ಬರಿಎಣ್ಣೆ, ಡಿ.ಡಿ.ಟಿ. ಪೌಡರ್ (ಲೋಕಾಕ್ಸೀನ್, ಲೈಸಿಲ್) ಕೊಬ್ಬರಿ ಎಣ್ಣೆಯಲ್ಲಿ ಬೆರೆಸಿದ ಸೀತಾಫಲ ಬೀಜದ ಪುಡಿಗಳನ್ನು ಬಳಸಬಹುದು. ಈ ಎಲ್ಲ ಔಷಧಿಗಳೂ ವಿಷವಾಗಿರುವುದರಿಂದ ಕಣ್ಣುಬಾಯಿಗಳಿಗೆ ಹೋಗದಂತೆ ನೋಡಿಕೊಳ್ಳಬೇಕು.

ಚರ್ಮದ ಸ್ವಚ್ಛತೆ: ಶಿಶುವಿಹಾರಕ್ಕೆ ಬರುವ ಮಕ್ಕಳಿಗೆ ಹುರುಕು, ಕಜ್ಜಿ, ಹುಣ್ಣುಗಳು ಇಲ್ಲದೆ ಸ್ವಚ್ಛವಾಗಿ ಆರೋಗ್ಯವಾಗಿರುವಂತೆ ನೋಡಿಕೊಳ್ಳುವುದು ಅವಶ್ಯ. ಇದಕ್ಕೆ ಮಕ್ಕಳ ಚರ್ಮ ಆರೋಗ್ಯವಾಗಿರುವಂತೆ ನೋಡಿಕೊಳ್ಳಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಮಕ್ಕಳು ನಿತ್ಯವೂ ಸ್ನಾನಮಾಡದೆ, ಕೊಳಕಾಗಿರುವುದು ಸಾಮಾನ್ಯ. ಶಿಕ್ಷಕಿಯು ಇಂಥ ಮಕ್ಕಳ ಪಾಲಕರನ್ನು ಕಂಡು ಮಕ್ಕಳಿಗೆ ಸ್ನಾನ ಮಾಡಿಸಿ ಕಳಿಸುವಂತೆ ನೋಡಿಕೊಳ್ಳಬೇಕು. ಸಾಧ್ಯವಾದರೆ ಶಿಶುವಿಹಾರಗಳಲ್ಲಿ ವಾರಕ್ಕೊಮ್ಮೆ ಯಾದರೂ ಸ್ನಾನದ ಕಾರ್ಯಕ್ರಮವಿಟ್ಟುಕೊಂಡು ಸ್ನಾನದ ರೀತಿಯನ್ನು ಮಕ್ಕಳಿಗೆ ತಿಳಿಸುವುದು ಒಳ್ಳೆಯದು.

ಮೂತ್ರ ವಿಸರ್ಜನೆ: ಹಳ್ಳಿಗಳಲ್ಲಿ ಬಯಲು ವಿಶಾಲವಾಗಿರುತ್ತದೆ; ಬಯಲಿ ದಲ್ಲಿ ಮೂತ್ರ ವಿಸರ್ಜನೆ ಮಾಡುತ್ತಾರೆ; ರಸ್ತೆಯ ಅಕ್ಕಪಕ್ಕಗಳಲ್ಲಿ ಸಹ ಮಲವಿಸ ರ್ಜನೆ ಮಾಡುತ್ತಾರೆ. ಇದರಿಂದ ಮಕ್ಕಳಲ್ಲಿ ರೋಗಗಳು ಹಬ್ಬುವುದಕ್ಕೆ ಆಸ್ಪದ ವಾಗುತ್ತದಲ್ಲದೆ ಅಸಹ್ಯವೂ ಹೌದು. ಆದ್ದರಿಂದ ಬಾಲವಾಡಿಯಲ್ಲಿ ಈ ಬಗ್ಗೆ ಯೋಗ್ಯ ವ್ಯವಸ್ಥೆ ಇದ್ದು ಅದನ್ನು ಪಾಲಕರ ಗಮನಕ್ಕೂ ತರಬೇಕು.

ನಿರ್ಗಂಧ ಮೂತ್ರ ವಿಸರ್ಜನೆ ವ್ಯವಸ್ಥೆಗಳಿದ್ದರೆ ಒಳ್ಳೆಯದು. ಹಳ್ಳಿಯಲ್ಲಿ ಇದು ಸಾಧಿಸದೇ ಹೋದರೆ ಒಂದು ತಗ್ಗು ತೆಗೆಸಿ ಅದಕ್ಕೆ ಒಣಗಿದ ಎಲೆಗಳನ್ನು ತುಂಬಿಸ ಬೇಕು. ಮೇಲಿಂದ ಮೇಲೆ ಈ ಎಲೆಗಳನ್ನು ಬದಲಿಸಬೇಕು; ಮಕ್ಕಳಿಗೆ ಇಂಥ ಸ್ಥಳ ದಲ್ಲಿಯೇ ಮೂತ್ರಮಾಡಲು ಹೇಳಬೇಕು.

ಮಲವಿಸರ್ಜನೆ: ಇದಕ್ಕಾಗಿ ಚಿಕ್ಕ ತಗ್ಗು ತೆಗೆದು ಅದರ ಮೇಲೆ ಎರಡು ಫಲಕ (ಹಲಗೆ) ಗಳನ್ನು ಹಾಕಬೇಕು. ಶೌಚಕ್ಕೆ ಹೋಗುವಾಗ ನೀರು ತೆಗೆದುಕೊಂಡು

ಹೋಗಬೇಕು ಮತ್ತು ಶೌಚವಿಧಿ ಮುಗಿದ ಮೇಲೆ ಮಣ್ಣು ಹಾಕಬೇಕೆಂಬುದನ್ನು ಒತ್ತಾಯಪೂರ್ವಕವಾಗಿ ಮಕ್ಕಳಿಗೆ ಕಲಿಸಬೇಕು. ಈ ತಗ್ಗು ತುಂಬಿದರೆ ಬೇರೆ ತಗ್ಗು ತೆಗೆಯಬೇಕು.

ಒಟ್ಟಿನಲ್ಲಿ ಶಿಶುವಿಹಾರದ ಮಕ್ಕಳಿಗೆ ಎಲ್ಲ ಹಂತಗಳಲ್ಲಿಯೂ ಸ್ವಚ್ಛತೆಯನ್ನು ಅಭ್ಯಾಸ ಮಾಡಿಸಬೇಕು. ಅವರ ಒಂದು ದಾಖಲೆಪತ್ರವಿಟ್ಟು ವಾರಕ್ಕೊಮ್ಮೆ ನಿರ್ದಿಷ್ಟದಿನ ಅವರ ಸ್ವಚ್ಛತೆಯ ಪರೀಕ್ಷೆಮಾಡಿ ನಮೂದಿಸಬೇಕು. ಆ ದಿನ ಗೈರು ಹಾಜರಿದ್ದ ಮಕ್ಕಳನ್ನು ಮರುದಿನ ಪರೀಕ್ಷಿಸಿ ವಿವರ ಬರೆಯಬೇಕು. ಪ್ರತಿತಿಂಗಳೂ ಈ ದಾಖಲೆ ಪತ್ರ ಬದಲಿಸಿ ಹಿಂದಿನ ತಿಂಗಳದನ್ನು ಫೈಲುಮಾಡಿಡಬೇಕು. ಇದರಿಂದ ಮಕ್ಕಳಲ್ಲಿ ಸ್ವಚ್ಛತೆಯ ಬಗ್ಗೆ ಆಗುತ್ತಿರುವ ಸುಧಾರಣೆ ಅಥವಾ ಬದಲಾವಣೆ ಗಮನಕ್ಕೆ ಬರುತ್ತದೆ.

ಪರಿಸರದ ಸ್ವಚ್ಛತೆ ಮತ್ತು ವ್ಯವಸ್ಥಿತತನ

ಪರಿಸರದ ಸ್ವಚ್ಛತೆ ವೈಯಕ್ತಿಕ ಸ್ವಚ್ಛತೆಯಷ್ಟೇ ಅವಶ್ಯವೆಂದು ಮಕ್ಕಳಿಗೆ ಮನಗಾಣಿಸಬೇಕು. ಅದಕ್ಕಾಗಿ ತಕ್ಕ ಕಾರ್ಯಕ್ರಮಗಳನ್ನು ಶಿಶುವಿಹಾರಗಳಲ್ಲಿ ಅಳವಡಿಸಿಕೊಂಡಿರಬೇಕು. ಈ ವಿಹಾರವು ಮನೆಯಲ್ಲಿರಲಿ, ಗುಡಿಸಲಲ್ಲಿರಲಿ, ಮರದ ಕೆಳಗೇ ನಡೆಯುತ್ತಿರಲಿ, ಅದನ್ನು ಸ್ವಚ್ಛವಾಗಿರಿಸುವ ಬಗ್ಗೆ ಮಕ್ಕಳಿಗೆ ತಕ್ಕ ಕಲ್ಪನೆಯಿರಬೇಕು.

ಕಸ ಗುಡಿಸುವಿಕೆ: ಪರಿಸರದ ಸ್ವಚ್ಛತೆಯಾಗಬೇಕಾದರೆ ಅಸ್ತವ್ಯಸ್ತವಾಗಿ ಬಿದ್ದ ವಸ್ತುಗಳನ್ನು ವ್ಯವಸ್ಥಿತವಾಗಿಟ್ಟು ಉಪಯುಕ್ತ ವಸ್ತುಗಳು ಕಸದಲ್ಲಿ ಸೇರಿಹೋಗದಂತೆ ಆಯ್ದು ಎತ್ತಿಟ್ಟು ಬಳಿಕ ಕಸ ಗುಡಿಸುವ ವಾಡಿಕೆಯನ್ನು ವಿಹಾರದ ಶಿಕ್ಷಕಿ ಪಾಲಿಸಬೇಕು. ಇದಕ್ಕಾಗಿ ಚಿಕ್ಕ ಚಿಕ್ಕ 6–8 ಕಸಬರಿಗೆ ಹಾಗೂ ಕಸದ ಬುಟ್ಟಿಗಳಿರಬೇಕು. ಶುಚಿತ್ವದ ಪ್ರಜ್ಞೆಗೆ ಮುನ್ನ ಮಕ್ಕಳ ಕಣ್ಣಿಗೆ ಎದ್ದು ಕಾಣುವಂತೆ ಕೋಣೆಯಲ್ಲಿ ಕಸ ಇರಬೇಕು. ಕೈಕೆಲಸದ ನಂತರ ಕಾಗದದ ಚೂರು ಬಹಳ ಬಿದ್ದಿರುತ್ತದೆ. ತರಕಾರಿ ಹೆಚ್ಚಿದ ನಂತರ ಬಹಳಷ್ಟು ಕಸ ಬಿದ್ದಿರುತ್ತವೆ. ಆಗ ಗುಡಿಸುವ ಚಟುವಟಿಕೆ ಇಟ್ಟುಕೊಳ್ಳುವುದು ಒಳ್ಳೆಯದು. ಗಾಳಿಯ ದಿಕ್ಕನ್ನು ನೋಡಿಕೊಂಡು ನೆಲದ ಮೇಲೆ ಕಸ ಗುಡಿಸುವಿಕೆಯ ದಿಕ್ಕನ್ನು ಗುರ್ತಿಸಬೇಕು. ಹಾಗೆಯೇ ಕಸದಲ್ಲಿ ಉಪಯುಕ್ತ ಕೆಲವು ವಸ್ತುಗಳು ಬೀಳದಂತೆ ನೋಡಿಕೊಳ್ಳಬೇಕು. ಕಸ ತೆಗೆದ ನಂತರ ಕೈಕಾಲು ತೊಳೆಯಬೇಕಾಗುವುದು ಅವಶ್ಯ.

ಈ ಶಿಕ್ಷಣಕ್ಕೆ ಮುನ್ನ ಆ ಸ್ಥಳವನ್ನು 6–8 ಭಾಗಮಾಡಿ ಮಕ್ಕಳಿಗೆ ಹಂಚಿಕೊಡಬೇಕು. ಪ್ರತಿಭಾಗದ ಕಸವನ್ನೂ ಒಂದು ನಿರ್ದಿಷ್ಟ ಸ್ಥಳದಲ್ಲಿ ಕೂಡಿಸುವಂತೆ ತಿಳಿ ಹೇಳಬೇಕು. ಪೊರಕೆ ಹಿಡಿಯುವ ರೀತಿ ಮತ್ತು ಭೂಮಿಗೆ ಹೊಂದಿದಂತೆ ಕಸಬರಿಗೆ ಬಳಿದು

ಪೂರ್ವಕವಾಗಿ ಹೇರಿದಾಗ ಪ್ರತಿಭಟನಾತ್ಮಕವಾಗಿ ಹೀಗೆ ಮಾಡಬಹುದು ಅಥವಾ ಇತರ ಕಾರಣಗಳಿಂದುಂಟಾದ ಮನಸ್ಸಿನ ಅಸ್ಥಿರತೆ ಇಲ್ಲಿಯೂ ಕಂಡುಬರಬಹುದು. ಮಕ್ಕಳು ಸ್ವಭಾವತಃ ವ್ಯವಸ್ಥಿತತನ, ಶಿಸ್ತುಪ್ರಿಯರು.

ವ್ಯವಸ್ಥಿತತೆಯು ಒಂದು ಮನಸ್ಸಿನ ರೂಢಿಯಷ್ಟೆ. ಅದನ್ನು ಸ್ಥಿರಗೊಳಿಸಲು ಅಂಥ ಕ್ರಿಯೆಗಳ ಪುನರಾವರ್ತನೆಯಾಗಬೇಕು. ಇದು ಚಿಕ್ಕಂದಿನಲ್ಲಿಯೇ ಸಾಧಿಸ ಬೇಕಾದರೆ ಅದರ ಅನುಭವ ಹಿತವಾದದ್ದು ಮತ್ತು ಉಪಯುಕ್ತವಾದದ್ದು ಎಂಬ ವಿಚಾರ ಮಕ್ಕಳಿಗೆ ತಿಳಿಯಬೇಕು. ಅದು ಒತ್ತಾಯಪೂರ್ವಕವಾಗಿ ಅವರ ಮೇಲೆ ಹೇರಿದುದಾಗದೆ ಅವರೇ ಸ್ವೇಚ್ಛೆಯಿಂದ ರೂಢಿಸಿಕೊಳ್ಳುವಂತೆ ಪ್ರೇರೇಪಿಸಬೇಕು. ಆಗಲೇ ಅದು ಹೆಚ್ಚು ದಿನ ಅವರಲ್ಲಿ ಉಳಿಯುವುದು ಸಾಧ್ಯ.

ದೊಡ್ಡವರು ಮಕ್ಕಳನ್ನು ಪ್ರೀತಿಸುತ್ತಾರೆಂಬುದು ಅವರಿಗೆ ತಿಳಿಯುತ್ತದೆ. ಅಂತೆಯೇ ದೊಡ್ಡವರಲ್ಲಿ ಅವರ ವಿಶ್ವಾಸ ಹೆಚ್ಚು : ಅವರು ಹೇಳಿದ್ದನ್ನು ಕೇಳುತ್ತಾರೆ; ಮಾಡುತ್ತಾರೆ. ಅವರ ವಿಶ್ವಾಸಕ್ಕೆ ಧಕ್ಕೆ ಬಾರದಂತೆ ಸೂಚನೆಗಳ ಮೂಲಕ ಮಕ್ಕಳು ಶಿಸ್ತು ಪಾಲಿಸುವಂತೆ ನೋಡಿಕೊಳ್ಳಬೇಕು. ಒಮ್ಮೆ ಉದ್ಧಟರಾಗಿ ಅವ್ಯವಸ್ಥಿತ ರೀತಿಯಲ್ಲಿ ಬದುಕುವುದನ್ನು ಕಲಿತರೆ ಅವರನ್ನು ಮತ್ತೆ ಸುಧಾರಿಸುವುದು ಕಷ್ಟ ಸಾಧ್ಯ. ಆದುದರಿಂದಲೇ ಚಿಕ್ಕಂದಿನಿಂದಲೇ ವ್ಯವಸ್ಥಿತತನವನ್ನೂ, ಶಿಸ್ತನ್ನೂ ಮೈಗೂಡಿಸಿ ಕೊಳ್ಳುವಂತೆ ಸಹಾಯಮಾಡುವುದೇ ಉತ್ತಮ ಮಾರ್ಗ.

ವ್ಯವಸ್ಥಿತತನ ಮತ್ತು ರಚನಾ ಕೌಶಲ್ಯ : ಶಿಶುವಿಹಾರದಲ್ಲಿರುವ ಎಲ್ಲ ವಸ್ತುಗಳನ್ನೂ ಮಕ್ಕಳು ಉಪಯೋಗಿಸಬಹುದಾದ ರೀತಿಯಲ್ಲಿ ಅವರ ಕೈಗೆ ಸಿಕ್ಕುವಂತೆ ಅಂದರೆ, ಭೂಮಿಯಿಂದ ಕೆಲವೇ ಅಡಿಗಳ ಅಂತರದಲ್ಲಿಟ್ಟಿರಬೇಕು. ಚಿತ್ರಗಳು ಮತ್ತಿತರ ವಸ್ತುಗಳನ್ನು ಮಕ್ಕಳು ತಮಗೆ ಬೇಕಾದ ರೀತಿಯಲ್ಲಿ ಗೋಡೆಗೆ ತೂಗಿಹಾಕಲು ಇಲ್ಲವೇ ಕಪಾಟು, ಮೇಜುಗಳ ಮೇಲೆ ತಾವೇ ಜೋಡಿಸಿಡಲು ಅನುಕೂಲತೆಗಳಿರಬೇಕು. ಹಾಗೆಯೇ ವಿವಿಧ ವಸ್ತುಗಳು, ವಸ್ತ್ರ, ಚಪ್ಪಲಿ, ಬೂಟು ಇತ್ಯಾದಿಗಳನ್ನಿಡಲೂ ನಿಶ್ಚಿತ ಸ್ಥಳವಿರಬೇಕು. ಮಕ್ಕಳು ಆಯಾ ವಸ್ತುಗಳನ್ನು ಅವುಗಳ ನಿಶ್ಚಿತ ಸ್ಥಳದಲ್ಲೇ ಇಡುವಂತೆ ಶಿಕ್ಷಕಿ ಆಗ್ರಹಪಡಿಸಬೇಕು.

ಉಪಾಹಾರ, ಮುಕ್ತ ವ್ಯವಸಾಯ, ಆಟ ಹಾಗೂ ಜೀವನ ವ್ಯವಹಾರದ ಇತರ ಅನೇಕ ಚಟುವಟಿಕೆಗಳಿಗಾಗಿ ಮಕ್ಕಳು ಅನೇಕ ವಸ್ತುಗಳನ್ನೂ ಆಟಿಕೆಗಳನ್ನೂ ಉಪ ಯೋಗಿಸುತ್ತಾರೆ. ಅವುಗಳನ್ನು ಆಯಾ ಸ್ಥಳಗಳಿಂದ ತಂದು, ಕೆಲಸ ಮುಗಿದ ನಂತರ ಆಯಾ ಸ್ಥಳಗಳಲ್ಲಿಯೇ ಇಡಬೇಕು. ಕೆಲಸ ಮುಗಿದ ಬಳಿಕ ಆಯಾ ವಸ್ತುಗಳನ್ನು ತಿರುಗಿ ಹಿಂದಿನ ಸ್ಥಳಗಳಲ್ಲಿಯೇ ಇಡಬೇಕೆಂದು ಶಿಕ್ಷಕಿ ಹೇಳಿದಾಗ ಬಹಳ ಗದ್ದಲವಾಗ

ಬಾರದಂತೆ ಶಿಕ್ಷಕಿ ಹರಟೆ ವೇಳೆಯಲ್ಲಿ, ಅನುಕೂಲ ಸಮಯದಲ್ಲಿ ಸೂಚನೆಕೊಟ್ಟು ಗದ್ದಲವಾಗದಂತೆ ವ್ಯವಸ್ಥಿತ ರೀತಿಯಲ್ಲಿ ಚಟುವಟಿಕೆ ಆರಂಭಿಸಿ ಮುಗಿಸಬೇಕು. ಶಿಶುವಿಹಾರದ ಈ ಬಗೆಯ ಶಿಸ್ತು, ವ್ಯವಸ್ಥಿತತನ ಇತ್ಯಾದಿ ನಿಯಮಗಳಿಗೆ ಹೊಂದಿಕೊಂಡ ಮಕ್ಕಳು ಮನೆಯಲ್ಲಿಯೂ ಸಹ ಇದೇ ರೀತಿ ಇರಲು ಪ್ರಯತ್ನಿಸುತ್ತಾರೆ. ಅಲ್ಲಿ ಕೂಡ ಸುಧಾರಣೆಗೆ ತರಲು ಸಹಾಯ ಮಾಡುತ್ತಾರೆ. ಇದಕ್ಕೆ ಕುಟುಂಬದ ಹಿರಿಯರ ಸಹಾಯ, ಸಹಕಾರಗಳೂ ಅವಶ್ಯ.

ರೀತಿನೀತಿ, ನಡೆವಳಿಕೆಗಳು: ಸಮಾಜದಲ್ಲಿ ಸುಖ, ಶಾಂತಿ, ನೆಮ್ಮದಿಗಳಿಂದ ಬದುಕಿ ಇತರರಿಗೂ ಬದುಕಲು ಅವಕಾಶ ಮಾಡಿಕೊಡಬೇಕಾದರೆ ಸಮಾಜದ ರೀತಿನೀತಿಗಳನ್ನು ತಿಳಿದು ತಮ್ಮ ನಡೆವಳಿಕೆಯನ್ನು ತಕ್ಕಂತೆ ಹೊಂದಿಸಿಕೊಳ್ಳುವುದು ಅವಶ್ಯ. ಚಿಕ್ಕವಯಸ್ಸಿನಲ್ಲಿ ರೂಢಿಯಾದ ಪದ್ಧತಿಗಳು ಜೀವನದಾದ್ಯಂತ ಸೌಹಾರ್ದ ಜೀವನ ನಡೆಸಲು ಸಹಕಾರಿಯಾಗುತ್ತವೆ. ಮಕ್ಕಳಿಗೆ ಸನ್ನಡೆವಳಿಕೆಯನ್ನು ಒತ್ತಾಯದಿಂದ ಕಲಿಸಬೇಕಿಲ್ಲ: ಇಲ್ಲವೇ ರೌಡಿ, ಕೊಳಕ, ಗೂಂಡಾ, ಜಗಳೀ ಎಂದು ಅವಾಚ್ಯ ಶಬ್ದಗಳಿಂದ ಅವಮಾನಗೊಳಿಸುವುದರಿಂದಲೂ ಸುಧಾರಿಸುವುದಿಲ್ಲ. ಮೂದಲಿಕೆಗಳಿಂದ ಅವರ ಆತ್ಮಪ್ರತಿಷ್ಠೆಗೆ ಧಕ್ಕೆಯುಂಟಾಗಿ ಸುಧಾರಣೆಗೆ ಬದಲು ಹಠವಾದಿಗಳಾಗಿ ತಪ್ಪುಮಾರ್ಗಕ್ಕೆ ಹೋಗುತ್ತಾರೆ. ಮಕ್ಕಳಿಗೆ ಸಂಯಮದಿಂದ ನಡೆವಳಿಕೆಯನ್ನು ರೂಢಿಸಬೇಕು.

ರೀತಿನೀತಿಯ ಶಿಕ್ಷಣ ಒಳ್ಳೆಯ ವಾತಾವರಣದಿಂದಾಗಿ ಅಕಸ್ಮಾತ್ ಆಗುವಂತಿರಬೇಕು. ಒಳ್ಳೆಯ ವಾತಾವರಣದಲ್ಲಿ ಮಕ್ಕಳು ಅನುಕರಣದಿಂದಲೇ ಈ ವಿಷಯಗಳನ್ನು ಕಲಿತುಕೊಳ್ಳುತ್ತಾರೆ. ಈ ದಿಸೆಯಲ್ಲಿ ವ್ಯಕ್ತಿಗತವಾಗಿ ಸೂಚನೆ ಕೊಡುವುದು, ಹರಟೆ ವೇಳೆಯಲ್ಲಿ ಸಾಮೂಹಿಕವಾಗಿ ತಿಳಿಹೇಳುವುದೂ ಅವಶ್ಯ.

ನ್ಯಾಯಭಾವನೆ, ಸಹಾನುಭೂತಿ ಇವೂ ಸಹ ಸಾಮಾಜಿಕತೆ ಬೆಳೆಯುವಲ್ಲಿ ಅವಶ್ಯ. ಮಕ್ಕಳು ಆಟಿಕೆಗಳನ್ನು ಸರದಿ ಪ್ರಕಾರ ತೆಗೆದುಕೊಳ್ಳುವುದು, ಒಬ್ಬರು ಅದನ್ನು ಉಪಯೋಗಿಸುತ್ತಿರುವಾಗ ತನಗೆ ಬೇಕಿದ್ದನ್ನು ಬಲಾತ್ಕಾರವಾಗಿ ಕಸಿದುಕೊಳ್ಳದಿರುವುದು, ದೊಡ್ಡ ದನಿಯಲ್ಲಿ ಕೂಗಾಡದಿರುವುದು, ಹೇಳಬೇಕಾದ ವಿಷಯವನ್ನು ನಿಧಾನವಾಗಿ, ಸಂಕ್ಷಿಪ್ತವಾಗಿ ತಿಳಿಯಹೇಳುವುದು, ಇತರರಿಗೆ ಸಹಾಯಬೇಕಿದ್ದಾಗ ಅಗತ್ಯ ನೆರವು ನೀಡುವುದು, ತಾನು ಆಡುವುದರಿಂದ ಇತರರಿಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು, ಸಹಕಾರದ ಭಾವನೆ ಬೆಳಸಿಕೊಳ್ಳುವುದು ಇವೆಲ್ಲ ಸಾಮಾಜಿಕ ಜೀವನದ ಆವಶ್ಯಕತೆಗಳು. ಉಣ್ಣುವಾಗ, ಕುಡಿಯುವಾಗ ಲೊಚ ಲೊಚ ಎಂದು ಬಾಯಿ ಸಪ್ಪಳ ಮಾಡುವುದು, ಚಿಕ್ಕ ಚಿಕ್ಕ ವಿಷಯಗಳಿಗೆ ಕೋಪಿಸಿಕೊಳ್ಳುವುದು, ಮಾತಾಡುವ ಕಾರಣವಿಲ್ಲದೆಯೇ ದೊಡ್ಡಧ್ವನಿಯಲ್ಲಿ ಕೂಗಾಡುವುದು, ಯೋಗ್ಯರೀತಿಯಲ್ಲಿ ನಮಸ್ಕಾರ

ಮಾಡುವುದು, ಸರಿಯಾಗಿ ಉಡುಪು ಧರಿಸಿಕೊಳ್ಳುವುದು, ಗುಂಡಿ ಹಾಕಿಕೊಳ್ಳುವುದು ಇತ್ಯಾದಿಗಳೆಲ್ಲ ವೈಯಕ್ತಿಕವಾದುವು. ಇವುಗಳಿಂದಲೂ ಸಾಮಾಜಿಕ ಪರಿಣಾಮಗಳಾಗುತ್ತವೆ. ಮಕ್ಕಳ ಸ್ವಾರ್ಥಸ್ವಭಾವ ಕಡಮೆಯಾಗಿ ಎರಡನೆಯವರ ಹಿತ, ದುಃಖಗಳ ಕಡೆಗೆ ಗಮನಕೊಡುವಂತಾಗಬೇಕು.

ಮಕ್ಕಳು ಶಿಷ್ಟ ಭಾಷೆಯನ್ನೇ ಉಪಯೋಗಿಸುವಂತೆ ನೋಡಿಕೊಳ್ಳಬೇಕು. 'ಆಟಿಕೆ ತಾ', 'ನೀರು ಕೊಡು' ಎಂದು ಆಜ್ಞಾಧ್ವನಿಯಲ್ಲಿ ಕೇಳುವುದಕ್ಕಿಂತ ಸೌಮ್ಯವಾಗಿ 'ಆಟಿಕೆ ಕೊಡುತ್ತೀಯಾ', 'ನೀರು ಕೊಡುತ್ತೀಯಾ' ಎಂದು ಕೇಳುವಂತೆ ಸೂಚಿಸಬೇಕು. ಮಕ್ಕಳು ಅವಾಚ್ಯ ಶಬ್ದ, ಬೈಗುಳನ್ನು ಉಪಯೋಗಿಸದಂತೆ ನೋಡಿಕೊಳ್ಳಬೇಕು. ಮಕ್ಕಳು ಸಾಮಾನ್ಯವಾಗಿ ಇಂಥ ಶಬ್ದಗಳನ್ನು ಬೇರೆ ಬೇರೆ ಪ್ರಸಂಗಗಳಲ್ಲಿ ಕೇಳುತ್ತಾರೆ. ಅವುಗಳ ಅರ್ಥ ತಿಳಿಯದೇ ಹೋದರೂ, ದೊಡ್ಡವರ ಅನುಕರಣೆ ಮಾಡಿ ಆ ಶಬ್ದಗಳನ್ನು ತಾವು ಉಪಯೋಗಿಸುತ್ತಾರೆ. ತಮ್ಮ ಭಾವನೆಗಳ ಅಭಿವ್ಯಕ್ತಿಗೆ ಮಕ್ಕಳಿಗೆ ಶಬ್ದಗಳು ಬೇಕು. ಅದಕ್ಕಾಗಿ ದೊಡ್ಡವರು ಉಪಯೋಗಿಸಿದ ಶಬ್ದಗಳನ್ನೇ ತಾವು ಉಪಯೋಗಿಸುತ್ತಾರೆ. ಸೂಚನೆಗಳ ಮೂಲಕ ಹರಟೆ ವೇಳೆಯಲ್ಲಿ ಅವುಗಳ ಬಗ್ಗೆ ತಿಳಿವಳಿಕೆ ಕೊಟ್ಟು ಇಂಥ ದುರಭ್ಯಾಸ ಕಳೆಯಬೇಕು.

ಮಕ್ಕಳ ಆರೋಗ್ಯಪಾಲನೆಯು ವೈಯಕ್ತಿಕ ಸ್ವಚ್ಛತೆ, ಪರಿಸರದ ಸ್ವಚ್ಛತೆ, ನಿದ್ದೆ, ದೈಹಿಕ ಚಟುವಟಿಕೆ ಹಾಗೂ ಸೇವಿಸುವ ಆಹಾರಗಳನ್ನು ಅವಲಂಬಿಸಿರುತ್ತದೆ. ಅಲ್ಲದೆ ಊಟದ ಪ್ರಸಂಗ ಮತ್ತು ತಿನ್ನುವ ಆಹಾರ ಪದಾರ್ಥಗಳ ಬಗ್ಗೆ ಮಕ್ಕಳು ತಮ್ಮದೇ ಆದ ಕೆಲವು ಅಭ್ಯಾಸಗಳನ್ನು ರೂಢಿಸಿಕೊಂಡಿರುತ್ತಾರೆ; ವಿವಿಧಾನುಭವಗಳನ್ನು ಪಡೆದಿರುತ್ತಾರೆ. ಅವು ತೃಪ್ತಿಕರವಾಗಿರಬಹುದು ಅಥವಾ ಅತೃಪ್ತಿಕರವಾಗಿರಲೂ ಬಹುದು. ಇವುಗಳ ಪರಿಣಾಮವು ಶಿಶುವಿಹಾರದಲ್ಲಿ ಮಕ್ಕಳು ಸೇವಿಸುವ ಆಹಾರ ಮತ್ತು ವರ್ತನೆಗಳ ಮೇಲೆ ಪರಿಣಾಮ ಬೀರಬಹುದು.

ಆಹಾರದ ಬಗ್ಗೆ ದೊಡ್ಡವರ ಅಭಿಪ್ರಾಯ, ವರ್ತನೆ, ಭಾವನೆಗಳನ್ನು ಮಗು ನಿರೀಕ್ಷಿಸಿರುತ್ತದೆ. ಅವುಗಳ ಪರಿಣಾಮ ಅದರ ಆಹಾರ ಸೇವನೆಯಲ್ಲಿ ಬಹುವಾಗಿ ಕಂಡುಬರುತ್ತದೆ. ಏಕೆಂದರೆ ಮಗು ತನ್ನ ಆಹಾರಕ್ಕಾಗಿ ಬಹಳಷ್ಟು ವರ್ಷ ದೊಡ್ಡವರನ್ನೇ ಅವಲಂಬಿಸಿರುತ್ತದೆ. ಮನೆಯಲ್ಲಿ ಊಟ ಮಾಡುವಾಗ ಇರುವ ವಾತಾವರಣ, ದೊಡ್ಡವರ ನಡೆವಳಿಕೆಗಳು ಸಹಜವಾಗಿಯೇ ಅದರ ಮನಸ್ಸಿನ ಮೇಲೆ ಪರಿಣಾಮ ಬೀರುತ್ತವೆ. ಇಂಥ ಸಂದರ್ಭಗಳು ಶಾಂತಿ, ಸಂತೋಷದಾಯಕವಾಗಿದ್ದರೆ ಮಗುವಿಗೆ ಆಹಾರದ ಬಗ್ಗೆ ಅಷ್ಟೇ ಸುಖದ ಅನುಭವ ಸಿಗಬಲ್ಲದು. ಊಟದ ಪ್ರಸಂಗ ಗದ್ದಲ, ಗಲಾಟೆ, ತೊಂದರೆದಾಯಕವಾಗಿದ್ದರೆ ಮಗುವಿಗೆ ಊಟದ ಬಗ್ಗೆ ತಿರಸ್ಕಾರ ,ಬೇಸರಗಳೂ ಉಂಟಾಗಬಹುದು. ಇಂಥ ಪ್ರಸಂಗಗಳ ಅನರ್ಥ ತಪ್ಪಿಸುವುದರಲ್ಲಿ ಶಿಶುವಿಹಾರದ

ಊಟ ಅಥವಾ ಉಪಾಹಾರ ಕಾರ್ಯಕ್ರಮವೂ ಒಂದು ಸಾಧನವಾಗಬಲ್ಲದು. ಇಲ್ಲಿ ಎಲ್ಲ ಮಕ್ಕಳಿಗೂ ಶಿಸ್ತು, ಸಮಾಧಾನ, ಸಂತೋಷಗಳಿಂದ ಒಟ್ಟಾಗಿ ಕುಳಿತು ಆಹಾರ ಸೇವಿಸುವ ಅವಕಾಶ ಸಿಗುತ್ತದೆ.

ಮಗುವಿಗೆ ಪೌಷ್ಟಿಕವಾದ, ವಿವಿಧ ರುಚಿಗಳ ಆಹಾರಸೇವನೆಯ ಅನುಭವವೂ ಬರಬೇಕು. ಆಹಾರದ ಬಗ್ಗೆ ಇರುವ ಕೆಲವು ನಿಷೇಧಗಳು ಅಥವಾ ತಪ್ಪು ಕಲ್ಪನೆಗಳನ್ನೂ ಸಹ ಈ ಮೂಲಕ ಹೋಗಲಾಡಿಸಬಹುದು. ಇದಲ್ಲದೆ ಆಹಾರ ಸೇವಿಸುವಾಗ ಪಾಲಿಸಬೇಕಾದ ಕೆಲವು ರೂಢಿ, ನಿಯಮಗಳನ್ನು ಮಗು ಕಲಿತು, ಅನುಷ್ಠಾನಕ್ಕೆ ತರಲೂ ಈ ಉಪಾಹಾರ ಕಾರ್ಯಕ್ರಮ ಸಹಾಯಕವಾಗಬಲ್ಲದು. ತನ್ನ ಓರಗೆಯವರೊಂದಿಗೆ ಕುಳಿತು ತಿನ್ನುವುದರಿಂದ ಮಗು ಎಲ್ಲರಂತೆ ಶಿಸ್ತಿನಿಂದ ತಿನ್ನಲು ಸ್ವಪ್ರಯತ್ನ ಮಾಡುತ್ತದೆ. ಇತರ ಚಟುವಟಿಕೆಗಳಲ್ಲಿಯಂತೆ ಇಲ್ಲಿಯೂ ಸಹ ಅದು ಸ್ವಾವಲಂಬಿತ್ವವನ್ನು ಬೆಳೆಸಿಕೊಳ್ಳಲು ಅವಕಾಶ ಸಿಕ್ಕುತ್ತದೆ.



ಚಿತ್ರ 2: ಉಪಾಹಾರ

ಮಕ್ಕಳ ಊಟದ ಬಗ್ಗೆ ಶಿಕ್ಷಕಿ ಕೆಲವು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಮಗು ತನ್ನ ಊಟದಲ್ಲಿ ಎರಡನೆಯವರ ಸಹಾಯವನ್ನು ಹೆಚ್ಚಾಗಿ ಅಪೇಕ್ಷಿಸುವುದಿಲ್ಲ. ಊಟ ಮೂಲ ಬೇಡಿಕೆಯನ್ನು ಪೂರೈಸುವುದರಿಂದ ಹಸಿದ ಮಗು ಊಟಮಾಡುವಲ್ಲಿ ಸಂತೋಷ, ತೃಪ್ತಿಯನ್ನೇ ಪಡೆಯುತ್ತದೆ. ಆದ್ದರಿಂದ ಹೊರಾಂಗಣದ

ಚಟುವಟಿಕೆಗಳ ನಂತರ ಮಕ್ಕಳಿಗೆ ಉಪಾಹಾರ ಕೊಡಬೇಕು. ಊಟದ ನಿಯಮಗಳನ್ನು ಕಡ್ಡಾಯ ಮಾಡುವುದರಿಂದ, ಹೊಸ ಹೊಸ ಆಹಾರಗಳನ್ನು ಮೇಲಿಂದ ಮೇಲೆ ಕೊಡಲು ಹೋದರೆ, ಹೊಸಪದ್ಧತಿಗಳಿಗೆ ಹೊಂದಿಕೊಳ್ಳಬೇಕಾದ ಸಮಯಾವಕಾಶ ಸಿಕ್ಕದೆ ಮಗು ತೊಂದರೆಪಟ್ಟುಕೊಳ್ಳುತ್ತದೆ. ಅದರ ಉತ್ತೇಜಿತ ಭಾವನೆಗಳೂ, ಮಾನಸಿಕ ಘರ್ಷಣೆಯೂ ಹಸಿವೆಯ ಮೇಲೆ ಪರಿಣಾಮ ಬೀರುತ್ತವೆ. ಮಗು ಬಹಳ ಉತ್ಸುಕ ಅಥವಾ ಕಾತರವಾದಾಗ ಊಟದ ಬಗ್ಗೆ ತೊಂದರೆ ಕೊಡುವುದೂ ಸಹಜ. ಆಗ ಊಟದ ಬಗ್ಗೆ ಹೆಚ್ಚು ಒತ್ತಾಯಪಡಿಸದೆ, ಮಾನಸಿಕ ತೊಂದರೆಗೆ ಇರುವ ಮೂಲ ಕಾರಣವನ್ನು ನಿವಾರಿಸಿದರೆ, ಶಾಂತಚಿತ್ತದಿಂದ ಊಟಮಾಡುತ್ತದೆ. ಇಂಥ ಪ್ರಸಂಗದಲ್ಲಿ ಊಟಕ್ಕಾಗಿ ಒತ್ತಾಯಿಸಿದರೆ ಬಹುಶಃ ಆಹಾರದ ವಸ್ತುಗಳ ಮೇಲೆಯೇ ಮಗುವಿಗೆ ತಿರಸ್ಕಾರ, ಕೋಪ ಉಂಟಾಗಬಹುದು. ಮಕ್ಕಳಿಗೆ ಕೊಡುವ ಆಹಾರದ ಪ್ರಮಾಣ ಹೆಚ್ಚಾಗಿರದೆ ಅವರ ದೈಹಿಕ ಬೇಡಿಕೆಗೆ ತಕ್ಕಪ್ರಮಾಣದಲ್ಲಿರಬೇಕು. ತಮ್ಮ ದೈಹಿಕ ಅವಶ್ಯಕತೆಗೆ ತಕ್ಕಂತೆ ಮಗು ಊಟಮಾಡುವುದರಿಂದ ಆಹಾರದ ಪ್ರಮಾಣಕ್ಕೆ ಮಹತ್ವ ಕೊಡದೆ ಅದು ದೈಹಿಕ ಅವಶ್ಯಕತೆಗೆ ತಕ್ಕಂತೆ ತಿನ್ನಲು ಅವಕಾಶ ಕೊಡಬೇಕು.

ಮಗು ತನ್ನ ಮಾನಸಿಕ ಸಮತೋಲನೆಯನ್ನು ಕಾಯ್ದುಕೊಳ್ಳಲೂ ಸಹ ಕೆಲವು ನಿರ್ದಿಷ್ಟ ಆಹಾರ ಪದಾರ್ಥಗಳನ್ನು ತಿನ್ನಲು ಇಷ್ಟಪಡುತ್ತದೆ. ಈ ಅಭ್ಯಾಸವನ್ನು ಒತ್ತಾಯದಿಂದ ತಪ್ಪಿಸಲು ಅಥವಾ ಬದಲಿಸಲು ಯತ್ನಿಸಿದರೆ ಒಳಿತಾಗುವ ಬದಲು ಮನಸ್ಸಿಗೆ ಆಘಾತವಾಗಬಹುದು. ಮಗುವಿನಲ್ಲಿ ಸುರಕ್ಷಿತತೆ, ಆತ್ಮವಿಶ್ವಾಸ ಬೆಳೆದು ಬರುವಂತೆ ನೋಡಿಕೊಂಡಾಗ ಎಲ್ಲ ಬಗೆಯ ಆಹಾರ ತಿನ್ನಲು ತಾನಾಗಿಯೇ ಇಷ್ಟಪಡುತ್ತದೆ. ಮಕ್ಕಳು ತಮಗೆ ಆಹಾರ ಕೊಡತಕ್ಕವರ ವರ್ತನೆಯನ್ನು ನಿರೀಕ್ಷಿಸುತ್ತಾರೆ. ತನಗೆ ಉಣಬಡಿಸುವ ಪ್ರೌಢರಿಗೆ ಅದೊಂದು ಸಂತೋಷ, ಹೆಮ್ಮೆಯ ಕೆಲಸವೆಂದು ಮಗುವಿಗೆ ತಿಳಿದರೆ ತಾನೂ ಸಂತೋಷವಾಗಿಯೇ ಊಟಮಾಡುತ್ತದೆ. ಆದರೆ ಅದೊಂದು ಕೆಲಸದ ಹೊರೆಯೆಂದು ಪ್ರೌಢರು ಮಾಡುತ್ತಿದ್ದರೆ, ಅಂಥವರ ಕೈಯಲ್ಲಿ ಊಟ ಮಾಡಲು ಇಷ್ಟಪಡುವುದಿಲ್ಲ.

ಆಹಾರ ಪದಾರ್ಥಗಳನ್ನು ಮುಟ್ಟಿ, ಅದರ ಸ್ಪರ್ಶಾನುಭವ ಪಡೆಯಲು ಮಗು ಇಚ್ಛಿಸುತ್ತದೆ. ಸುತ್ತಲಿನ ಜಗತ್ತಿನಲ್ಲಿಯ ಎಲ್ಲ ವಸ್ತುಗಳ ಬಗ್ಗೆ ಇರುವ ಕುತೂಹಲ ಈ ವಿಷಯದಲ್ಲಿಯೂ ಇರುತ್ತದೆ. ತನ್ನ ಆಹಾರ ಪದಾರ್ಥಗಳನ್ನು ಮುಟ್ಟಿ, ವಾಸನೆ ನೋಡಿ, ತಿಂದು ಅನುಭವಿಸಲು ಇಚ್ಛಿಸುತ್ತದೆ. ಅದು ಊಟುಮಾಡುವ ಕಾಲಾವಧಿ ದೊಡ್ಡವರಿಗೆ ಸಾವಧಾನವಾಗಿ ಕಂಡರೂ ತಾಳ್ಮೆಯಿಂದ ಊಟಮುಗಿಸುವಂತೆ ನೋಡಿಕೊಳ್ಳಬೇಕು. ತಮ್ಮ ಅವಸರಕ್ಕಾಗಿ ಅಥವಾ ನಿಯಮಾವಳಿಗಾಗಿ ಮಗುವನ್ನು ಒತ್ತಾಯಿಸಿದರೆ ಊಟದ ಬಗ್ಗೆ ವಿರೋಧಿಸತೊಡಗುತ್ತದೆ. ಮನೆಯಲ್ಲಿ ಸಿಗದಿರುವ ಸಮಯಾವಕಾಶವನ್ನು ಶಿಶುವಿಹಾರಗಳಲ್ಲಿ ಒದಗಿಸಬೇಕು.

ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಕೈಗೊಂಡಿರುವ ಆಹಾರ ವಿತರಣ ಯೋಜನೆಗಳಿಂದ ಆಹಾರಸಾಮಗ್ರಿಗಳನ್ನು ಶಿಶುವಿಹಾರದ ಉಪಾಹಾರಕ್ಕಾಗಿ ಪಡೆಯಬಹುದು. ಜನತೆಯ, ವಿಶೇಷವಾಗಿ ಪಾಲಕರ ಉದಾರ ಕೊಡುಗೆ (ವಂತಿಗೆ)ಯನ್ನು ಹಣದ ರೂಪದಲ್ಲಾಗಲೀ ಅಥವಾ ಆಹಾರವಸ್ತುಗಳ ರೂಪದಲ್ಲಾಗಲಿ ಉಪಾಹಾರ ಕಾರ್ಯಕ್ರಮಕ್ಕಾಗಿ ಪಡೆಯಬೇಕು. ಇದರಿಂದ ಮಕ್ಕಳಿಗೆ ತಾವು ತಿನ್ನುವ ಆಹಾರದಲ್ಲಿ ತಮ್ಮ ತಂದೆತಾಯಿಗಳ ಕೊಡುಗೆಯೂ ಸೇರಿದೆಯೆಂಬ ಅರಿವು ಮೂಡಿ ಆತ್ಮಾಭಿಮಾನ ಹೆಚ್ಚುತ್ತದೆ. ತಂದೆತಾಯಿಗಳಿಗೂ ತಮಗೆ ಸಾಧ್ಯವಾದಷ್ಟು ತಮ್ಮ ಮಕ್ಕಳಿಗೆ ಕೊಟ್ಟಿದ್ದೇವೆಂಬ ಅಭಿಮಾನವೂ ಉಳಿಯುತ್ತದೆ. ಒಟ್ಟಿನಲ್ಲಿ ಉಪಾಹಾರ ಕಾರ್ಯಕ್ರಮದ ಉದ್ದೇಶ ಸಾಧನೆಯಾಗುವುದು ಮುಖ್ಯ.

ಅಧ್ಯಾಯ 4

ಆಟಪಾಠಗಳು

ಆಟವಾಡುವ ಹಂಬಲ ಮಕ್ಕಳಿಗೆ ಸಹಜ. ಶಿಶುವಿಹಾರದ ಬಹುತೇಕ ಚಟುವಟಿಕೆಗಳು ಆಟದ ಮೂಲಕವೇ ನಡೆಯುತ್ತವೆ. ಇದು ಕ್ರಿಯಾಮೂಲ ಶಿಕ್ಷಣವಿದ್ದು, ಆಟದ ಮೂಲಕವೇ ಪಾಠವಿರುತ್ತದೆ. ಯಾವುದೊಂದು ಕ್ರಿಯೆಯಲ್ಲಿ ಸ್ವಾತಂತ್ರ್ಯವಿದ್ದು ಅದರಿಂದ ಆನಂದ ಉಂಟಾಗುತ್ತಿದ್ದರೆ ಅದೇ ಆಟವಾಗುತ್ತದೆ. ಯಾವುದೊಂದು ಕ್ರಿಯೆಯಲ್ಲಿ ಒತ್ತಾಯವಿದ್ದು, ಧ್ಯೇಯಧೋರಣೆಯ ನಿಬಂಧನೆಗಳಿದ್ದರೆ ಅದೇ ಕೆಲಸವೆನಿಸುತ್ತದೆ.

ನಾಯಿ, ಬೆಕ್ಕುಗಳ ಮರಿಗಳು ಆಟವಾಡುತ್ತ ತಮ್ಮ ಮುಂದಿನ ಜೀವನದ ತಯಾರಿ ಮಾಡುವಂತೆ ಮಕ್ಕಳೂ ಸಹ ತಮ್ಮ ಮುಂದಿನ ಜೀವನದ ತಯಾರಿಯನ್ನು ಆಟಗಳ ಮೂಲಕ ಮಾಡಿಕೊಳ್ಳುತ್ತಾರೆಂಬುದು ಶಿಕ್ಷಣತಜ್ಞರ ಅಭಿಪ್ರಾಯ. ಬುದ್ಧಿ ವಿಕಾಸಕ್ಕೆ ಹೆಚ್ಚು ಅವಕಾಶವಿರುವ ಪ್ರಾಣಿಗಳ ಬಾಲ್ಯ ಕಾಲವೂ ದೊಡ್ಡದು. ಮನುಷ್ಯನೂ ಇವುಗಳಲ್ಲೊಬ್ಬ; ಬಾಲ್ಯಾವಸ್ಥೆಗೂ ಆಟಕ್ಕೂ ನಿಕಟ ಸಂಬಂಧವಿದೆ. ಆಟದ ಮೂಲಕ ಮಗುವಿಗೆ ಯೋಗ್ಯ ಶಿಕ್ಷಣ ಸಿಗಬೇಕು. ಬುದ್ಧಿವಿಕಾಸವಾಗಬೇಕೆಂಬುದು ನಿಸರ್ಗದ ಯೋಜನೆ. ದೊಡ್ಡವರಾದ ಮೇಲೆ ಇತರ ವಿಷಯಗಳ ಕಡೆಗೂ ಗಮನ ಹರಿಯುವುದರಿಂದ ಆಟದಲ್ಲಿ ಚಿಕ್ಕಮಕ್ಕಳಷ್ಟು ಆಸಕ್ತಿ ಇರುವುದಿಲ್ಲ. ಮಕ್ಕಳ ಬೆಳವಣಿಗೆಯಲ್ಲಿ ಆಟವಾಡುವುದು ಬಹು ಮುಖ್ಯ. ಮಗುವಿಗೆ ಸಹಜವಾದ ಆಟದಲ್ಲಿ ಆಸಕ್ತಿಯಿಲ್ಲದಿದ್ದರೆ, ಅದೊಂದು ಸಮಸ್ಯೆಯ ಮಗುವೇ ಸರಿ. ಅಂಥವರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು, ಅವರ ಸಹಜ ಬೆಳವಣಿಗೆಯಲ್ಲಿರುವ ಕುಂದು ಕೊರತೆ ಕಂಡು ಹಿಡಿದು, ನಿವಾರಿಸಿ ಸಹಜವಾದ ಆಟಗಳನ್ನು ಆಡುವಂತೆ ಮಾಡಬೇಕು.

ಮಕ್ಕಳಲ್ಲಿ ಆಟದ ಪ್ರವೃತ್ತಿ ಸಹಜ. ಮುಂದಿನ ಜೀವನದ ತಯಾರಿಕೆಯನ್ನು ಆಟದ ಮೂಲಕ ಮಾಡಿಕೊಳ್ಳುತ್ತಾರಲ್ಲದೆ, ಮನುಷ್ಯನ ಉತ್ಕ್ರಾಂತಿಯ ಎಲ್ಲ ಮೆಟ್ಟಿಲುಗಳನ್ನು ಅಧಿಕವಾಗಿ ಬಾಲ್ಯಜೀವನದಲ್ಲಿ ಕ್ರಮಿಸುತ್ತಾರೆ. ಅವರ ಸರ್ವಶಕ್ತಿಯ ಉಪಯೋಗವಾಗಲು ಆಟಗಳು ಅವಶ್ಯ. ಶಾರೀರಕ ಶಕ್ತಿಗಿಂತ ಅಧಿಕವಾಗಿ ಮಾನಸಿಕ ಶಕ್ತಿಯನ್ನು ಉಪಯೋಗಿಸುವ ಅವಶ್ಯಕತೆ ಮಗುವಿಗಿರುವುದರಿಂದ ಆಡುತ್ತದೆ. ಈ ಹವ್ಯಾಸವೇ ಮುಂದೆ ಜೀವನದ ಇತರ ರಂಗಗಳಿಗೂ ವಿಸ್ತಾರಗೊಳ್ಳುತ್ತದೆ.

ಮಗು ಆಟದ ಮೂಲಕ ತನ್ನ ಹಾಗೂ ಇತರರೊಂದಿಗಿನ ತನ್ನ ಸಂಬಂಧವನ್ನು ಕುರಿತು ಅರಿತುಕೊಳ್ಳುತ್ತದೆ. ಅದಕ್ಕೆ ತನ್ನ ಶಕ್ತಿ ಚಾತುರ್ಯಗಳ ಅಳತೆ ಹಾಗೂ ಇತರರೊಂದಿಗೆ ಅವುಗಳ ತುಲನೆ, ಬಳಕೆಗಳನ್ನೂ ತಿಳಿಯುವುದರಿಂದ ತನ್ನತನದ ಬಗ್ಗೆ ಒಂದು ನೈಜ ಕಲ್ಪನೆ ಬರುತ್ತದೆ. ಇದರಿಂದ ತನ್ನ ಸಮಸ್ಯೆಗಳಾವುವು, ಅವುಗಳನ್ನು ಹೇಗೆ ಎದುರಿಸಬೇಕೆಂಬುದರ ಬಗ್ಗೆ ಯೋಚಿಸಲು ಅವಕಾಶ ಸಿಗುತ್ತದೆ. ಆಟವಲ್ಲಿ ಯಾವುದೇ ಕಾರ್ಯದ ಜವಾಬ್ದಾರಿಯನ್ನೂ ವಹಿಸಿಕೊಳ್ಳದೆಯೇ ತನ್ನ ಶಕ್ತಿಸಾಮರ್ಥ್ಯಗಳ ಪ್ರಯೋಗ ಪರೀಕ್ಷೆ ಮಾಡಲು ಅವಕಾಶ ಸಿಗುತ್ತದೆ. ಚಿತ್ರಲೇಖನದಲ್ಲಿ ಮಗು ತನಗಿಷ್ಟವಾದ ಚಿತ್ರ ರಚಿಸಬಲ್ಲದು. ಆಟದಲ್ಲಿ ತನಗಿಷ್ಟವಾದ ಪಾತ್ರ, ಕೆಲಸ ಮಾಡಬಲ್ಲದು ಹಾಗೂ ತನ್ಮೂಲಕ ತನ್ನ ಜೊತೆಯವರೊಂದಿಗೆ ತೃಪ್ತಿಕರವಾದ ಸಂಬಂಧ ಬೆಳಸಿಕೊಳ್ಳಬಲ್ಲದು. ಅಂದರೆ ತನ್ನ ಮತ್ತು ಇತರರ ಸಾಮಾಜಿಕ ಸಂಬಂಧ ಎಷ್ಟು, ಹೇಗೆಂಬುದನ್ನು ತಿಳಿದುಕೊಳ್ಳುತ್ತದೆ. ಇತರರ ಸಹಾಯ, ಸಹಕಾರ ಪಡೆದು ತನ್ನ ಕಾರ್ಯ ಪೂರ್ತಿಗೊಳಿಸಲೂ ಅರಿತುಕೊಳ್ಳುತ್ತದೆ. ಸಾಮಾಜಿಕ ಜೀವನದ ಮಹತ್ವದ ಪಾಠ ಆಟದ ಮೂಲಕ ಲಭಿಸುತ್ತದೆ. ಎಂದರೆ ಸಮತೆ, ಸಾಮಾನ್ಯ ಹಕ್ಕುಬಾಧ್ಯತೆಗಳು, ಮುಂದಾಳುತನ, ಸಹಾಯ, ಸಹಕಾರ, ತನ್ನ ಸರದಿಗಾಗಿ ಕಾಯ್ದು ಇತರರ ಹಕ್ಕು, ಅವಶ್ಯಕತೆಗಳಿಗೆ ಅವಕಾಶಕೊಡುವುದು ಇತ್ಯಾದಿಯಾದ ಸಾಮಾಜಿಕ ಗುಣಗಳು ಆಟದ ಮೂಲಕ ಅನುಭವಕ್ಕೆ ಬರುತ್ತವೆ.

ಮಗು ಸಮಾಜವು ತನ್ನಿಂದ ಅಪೇಕ್ಷಿಸುವ ನಿರ್ದಿಷ್ಟ ಪಾತ್ರವೇನೆಂದು ಆಟದ ಮೂಲಕ ಚೆನ್ನಾಗಿ ತಿಳಿಯುತ್ತದೆ. ಸಮಾಜಮಾನ್ಯವಾದ ಹೆಣ್ಣುಗಂಡುಗಳ ಪಾತ್ರಗಳಾವುವೆಂಬುದನ್ನು ತಿಳಿದು ತನ್ನ ಆಟದ ಮೂಲಕ ಅವನ್ನು ರೂಢಿಸಿಕೊಳ್ಳುತ್ತದೆ. ಅದರ ಭವಿಷ್ಯ ಜೀವನದ ಜವಾಬ್ದಾರಿ, ಕರ್ತವ್ಯಗಳನ್ನು ತಿಳಿಯಲು ಅವು ಸಹಕಾರಿಯಾಗುತ್ತವೆ.

ಮಗು ಆಟದ ಮೂಲಕ ನೈತಿಕ ಮೌಲ್ಯಗಳನ್ನು ಸಹ ಕಲಿಯುತ್ತದೆ. ಶಾಲೆ ಮನೆಗಳಲ್ಲಿ ಒಳ್ಳೆಯ, ಕೆಟ್ಟದ್ದರ ತಾರತಮ್ಯ ಸಾಕಷ್ಟು ಪರಿಚಯವಾಗಿದ್ದರೂ, ಅದನ್ನು ಆಟದಲ್ಲಿಯೇ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರುವುದು ಹಾಗೂ ಸಹಜ ಪ್ರವೃತ್ತಿಗಳ ತೃಪ್ತಿ ಆಟದ ಮೂಲಕ ಸಿದ್ಧಿಸುವುದೆಂಬುದು ತಜ್ಞರ ಅಭಿಪ್ರಾಯ.

ಮಗುವಿನ ದೈಹಿಕ ಬೆಳವಣಿಗೆಗೆ ಆಟವು ಅವಶ್ಯ. ಸಕ್ರಿಯ ಆಟದಿಂದಾಗಿ ಮಗುವಿನ ದೇಹದ ಎಲ್ಲ ಭಾಗಗಳ ಸ್ನಾಯುಗಳಿಗೆ ಚಟುವಟಿಕೆ ಸಿಗುತ್ತದೆ; ಅಂತಸ್ಥ ಅಧಿಕ ಚೈತನ್ಯವು ಹೊರಹೊಮ್ಮಲು ಬೇಕಾಗುವ ಅವಕಾಶವೂ ದೊರೆಯುತ್ತದೆ. ಈ ಚೈತನ್ಯವು ಹೊರಹೊಮ್ಮಲು ಅವಕಾಶವಿಲ್ಲದ ಪಕ್ಷದಲ್ಲಿ ಮಗು ಗಂಭೀರ ಪ್ರವೃತ್ತಿಯನ್ನು ತಾಳುವುದಲ್ಲದೆ ಸಿಡುಕತೊಡಗುತ್ತದೆ; ನರಗಳ ಮೇಲಿನ ಒತ್ತಡದಿಂದಾಗಿ ತೊಂದರೆಗೀಡಾಗುತ್ತದೆ.

ಮಗುವಿನ ನಿರ್ದಿಷ್ಟ ಆಟದ ಒಲವು ಕೆಲವು ಸಲ ಅದರ ನಿರೀಕ್ಷೆ, ತಂದೆತಾಯಿಗಳ ಒಲವು, ಪ್ರೋತ್ಸಾಹಗಳನ್ನವಲಂಬಿಸಿರುತ್ತದೆ. ಹಿರಿಯರು ಆಟದಲ್ಲಿ ಕಳೆಯುವ ವೇಳೆ ವ್ಯರ್ಥವೆಂದು ಭಾವಿಸಿ ಬೌದ್ಧಿಕ ಚಟುವಟಿಕೆಗಳಿಗೇ ಹೆಚ್ಚಿನ ಪ್ರಾಶಸ್ತ್ಯವಿತ್ತರೆ, ಅದೂ ಕೂಡ ಮಗುವಿನ ಆಟದ ಮೇಲೆ ಪರಿಣಾಮ ಬೀರುತ್ತದೆ.

ಶಿಶುವಿಹಾರದ ಪ್ರತಿಯೊಂದು ಚಟುವಟಿಕೆಯೂ ಆಟದಂತೆಯೇ ಇದ್ದು ಅದರಿಂದ ಮಕ್ಕಳು ಆನಂದ ಪಡೆಯುವುದಲ್ಲದೆ ಶಿಕ್ಷಣವನ್ನು ಪಡೆಯಬಲ್ಲರು. ಬೇರೆ ಬೇರೆ ರೀತಿಗಳಲ್ಲಿ, ನಿಜಜೀವನದಲ್ಲಿ ಅನುಭವಿಸಲಾರದ ಬೇಕುಬೇಡಗಳನ್ನು, ಇಚ್ಛೆಗಳನ್ನು ಪೂರೈಸಲು ಆಟದಲ್ಲಿ ಅವಕಾಶ ಸಿಗುತ್ತದೆ. ಕಾಲ್ಪನಿಕ ವ್ಯಕ್ತಿಗಳೊಂದಿಗೆ ಸಮರಸವಾಗಿ ಆಟ, ನಾಟಕಗಳಲ್ಲಿ ತೃಪ್ತಿ ಪಡೆಯುವುದಲ್ಲದೆ, ಜೀವನದಲ್ಲಿ ಕಂಡು, ಅನುಭವಿಸಿದ ತಮ್ಮ ಬೇಸರ, ಜುಗುಪ್ಸೆಗಳನ್ನು ನೀಗಬಲ್ಲರು. ರಾಜ, ವೈಮಾನಿಕ, ಡ್ರೈವರ್, ತಂದೆ ಮುಂತಾದ ಪಾತ್ರಗಳ ಕೆಲಸ, ಜವಾಬ್ದಾರಿಗಳ ತೃಪ್ತಿಯನ್ನು ಮಕ್ಕಳು ಆಟದ ಮೂಲಕ ಪಡೆಯಬಲ್ಲರು. ಶೋಧಿಸುವ ಆಟಗಳು ಮತ್ತು ಪ್ರವಾಸಗಳು ಶಾಲಾ ಪುಸ್ತಕಗಳು ಒದಗಿಸುವುದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿ ವಿಚಾರ ಜ್ಞಾನವನ್ನು ಮಕ್ಕಳಿಗೆ ಒದಗಿಸಬಲ್ಲವು.

ಆಟಗಳಿಂದ ಮಗುವಿನ ರಚನಾತ್ಮಕ ಪ್ರವೃತ್ತಿಗೂ ಚಾಲನೆ ದೊರೆಯುತ್ತದೆ. ಅದು ತನ್ನ ವಿಚಾರ ಕಲ್ಪನೆಗಳನ್ನು ಆಟದ ಮೂಲಕ ಪ್ರಮಾಣಿಸಿ ನೋಡುತ್ತದೆ. ಆಟದಲ್ಲಿ ಹೊಸದಾಗಿ ಮತ್ತು ವಿವಿಧವಾಗಿ ಏನನ್ನಾದರೂ ರಚಿಸಬಲ್ಲ ತೃಪ್ತಿ ಪಡೆಯಲು ಯತ್ನಿಸುತ್ತದೆ. ಹಾಗೆಯೇ ಆಟಗಳಿಂದ ತಾನು ನಿಷ್ಠಾವಂತನಾಗಿರಬೇಕು, ಸತ್ಯವಂತನಾಗಿರಬೇಕು, ಸಮತೆಕಾಯ್ದುಕೊಳ್ಳಬೇಕು, ವಿನೋದಪ್ರವೃತ್ತಿಯವನಾಗಿರಬೇಕು, ಗುಂಪಿನಲ್ಲಿ ಸ್ವೀಕೃತನಾಗಬೇಕಾದರೆ ಕೆಲವು ಸಲ ತನ್ನತನವನ್ನು ಕಳೆದುಕೊಳ್ಳಲೂ ಸಿದ್ಧನಾಗಿರಬೇಕು, ತನ್ನ ಮೇಲೆ ತನಗೆ ಹತೋಟಿ ಇರಬೇಕೆಂಬುದು ಚೆನ್ನಾಗಿ ಮನದಟ್ಟಾಗುತ್ತದೆ. ತಾನು ಯಾವುದೇ ತಪ್ಪು ಮಾಡಿದಲ್ಲಿ ಮನೆಯ ಹಿರಿಯರು ಕ್ಷಮಿಸಿದರೂ, ತನ್ನ ಓರಗೆಯವರ ಗುಂಪುಸ್ವೀಕೃತ ನಿಯಮಾವಳಿಯ ಆಚರಣೆಯಲ್ಲಿ ತಾನು ತಪ್ಪಿದಲ್ಲಿ ಸುಲಭವಾಗಿ ಕ್ಷಮಿಸುವುದಿಲ್ಲವೆಂಬುದೂ ಅರಿವಿಗೆ ಬರುತ್ತದೆ. ಆದ್ದರಿಂದ ತನ್ನ ಗುರಿಯನ್ನು ಇತರ ಸಂದರ್ಭಗಳಿಗಿಂತ ಹೆಚ್ಚಾಗಿ ಆಟದ ಗುಂಪಿನಲ್ಲಿ ಸಾಧಿಸಲು, ಕಾಯ್ದುಕೊಳ್ಳಲು ಕಲಿಯುತ್ತದೆ.

ಬೆಳೆದಂತೆ ಮಗು ಆಡಬಯಸುವ ಆಟಗಳ ಪರಿಯೂ ಹಂತಹಂತವಾಗಿ ಬದಲಾಗುತ್ತದೆ. ಎಳೆ ಮಗುವಾಗಿದ್ದಾಗ ಆಟಿಕೆಗಳನ್ನು ಕುತೂಹಲದಿಂದ ತಿಳಿಯಲು ಯತ್ನಿಸಿ ಬಾಯಲ್ಲಿ ಹಾಕುವುದು ಇಲ್ಲವೆ ಹಿಸುಕುವುದನ್ನು ಮಾಡುತ್ತದೆ. ಆದರೆ 2–3 ವರ್ಷ ವಯಸ್ಸಿನದಾದಾಗ ಅವುಗಳಲ್ಲಿ ಸಜೀವ ಲಕ್ಷಣಗಳನ್ನು ಗುರುತಿಸ ಯತ್ನಿಸಿ

ಕೆಲವೊಮ್ಮೆ ಅವುಗಳೊಂದಿಗೆ ಮಾತಾಡತೊಡಗುತ್ತದೆ. ಅವುಗಳಿಗೂ ಮಾತನಾಡಲು, ಕೆಲಸಮಾಡಲು ಬರುತ್ತದೆಂದೂ, ತನ್ನಂತೆಯೇ ಭಾವನೆ, ಅನಿಸಿಕೆಗಳವೆಯೆಂದೂ ತಿಳಿದು ಅದರಂತೆಯೇ ವರ್ತಿಸುತ್ತದೆ. ಕ್ರಮೇಣ ಬೌದ್ಧಿಕವಾಗಿ ಬೆಳೆದಂತೆ ನಿರ್ಜೀವ ವಸ್ತುಗಳಿಗೆ ಸಜೀವ ಲಕ್ಷಣಗಳನ್ನು ಕೊಡಲು ಒಪ್ಪದೆ ಅವುಗಳತ್ತ ಆಸಕ್ತಿ ಕಡಮೆಯಾಗುತ್ತದೆ. ಮಗು ಸಹಜೀವನವನ್ನು ಬಯಸುವುದರಿಂದ ಶಾಲೆಗೆ ಸೇರಿದ ಮೇಲೆ ಆಟಿಕೆಗಳಿಗಿಂತಲೂ ಇತರ ಸಾಂಘಿಕ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿವಹಿಸುತ್ತದೆ.


ಆಟಗಳಲ್ಲಿ ಮಗುವಿನ ಬೆಳವಣಿಗೆ ಹಂತಹಂತವಾಗಿ ಕಂಡುಬರುತ್ತದೆ. ಉದಾಹರಣೆಗೆ, ಮನೆಕಟ್ಟುವ ಪಡಿಯಚ್ಚಿನಾಟವಲ್ಲಿ ಮಗು ಮೊದಮೊದಲು ಅವನ್ನು ಕೂಡಿಸಿ ಒಂದೆಡೆ ಗುಂಪುಹಾಕುತ್ತದೆ; ಕ್ರಮೇಣ ಸಾಲುಸಾಲಾಗಿ ಇಡಲು ಅಥವಾ ಒಂದರ ಮೇಲೊಂದು ಇಡಲು ಯತ್ನಿಸುತ್ತದೆ; ಮುಂದೆ ಬೇರೆ ಬೇರೆ ಆಕಾರ, ಆಕೃತಿಗಳನ್ನು ಸೇರಿಸಿಕೊಂಡು ಒಂದು ವ್ಯವಸ್ಥಿತ ಆಕಾರ ರಚಿಸಲು ಯತ್ನಿಸುತ್ತದೆ. ಕೊನೆಕೊನೆಗೆ ಸಮತೋಲನವನ್ನು ಕಾಯ್ದುಕೊಳ್ಳಬಲ್ಲ, ವಿವರಬದ್ಧವಾದ ಅರ್ಥಪೂರ್ಣ ಆಕೃತಿ ರಚಿಸಲು ಯತ್ನಿಸುತ್ತದೆ. ಹಾಗೆಯೇ ಮಕ್ಕಳು ಚಕ್ಕಡಿ, ಕಾರು, ಮನೆ ಮುಂತಾದವುಗಳನ್ನು ರಚಿಸುವುದರಲ್ಲಿಯೂ ವಿವಿಧ ಹಂತದ ಬೆಳವಣಿಗೆಯನ್ನು ಕಾಣಬಹುದು. ಇದೇ ರೀತಿ ಚಿತ್ರೀಕರಣದಲ್ಲಿಯೂ ಇಂಥದೇ ಬೆಳವಣಿಗೆಯನ್ನು ಗಮನಿಸಬಹುದು.

ಮುಕ್ತ ವ್ಯವಸಾಯದಿಂದ ಮಕ್ಕಳ ಆಟದ ಸ್ವಾತಂತ್ರ್ಯ ಹಾಗೂ ಸ್ವಯಂಸ್ಫೂರ್ತಿಗಳಿಗೆ ಹೆಚ್ಚಿನ ಅವಕಾಶ ದೊರೆಯುತ್ತದೆ. ಇಲ್ಲಿ ನಿಯಮಾವಳಿಯ ನಿರ್ಬಂಧವಿರುವುದಿಲ್ಲ. ಮಗುವಿಗೆ ತಾನೇ ಪ್ರತ್ಯೇಕವಾಗಿ ತನಗಿಷ್ಟವಿದ್ದಂತೆ ಆಟವಾಡಲು ಹಾಗೂ ಆಸಕ್ತಿ ಕಡಮೆಯಾದಾಗ ಆಟವನ್ನು ಕೈಬಿಡಲೂ ಸ್ವಾತಂತ್ರ್ಯವಿರುತ್ತದೆ. ಅದು ಹೊಸದಾಗಿ ಶಿಶುವಿಹಾರಕ್ಕೆ ಸೇರಿದಾಗ ಈ ಬಗೆಯ ಆಟಗಳ ಮಹತ್ವ ಹೆಚ್ಚಾಗಿರುತ್ತದೆ. ಹೊಸವಾತಾವರಣ, ಹೊಸ ಓರಗೆಯವರೊಂದಿಗೆ ಹೊಂದಿಕೊಳ್ಳಲು ಮಗುವಿಗೆ ತಕ್ಕಷ್ಟು ಕಾಲಾವಕಾಶ ಬೇಕಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅದು ತನಗೆ ಇಷ್ಟವಾದದ್ದನ್ನು ಪಡೆದಾಗ ಮಾತ್ರ ಶೀಘ್ರವಾಗಿ ಅಲ್ಲಿರುವ ಶಿಕ್ಷಕಿ, ಮಕ್ಕಳು, ವಸ್ತುಗಳು, ವಾತಾವರಣದ ಬಗ್ಗೆ ವಿಶ್ವಾಸ, ಪ್ರೀತಿ ತಳೆಯಬಲ್ಲದು. ಅದರ ಮುಂದಿನ ಬೆಳವಣಿಗೆ, ಶಿಕ್ಷಣಗಳಿಗೆ ಇದು ಪೂರ್ವಸಿದ್ಧತೆಯಾಗಬಲ್ಲದು. ಹಾಗೆಯೇ ಮಕ್ಕಳು ಮನೆಯಿಂದ ಶಿಶುವಿಹಾರಕ್ಕೆ ಬರುವಾಗ ಇದ್ದ ಭಾವನೆ, ವರ್ತನೆಗಳನ್ನು ಶಾಲೆಯ ವಾತಾವರಣಕ್ಕೆ ಮಾರ್ಪಡಿಸಿಕೊಳ್ಳಲೂ ಈ ಬಗೆಯ ಸ್ವಯಂಸ್ಫೂರ್ತಿಯ ಆಟಗಳಿಂದ ಅವಕಾಶ ಸಿಗುತ್ತದೆ. ಆದ್ದರಿಂದ ಶಿಶುವಿಹಾರ ಶಿಕ್ಷಣದಲ್ಲಿ ಈ ಆಟಗಳಿಗೆ ಬಹಳ ಮಹತ್ವವೂ ಇರುತ್ತದೆ.

ಮಕ್ಕಳು ನಾಟಕಾದಿ ಅಭಿನಯಗಳನ್ನೂ ಆಡುತ್ತಾರೆ. ಪ್ರಾಣಿಗಳ, ಪಕ್ಷಿಗಳ ಅನುಕರಣೆ, ಅಂಬೆಗಾಲಿನ ನಡಿಗೆ, ಬೇರೆ ಬೇರೆ ಪಕ್ಷಿ ಪ್ರಾಣಿಗಳಂತೆ ಕೂಗುವುದು,

ಜಿಗಿಯುವುದನ್ನು ಆಟದ ಮೂಲಕ ಅಭಿನಯಿಸುತ್ತಾರೆ. ಕಾಯಿಲೆಯವನ ಶುಶ್ರೂಷೆಯ ಡಾಕ್ಟರ್ ಅಥವಾ ನರ್ಸ್‌ಗಳ ಆಟ, ಅಂಗಡಿಯಾಟ, ಸಾರಿಗೆ ವ್ಯವಸ್ಥೆಯ ಆಟ, ರೈಲು, ಕಾರು, ವಿಮಾನಗಳಲ್ಲಿಯ ಪ್ರವಾಸದಾಟ, ಕಳ್ಳ ಪೋಲೀಸರಾಟ, ಔತಣ ಸಮಾರಂಭ, ಮದುವೆ ಮುಂಜಿಗಳಾಟ ಇತ್ಯಾದಿ ಕಾಲ್ಪನಿಕ ವ್ಯಕ್ತಿ, ಪ್ರಸಂಗಗಳನ್ನು ತಮ್ಮ ಆಟ ಪಾಟಗಳಲ್ಲಿ ಅಭಿನಯಿಸುವುದರಿಂದ ಸಾಮಾನ್ಯ ವಿಚಾರಗಳ ಜ್ಞಾನಪಡೆಯುತ್ತಾರೆ.

ಮಕ್ಕಳ ಆಟಗಳ ಸ್ಥೂಲಪರಿಚಯದಿಂದ ವಿಶಿಷ್ಟ ಆಟಗಳ ಬಗ್ಗೆ ತಿಳಿಯಬಹುದು. ಸಾಮಾನ್ಯವಾಗಿ ಮಕ್ಕಳು ನಡೆಯುವುದಕ್ಕಿಂತ ಓಡುವುದನ್ನೇ ಹೆಚ್ಚು ಇಷ್ಟಪಡುತ್ತಾರೆ. ಶಿಶುವಿಹಾರಗಳಿಗೆ ಬರುವ ಮಕ್ಕಳು ಕನಿಷ್ಠ $2\frac{1}{2}$ ವರ್ಷ ವಯಸ್ಸಿನವರಾಗಿರುತ್ತಾರೆ. ಈ ವೇಳಿಗೆ ಶರೀರದ ಎಲ್ಲ ಸ್ನಾಯುಗಳ ಮೇಲೆ ಪೂರ್ಣ ಹತೋಟಿ ಬಂದಿರುವುದಿಲ್ಲವಾದರೂ ಸಾಕಷ್ಟು ಚೆನ್ನಾಗಿಯೇ ನಡೆಯುತ್ತಾರೆ. ಸ್ವಲ್ಪ ಎತ್ತರದ ಸ್ಥಳವಿದ್ದರೂ ಸಾಕು ಅಲ್ಲಿಂದ ಜಾರುತ್ತಾರೆ, ಉರುಳುತ್ತಾರೆ. ಇದರಿಂದ ಹೊಟ್ಟೆ ಹಾಗೂ ಬೆನ್ನಿನ ಸ್ನಾಯುಗಳು ಬಲಗೊಳ್ಳುತ್ತವೆ. ಅಂಕು ಡೊಂಕಾದ ಜಾಗಗಳಲ್ಲಿ ಕಠಿಣವೆನಿಸಿದರೂ ತಮ್ಮ ದೇಹವನ್ನು ಹೇಗೆ ಬೇಕೋ ಹಾಗೆ ಅದರಲ್ಲಿ ಹಾಯಿಸಿ ಒಂದೆಡೆಯಿಂದ ಇನ್ನೊಂದೆಡೆಗೆ ನುಸುಳಿ ಬರುತ್ತಾರೆ. ಕೈಗಳ ಮೇಲೆ ದೇಹದ ಭಾರ ಹಾಕಿ ತೂಗುತ್ತಾರೆ; ಗಿಡಕ್ಕೆ, ಇನ್ನೊಂದೆಡೆ ಸಾಧ್ಯವಿದ್ದಲ್ಲಿ ಜೋತುಬಿದ್ದು ತೂಗಾಡುತ್ತಾರೆ. ಇದರಿಂದ ಕಾಲುಗಳಿಗೆ ವಿಶ್ರಾಂತಿ ಸಿಕ್ಕರೂ ದೇಹದ ಇತರ ಭಾಗಗಳಿಗೆ ಚಟುವಟಿಕೆ ಸಿಗುತ್ತದೆ. ಸುಮ್ಮನೆಯೇ ಓಡುತ್ತಾರೆ, ಕೋತಿಯಂತೆ ಜಿಗಿಯುತ್ತಾರೆ, ಕುಣಿಯುತ್ತಾರೆ, ಧಾವಿಸುತ್ತಾರೆ. ಸಾಮಾನ್ಯವಾಗಿ ಸ್ನಾಯುಗಳ ಕ್ರಿಯೆಯು ಎರಡು ತರದ ಸ್ನಾಯುಗಳ ಸಹಕಾರದಿಂದ ಆಗುತ್ತದೆ. ಒಂದು ಪ್ರಕಾರದ ಸ್ನಾಯುಗಳು ಕ್ರಿಯಾಶೀಲವಿದ್ದರೆ, ಇನ್ನೊಂದು ಕ್ರಿಯಾ ನಿರೋಧಕವಿರುತ್ತವೆ. ಕ್ರಿಯೆಗಳನ್ನು ಗಮನದಲ್ಲಿರಿಸಿಕೊಂಡು ಶಿಶುವಿಹಾರದ ಆಟಗಳನ್ನು ಹೀಗೆ ವಿಂಗಡಿಸಬಹುದು :



ಈ ಹಿಂದೆಯೇ ಸೂಚಿಸಿರುವಂತೆ ಶಿಶುವಿಹಾರಕ್ಕೆ ಬರುವ ಮಕ್ಕಳು 2½ಯಿಂದ 6 ವರ್ಷದವರಾಗಿರುತ್ತಾರೆ. ಆದಕಾರಣ ಅವರನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬೇಕು. ಮೊದಲನೆ ಗುಂಪಿನಲ್ಲಿ 2½–3½ ವರ್ಷ ವಯಸ್ಸಿನ ಮಕ್ಕಳಿದ್ದು ಅವರಿಂದ ವೈಯಕ್ತಿಕ ಸಾಧನಸಹಿತ ಆಟಗಳನ್ನು ಆಡಿಸಬೇಕು. ಈ ಗುಂಪಿನ ಮಕ್ಕಳಿಗೆ ಆಟದ ವಿಶೇಷ ನಿಯಮಗಳಿರಬೇಕು. ಕ್ರಿಯೆಯಲ್ಲಿಯೇ ಆನಂದಪಡುವುದು ಈ ವಯಸ್ಸಿನ ವೈಶಿಷ್ಟ್ಯ. ಎರಡನೆಯ ಗುಂಪು 3½–4½ ವರ್ಷ ವಯಸ್ಸಿನ ಮಕ್ಕಳಿದ್ದು, ಸುಲಭವಾದ ಆಟದ ನಿಯಮಗಳನ್ನು ಪಾಲಿಸಬಲ್ಲವರಾಗಿರುತ್ತಾರೆ. ಇಂಥವರಿಂದ ಸಾಮೂಹಿಕ ಆಟಗಳನ್ನು ಆಡಿಸಬೇಕು. ಮೂರನೆಯ 4½ ಯಿಂದ 6 ವರ್ಷದ ಮಕ್ಕಳ ಗುಂಪು ಹೆಚ್ಚು ಶಕ್ತಿ ಹಾಗೂ ನಿಯಮಬದ್ಧ ಆಟಗಳನ್ನು ಆಡಬಲ್ಲರು.

ಕ್ರೀಡಾಂಗಣದಲ್ಲಿಯ ಸಾಧನಗಳು, ಆಟಗಳು

ಸಾಧನಗಳು : ನಡೆಯುವ ಪಟ್ಟಿ, ನಿಚ್ಚಣಿಕೆ, ಹಗ್ಗದ ತೂಗಾಡುವ ನಿಚ್ಚಣಿಕೆ, ಮೇಲೆ ಏರುವುದಕ್ಕಾಗಿ ಅಲ್ಲಲ್ಲಿ ಗಂಟುಹಾಕಿದ ಹಗ್ಗ, ಜಾರುಬಂಡೆ, ಜೋಕಾಲಿ, ಎತ್ತರ ಜಿಗಿತ, ಉಜ್ಜಿಗಿತ ಮತ್ತು ಮೇಲಿಂದ ಕೆಳಗೆ ಜಿಗಿಯಲು ಬೇಕಾಗುವ ಸಾಧನ ಸೌಲಭ್ಯಗಳು,



ಚಿತ್ರ 3 : ಕ್ರೀಡಾಂಗಣ ಆಟದ ಸುಖ

ಏತ, ರಂಕಲ್ ರಾಟೆ (ಚಕ್ರಿ), ಜಂಗಲ್‌ಜಿಮ್, ಸಿಂಗಲ್‌ಬಾರ್, ಡಬಲ್‌ಬಾರ್ ಇವೆಲ್ಲ ಕ್ರೀಡಾಂಗಣದ ಸಾಧನಗಳು.

ಮಕ್ಕಳ ನಡಿಗೆ: ಭೂಮಿಗೆ ಲಂಬಕೋನ ಮಾಡಿ ತನ್ನ ಶರೀರವನ್ನು ಸರಳ ರೇಖೆಯಲ್ಲಿಟ್ಟು ಕಾಲಿನ ಮೇಲೆ ಮತ್ತು ಬೆನ್ನ ಹಿಂದಿನ ಸ್ನಾಯುಗಳ ಮೇಲೆ ಭಾರ ಹಾಕಿ ಶರೀರದ ಸಮತೋಲನ ಕಾಯ್ದು ನಡೆಯುವ ಕ್ರಿಯೆ ಕಠಿಣವಾದದ್ದು. ಮಗು ಅದನ್ನು ಸ್ವಪ್ರಯತ್ನದಿಂದ ಸಾಧಿಸುತ್ತದೆ. ಮೆದುಳಿನ ವಿಶಿಷ್ಟ ಭಾಗದ ಬೆಳವಣಿಗೆ ಆಯಿತೆಂದರೆ ನಡೆಯುವ ಇಚ್ಛೆ ಸ್ವಾಭಾವಿಕವಾಗಿ ಬರುತ್ತದೆ. ಆದರೆ ಅದನ್ನು ಪೂರ್ಣವಾಗಿ ಸಾಧಿಸುವಲ್ಲಿ ಬಹಳ ಶ್ರಮವಹಿಸುತ್ತದೆ. ನಡಿಗೆಯು ಬಹು ದೊಡ್ಡ ವಿಜಯವಾಗಿದೆ. ಮನೆಯವರಿಗೆ ಸಂತಸ, ವಿಸ್ಮಯ : ಇದರಿಂದ ಅದರ ಜೀವನದ ಒಂದು ವಿಶೇಷ ಪುಟ ಶುರುವಾದಂತೆಯೇ ; ಅದರ ಜಗತ್ತು ವಿಸ್ತೃತವಾಗುತ್ತದೆ. ಆದರೆ ಮನೆಯವರು ಅದರ ಈ ಸ್ವಾತಂತ್ರ್ಯ ಸಾಧನೆಗೆ ತಮ್ಮ ಅತಿ ಕಾಳಜಿಯಿಂದ ಕೆಲವೊಮ್ಮೆ ಭಂಗ ತರುತ್ತಾರೆ. 'ನೀನು ಬೀಳುತ್ತೀ, ಬರಬೇಡ', 'ನೀರು ಚೆಲ್ಲುತ್ತದೆ', 'ಬೀಳುತ್ತದೆ', 'ಒಡೆಯುತ್ತೀ', 'ಒಯ್ಯಬೇಡ' ಎಂದು ಆತಂಕಪಟ್ಟುಕೊಳ್ಳುತ್ತಾರೆ. ಇದರಿಂದ ಮಗುವಿನ ಆತ್ಮವಿಶ್ವಾಸಕ್ಕೆ ಧಕ್ಕೆಯುಂಟಾಗುತ್ತದೆ. ಶಿಶುವಿಹಾರದಲ್ಲಿ ಈ ಕ್ರಿಯೆಗಳನ್ನು ಮಗು ಸ್ವತಂತ್ರವಾಗಿ ಮಾಡಿ ತನ್ನ ಸಾಧನೆ ಮುಂದುವರಿಸಲು ಅವಕಾಶವಿರಬೇಕು.

ನಡೆಯುವ ಪಟ್ಟಿ ಮತ್ತು ಅದರ ಉಪಯೋಗ: ಇದಕ್ಕೆ 20–24 ಅಡಿ ಉದ್ದ, 2½ ಅಂಗುಲ ಎತ್ತರ ಮತ್ತು 2½ ಅಂಗುಲ ಅಗಲಗಳಿರುವ ಕಟ್ಟಿಗೆಯ, ಇಟ್ಟಿಗೆಯ ಅಥವಾ ಸಿಮೆಂಟಿನ ಹಲಗೆ ಇರಬೇಕು. ಇಟ್ಟಿಗೆಯ ಸಾಲಿನ ಮೇಲೆ, ಕಾಂಪೌಂಡ್ ಗೋಡೆಯ ಮೇಲೆ ಇಲ್ಲವೇ ರೈಲ್ವೆಹಳಿ – ಹೀಗೆ ಸ್ವಲ್ಪ ಎತ್ತರದ ಮೇಲೆ ಹೋಗುವುದು ಮಕ್ಕಳಿಗೆ ಬಹಳ ಇಷ್ಟ. ಈ ನೈಸರ್ಗಿಕ ಪ್ರೇರಣೆಯು ಶಿಕ್ಷಣಕ್ಕಾಗಿಯೂ ಉಪಯೋಗವಾಗುತ್ತದೆ. ಮೊದಮೊದಲು ಮಗು ಕೈಗಳನ್ನು ಹಿಂದೆ ಅಥವಾ ಬದಿಗೆ ಇಟ್ಟು ಅದರ ಮೇಲೆ ನಡೆಯಬಹುದು. ನಡೆಯುವಾಗ ಒಂದು ಕಾಲಿನ ಹೆಬ್ಬೆಟ್ಟಿಗೆ ಇನ್ನೊಂದು ಕಾಲಿನ ಹಿಮ್ಮಡಿ ಹತ್ತುವಂತೆ ಇಟ್ಟು ನಡೆಯಬೇಕು. ಒಮ್ಮೆ 2 ಸಲ ಹೀಗೆ ನಡೆಯುವುದನ್ನು ತೋರಿಸಿಕೊಡಬೇಕು. ಮಗು ನಡೆಯುವಾಗ ಯಾವ ಸೂಚನೆಯನ್ನೂ ಕೊಡಬಾರದು. ಏಕೆಂದರೆ ಶರೀರದ ಸಮತೋಲನ ಕಾಯ್ದುಕೊಳ್ಳಲು ಮಗು ತನ್ನ ಸರ್ವಶಕ್ತಿಯನ್ನು ಉಪಯೋಗಿಸಬೇಕಾಗುತ್ತದೆ. ಕಾಲು ಪಟ್ಟಿಯಿಂದ ಜಾರಿ, ಜಾರಿಬೀಳುತ್ತದೆ. ಒಮ್ಮೆ ಅದರ ಜಾಡು ಸಿಕ್ಕಿತೆಂದರೆ ಪ್ರಯತ್ನಪಟ್ಟು ತನ್ನ ಶರೀರದ ಸಮತೋಲನ ಕಾಯ್ದುಕೊಂಡು ವಿಕ್ರಮಸಾಧಿಸುತ್ತದೆ. ಕೈಯಲ್ಲಿ ನಿಶಾನಿ ಅಥವಾ ಕೋಲು ಹಿಡಿದು ನಡೆಯುವುದು, ಘನಪದಾರ್ಥ ತುಂಬಿದ ಪಾತ್ರೆಯನ್ನು ಕೈಯಲ್ಲಿ ಹಿಡಿದು ಪಟ್ಟಿಯ ಮೇಲೆ ನಡೆಯುವುದು, ಕೈಯಲ್ಲಿ ಚಿಕ್ಕ ಘಂಟೆ ಹಿಡಿದು ಘಂಟೆಯ ಶಬ್ದವಾಗದಂತೆ ನಡೆಯುವುದು, ನೀರಿನಂಥ ದ್ರವಪದಾರ್ಥವನ್ನು ಹಾಕಿದ ಪಾತ್ರೆಯನ್ನು ಕೈಯಲ್ಲಿ ಹಿಡಿದು ಅದು ಚೆಲ್ಲದಂತೆ ನಡೆಯುವುದು, ತಲೆಯ ಮೇಲೆ ನೋಟುಪುಸ್ತಕವಿಟ್ಟು ಇಲ್ಲವೇ ಸಿಂಬೆ ಇಟ್ಟು ಮೇಲೆ ತುಂಬಿದ ತಂಬಿಗೆಯಿರಿಸಿ ಚೆಲ್ಲಿ ಬೀಳದಂತೆ ನಡೆಯುವುದು

ಅಭ್ಯಾಸ ಮಾಡಿಸಬಹುದು. ಮಕ್ಕಳ ವಯಸ್ಸು, ಶಾರೀರಕ ಶಕ್ತಿಗಳಿಗನುಸಾರವಾಗಿ ಇಂಥ ಆಟಗಳನ್ನಾಡಿಸಬೇಕು. ಶಿಶುವಿಹಾರದ ಹೊರಗೆ ಬಯಲು ಸ್ಥಳವಿದ್ದರೆ ಇಟ್ಟಿಗೆ ಯಿಂದಲೂ ಇಂಥ ನಡೆಯುವ ಪಟ್ಟಿ ಮಾಡಬಹುದು. ಇಂಥ ಪಟ್ಟಿಗಳು ಡೊಂಕಾಗಿರ ಬಾರದು. ಎತ್ತರದಲ್ಲಿ ಹೆಚ್ಚು ಕಡಮೆಯಿರಬಾರದು. ಇವುಗಳನ್ನು 'ಇಟ್ಟಿಗೆಗಳಿಂದ ಚೌಕೋನ, ನಾಗಮುಡಿ, ತ್ರಿಕೋನಗಳ ಆಕಾರದಲ್ಲಿಯೂ ತಯಾರಿಸಬಹುದು.

ಪಟ್ಟಿಯ ಮೇಲೆ ನಡೆಯಲು ಕಲಿತಮೇಲೆ ಗೆರೆಯ ಮೇಲೆ ನಡೆಯಲು ಆದೇಶಿಸ ಬೇಕು. ಹೀಗೆ ನಡೆಯುವಾಗ ಪಾದಗಳು ಗೆರೆಯ ಮೇಲೆಯೇ ಇಡುವಂತೆ ನೋಡಿ ಕೊಳ್ಳಬೇಕು. ಬಳಿಕ ಕೈಯಲ್ಲಿ ಏನಾದರೂ ವಸ್ತುಗಳನ್ನು ಹಿಡಿದುಕೊಂಡು ನಡೆಯಲು ಕಲಿಸಬೇಕು ; ಗಾಜಿನ ಮತ್ತು ಜೇಡಿಮಣ್ಣಿನ ವಸ್ತುಗಳನ್ನು ಕೈಯಲ್ಲಿ ಹಿಡಿದು ನಡೆಯಲು ಕೊಡಬೇಕು. ಈ ವಸ್ತು ಕೆಳಗೆ ಬೀಳದಂತೆ ಮಗು ಲಕ್ಷ್ಯಪೂರ್ವಕವಾಗಿಯೇ ನಡೆಯು ತ್ತದೆ. ಒಂದು ವೇಳೆ ಬಿದ್ದರೂ ಸಹ ಬೈಯದೆ, ಸಹಾನುಭೂತಿಯಿಂದ ಮತ್ತೊಮ್ಮೆ ಪ್ರಯತ್ನಿಸಲು ಹೇಳಬೇಕು.

ಹೀಗೆ ಸರಳ, ನಾಗಮುಡಿ ರೇಖೆಗಳ ಮೇಲೆ ನಡೆಯಲು ಕಲಿತ ಮೇಲೆ, ರೇಖೆಯ ಮೇಲೆ ಕೆಲವು ಅಂತರದಲ್ಲಿ ಮಕ್ಕಳನ್ನು ಕೂರಿಸಿ. ಕುರ್ಚಿಯಿಟ್ಟು ಅದಕ್ಕೆ ತಗಲದಂತೆ ಹೋಗುವ ಆಟ ಆಡಿಸಬೇಕು.

ಓಡುವುದು : ನಡೆಯುವುದಕ್ಕಿಂತಲೂ ಮಕ್ಕಳಿಗೆ ಓಡುವುದೇ ಇಷ್ಟ. ಏಕೆಂದರೆ, ಶರೀರ ಏಕಗತಿಯಲ್ಲಿರುವಾಗ ಅದರ ಸಮತೋಲನ ಕಾಯ್ದುಕೊಳ್ಳುವುದು ಸುಲಭ. ಸ್ವೇಚ್ಛೆಯಿಂದ ಮಗು ಓಡಬಲ್ಲಷ್ಟನ್ನು ಓಡಿಸಬೇಕು, ಅನಂತರ ಕಾಲಿನ ಸ್ನಾಯುಗಳಿಗೆ ವಿಶ್ರಾಂತಿ ದೊರೆತು ಇತರ ಸ್ನಾಯುಗಳು ಕ್ರಿಯೆಮಾಡುವಂಥ ಚಟುವಟಿಕೆ ಕೊಡಬೇಕು. ಏಕೆಂದರೆ, ಮಕ್ಕಳ ಕಾಲು ಮತ್ತು ಪುಪ್ಪುಸಗಳು ಇನ್ನೂ ಸಶಕ್ತವಾಗ ಬೇಕಿರುತ್ತವೆ.

ಮೆಟ್ಟಿಲೇರುವುದು : ನಡೆಯುವುದಕ್ಕೆ ಮೊದಲು ಮಗು ಮೆಟ್ಟಿಲು ಹತ್ತು ವುದನ್ನು ಕಲಿಯುತ್ತದೆ. ಕೈಮೇಲೆ ಭಾರಹಾಕಿ ಶರೀರದ ಸಮತೋಲನ ಕಾಯ್ದು ಕೊಂಡು ಶರೀರವನ್ನು ಮೇಲೆತ್ತುವ ಕ್ರಿಯೆ ಮಗುವಿಗೆ ಸಹಜವಾಗಿರುತ್ತದೆ. ಬೆನ್ನು ಮೇಲೆ ಮಾಡಿ ಮಗು ಇಳಿಯಲು ಮುಂದಿನ ಮೆಟ್ಟಿಲು ಕಾಣದೆ ಇರುವುದರಿಂದ ಕುಳಿತು ಕೊಂಡೇ ಮೆಟ್ಟಿಲು ಇಳಿಯುತ್ತದೆ. ಮೆಟ್ಟಿಲು ಹತ್ತುವುದು ಮತ್ತು ಇಳಿಯುವ ಕ್ರಿಯೆ ಗಳಲ್ಲಿ ಮಕ್ಕಳು ಕಂಡುಹಿಡಿಯುವ ರೀತಿಗಳನ್ನು ನೋಡಿದರೆ ವಿಸ್ಮಯವಾಗುವಂತಿರು ತ್ತದೆ. ಶಿಶುವಿಹಾರದಲ್ಲಿ ಈ ಕ್ರಿಯೆಗೂ ಅವಕಾಶವಿರಬೇಕು.

ನಿಚ್ಚಣಿಕೆ, ಕೋಲು ಕಟ್ಟಿದ ಹಗ್ಗ, ಗಂಟು ಹಾಕಿದ ಹಗ್ಗ ಇತ್ಯಾದಿಗಳನ್ನೇರಿಳಿಯುವುದು ಇಲ್ಲವೇ ಎರಡು ಕಂಬಗಳ ಮೇಲೆ ಸಾಮಾನ್ಯ ಎತ್ತರದಲ್ಲಿ ಎಂದರೆ 8–9 ಅಂಗುಲಗಳೆತ್ತರದಲ್ಲಿ ದುಂಡು ಕಟ್ಟಿಗೆ ತುಂಡು ಹಾಕಿ ತಯಾರಿಸಿದ ನಿಚ್ಚಣಿಕೆಗಳನ್ನು ಹತ್ತಿಳಿಯುವುದು ಮಕ್ಕಳಿಗೆ ಸುಲಭವೂ ಅಲ್ಲದೇ ಪ್ರಿಯವೂ ಆಗಿರುತ್ತದೆ. ಇದರಿಂದ ಕಾಲಿನ ಮೇಲೆ ಹೆಚ್ಚು ಭಾರ ಬೀಳದೆ ಇತರ ಸ್ನಾಯುಗಳಿಗೆ ಸಾಕಷ್ಟು ಚಲನವಲನ ಸಿಕ್ಕುತ್ತದೆ.

ಸಿಂಗಲ್ ಬಾರ್, ಡಬಲ್ ಬಾರ್ : 4 ಅಡಿ ಎತ್ತರ, 1–1½ ಅಡಿ ಅಗಲ ಮತ್ತು 3–4 ಅಡಿ ಉದ್ದವಿರುವ ಈ ಸಾಧನದ ಮೇಲೆ ಮಕ್ಕಳು ಹತ್ತುವುದು, ತೂಗಾಡುವುದು, ಕೆಳಗಿಳಿಯುವುದು, ಜಿಗಿಯುವುದು ಮುಂತಾಗಿ ಮಾಡುತ್ತಾರೆ. ಚಿಕ್ಕವಯಸ್ಸಿನ ಮಕ್ಕಳು ಇದನ್ನು ಉಪಯೋಗಿಸಲಿಕ್ಕಿಲ್ಲವಾದರೂ ದೊಡ್ಡಮಕ್ಕಳು ಈ ಆಟದಲ್ಲಿ ಆನಂದಿಸುತ್ತಾರೆ.

ಹಗ್ಗದ ನಿಚ್ಚಣಿಕೆಗಳು ಸ್ವಲ್ಪ ದೊಡ್ಡ ಮಕ್ಕಳಿಗೆ ಆಡಲು ಉಪಯೋಗವಾಗುತ್ತವೆ. ಸಾಕಷ್ಟು ಗಟ್ಟಿಯಾದ ಹಗ್ಗಕ್ಕೆ 9–9 ಅಂಗುಲದಂತೆ 1½ ಅಡಿಯ ದುಂಡು ಕಟ್ಟಿಗೆ ಅಥವಾ ಗಳದ ತುಂಡನ್ನು ಕಟ್ಟಬೇಕು. ಇಂಥ ನಿಚ್ಚಣಿಕೆಯನ್ನು ಗಿಡದ ಕೊಂಬೆ ಅಥವಾ ಜೋಕಾಲಿಯ ಸ್ಟ್ಯಾಂಡಿಗೆ ತೂಗುಹಾಕಬೇಕು. ಇದರಂತೆ ಗಂಟು ಕಟ್ಟಿದ ಹಗ್ಗದ ಕೊನೆಗೆ ಒಂದು ಕಟ್ಟಿಗೆ ಅಥವಾ ಗಳದ 1½ಯಷ್ಟು ಗಾತ್ರದ ತುಂಡನ್ನು ಕಟ್ಟಬೇಕು. ಇದರ ಮೇಲೆ ಕುಳಿತು ಆಮೇಲೆ ಮುಂದಿನದನ್ನು ಕಾಲಲ್ಲಿ ಹಿಡಿದು ಮೇಲೇರಲು ಮಗು ಯತ್ನಿಸುತ್ತದೆ.

ಗಿಡದ ಮೇಲೆ ಹತ್ತುವುದು : ಭೂಮಿಯಿಂದ ಬಹಳ ಎತ್ತರವಿಲ್ಲದ ಕೊಂಬೆಗಳ ಗಿಡವೇ ಮಕ್ಕಳಿಗೆ ಹತ್ತಲು, ಇಳಿಯಲು ನೈಸರ್ಗಿಕವಾದ ಸಾಧನ. ನಿಚ್ಚಣಿಕೆಯಂತೆ ನಿಶ್ಚಿತ ಅಂತರದಲ್ಲಿ ಕೊಂಬೆಗಳಿರುವುದಿಲ್ಲವಾದ್ದರಿಂದ ಮಗು ತನ್ನ ದೇಹಭಾರ ಸಮತೋಲನ ಮಾಡಿಕೊಂಡು ಕೈಕಾಲು ದೇಹವನ್ನು ಚಾಚಿ ಹತ್ತಿಳಿಯುತ್ತದೆ. ಕೆಲವು ಸಲ ಟೊಂಗೆಗಳನ್ನು ಬಗ್ಗಿಸಿ ಜೋತು ಬಿದ್ದು ಏರುತ್ತದೆ. ಇದರಿಂದ ಸಾಹಸ, ಯುಕ್ತಿ ಹಾಗೂ ಶರೀರಬಲ ವೃದ್ಧಿಗೊಳ್ಳುತ್ತವೆ. ಶಿಶುವಿಹಾರದ ಹತ್ತಿರದಲ್ಲಿ ಮರವಿದ್ದರೆ ಅನುಕೂಲ ; ಇಲ್ಲವಾದರೆ ಇಂಥ ಮರಗಳಿದ್ದ ಕಡೆಗೆ ಮಕ್ಕಳನ್ನು ಆಗಾಗ ಕರೆದುಕೊಂಡು ಹೋಗಬೇಕು.

ಜಿಗಿಯುವುದು : ಮಕ್ಕಳಿಗೆ ಜಿಗಿಯುವುದೊಂದು ಬಹಳ ಇಷ್ಟವಾದ ಕ್ರಿಯೆ. ಜಿಗಿತದಲ್ಲಿ ಮುಂಜಿಗಿತ, ಉಜ್ಜಿಗಿತ (ಎತ್ತರಕ್ಕೆ ಜಿಗಿಯುವುದು) ಅಧೋಜಿಗಿತ (ಮೇಲಿನಿಂದ ಕೆಳಗೆ ಜಿಗಿಯುವುದು) ಇತ್ಯಾದಿ ಪ್ರಕಾರಗಳಿರುತ್ತವೆ. 1 ಅಡಿ ಆಳ, 3 ಅಡಿ ಅಗಲ

ಹಾಗೂ 4 ಅಡಿ ಉದ್ದದ ಸ್ಥಳವನ್ನು ಸಣ್ಣ ಉಸುಕಿನಿಂದ ತುಂಬಿದ್ದರೆ ಜಿಗಿತಕ್ಕೆ ಒಳ್ಳೆಯ ಸಾಧನವೊದಗಿಸಿದಂತಾಗುತ್ತದೆ. ಉಚ್ಚಗಿತಕ್ಕೆ 2 ಕೋಲುಗಳಿಗೆ ಒಂದೊಂದು ಅಂಗುಲ ಅಂತರದಲ್ಲಿ ರಂಧ್ರ ಕೊರೆದಿದ್ದು ಆದರಲ್ಲಿ ಸಣ್ಣ ಹಗ್ಗ ಸೇರಿಸಲು ಸಾಧ್ಯವಿರಬೇಕು. ಮಕ್ಕಳು ಜಿಗಿಯುವುದು ರೂಢಿಯಾದಂತೆ ಈ ಎತ್ತರವನ್ನು ಏರಿಸುತ್ತ ಹೋಗಬೇಕು. ಇದರಲ್ಲಿ ಇನ್ನೊಂದು ರೀತಿಯೂ ಇದೆ. ಅದರಂತೆ ಒಂದು ಮಗುವನ್ನು ಕಾಲು ಚಾಚಿ ಕುಳಿತುಕೊಳ್ಳಲು ಹೇಳಬೇಕು. ಉಳಿದವರು ಆದರ ಪಾದದ ಮೇಲೆ ಹಾರಬೇಕು. ಬಳಿಕ ಮಗು ಒಂದು ಪಾದದ ಮೇಲೆ ಇನ್ನೊಂದು ಪಾದವಿಟ್ಟು ಕುಳಿತುಕೊಳ್ಳಬೇಕು : ಅದರ ಬಳಿಕ ಒಂದು ಕೈ ಇಡಬೇಕು; ಅನಂತರ ಮತ್ತೊಂದು ಕೈಯನ್ನೂ ಇಡಬೇಕು. ಮಕ್ಕಳು ಇದರ ಮೇಲೆ ಹಾರಿ ದಾಟಬೇಕು. ಒಂದು ಮಗುವನ್ನು ಅಂಬೆಗಾಲಿಕ್ಕಲು ಹೇಳಿ ಅವನ ಮೇಲಿಂದ ಉಳಿದವರು ದಾಟಬೇಕು. ಕಪ್ಪೆ ಜಿಗಿತವು ಇಂಥ ಒಂದು ಆಟ. ಮೆಟ್ಟಿಲು, ಗಿಡಗಳಿಂದ ಸಹ ಮಕ್ಕಳು ಜಿಗಿಯಬಲ್ಲರು.

ಜಾರುಬಂಡೆ : ಜಾರುವುದು ಮಕ್ಕಳಿಗೆ ಬಹಳ ಇಷ್ಟ. ಜಾರುಬಂಡೆಯಿಂದ ಜಾರುವಾಗ ಮಕ್ಕಳ ಕಾಲಿಗೆ ವಿಶ್ರಾಂತಿ ಸಿಗುವುದಲ್ಲದೆ ಬೆನ್ನು ಮತ್ತು ಹೊಟ್ಟೆಯ ಸ್ನಾಯುಗಳು ಕ್ರಿಯಾಶೀಲವಾಗುತ್ತವೆ. ಕೈಗಳ ಆಸರೆ ಇಲ್ಲದೆಯೇ ಜಾರುವಂತೆ ಮಕ್ಕಳಿಗೆ ಸೂಚಿಸಬೇಕು. ಮೊದಮೊದಲು ಬಹಳ ಎತ್ತರದಿಂದ ಜಾರುವುದಕ್ಕೆ ಚಿಕ್ಕ ಮಕ್ಕಳು ಭಯಪಡುತ್ತಾರೆ. ಆದ್ದರಿಂದ ಪ್ರಾರಂಭದಲ್ಲಿ ಕಡಮೆ ಎತ್ತರದಿಂದಲೇ ಜಾರುವಂತೆ ಮಾಡಿ ಕ್ರಮೇಣ ಇನ್ನೂ ಹೆಚ್ಚು ಎತ್ತರದಿಂದ ಜಾರುವಂತೆ ನೋಡಿಕೊಳ್ಳಬೇಕು.

ಏತದಾಟ (ಧಡಂಧಡಿಕೆ ; ಜೀಕಮೂಕ) : ಇದು ಒಂದು ಹಲಗೆಯ ಎರಡೂ ತುದಿಗೆ ಮಕ್ಕಳು ಕುಳಿತು ಮೇಲೆ ಕೆಳಗೆ ಹಲಗೆಯನ್ನು ತೂಗಿ ಆಡುವ ಆಟ. ಮಕ್ಕಳಿಗೆ ಯೋಗ್ಯವಾಗುವಂತೆ ಈ ಹಲಗೆ ಜೋಡಿಸಿರುವ ಸ್ಟ್ಯಾಂಡ್ 1½ ಅಡಿಯಷ್ಟು ಮಾತ್ರ ಎತ್ತರವಿರಬೇಕು. ಅದರ ಮೇಲೆ 9 ಅಂಗುಲ ಅಗಲ ಹಾಗೂ 1½ ಅಂಗುಲ ದಪ್ಪ ಮತ್ತು 6 ಅಡಿ ಉದ್ದದ ಹಲಗೆಯನ್ನು ಅದು ಮೇಲೆ ಕೆಳಗೆ ಆಡುವಂತೆ ಸ್ಟ್ಯಾಂಡ್ ಮೇಲೆ ಅಳವಡಿಸಬೇಕು. ಕೈಗೆ ಆಧಾರವಾಗಿ ಹಿಡಿಯಲು ಹಿಡಿಕೆಗಳಿದ್ದರೆ ಮಕ್ಕಳು ಆಟ ಆಡಲು ಹೆಚ್ಚು ಭಯಪಡುವುದಿಲ್ಲ.

ತೂಗುವ ಹಡಗು : ಇದೂ ಕೂಡ ಮಕ್ಕಳು ಜೀಕುವಂತೆ ಆಡುವ ಸಾಧನ. ಮಕ್ಕಳು ಇದರ ಎರಡೂ ಬದಿಗಳಲ್ಲಿ ಕುಳಿತು ಏತದಾಟದಂತೆ ಮೇಲಕ್ಕೂ ಕೆಳಕ್ಕೂ ಜೀಕಬಹುದು. ಇದರಲ್ಲಿ ಮಕ್ಕಳಿಗೆ ಕುಳಿತುಕೊಳ್ಳಲು ಹಾಗೂ ಕೈಯಲ್ಲಿ ಹಿಡಿಯಲು ಆಧಾರವಿರುವುದರಿಂದ ಚಿಕ್ಕ ಮಕ್ಕಳೂ ಕೂಡ ಇದನ್ನು ಆಡಬಲ್ಲರು.

ರಂಕಲ್‌ರಾಟೆ (ಚಕ್ರಿ) : ಒಂದು ಕಂಬಕ್ಕೆ ಕೊಡೆಯ ಆಕಾರದಲ್ಲಿ ಅನೇಕ ಸೀಟುಗಳಿದ್ದ ಚಕ್ರಿಯನ್ನು ಕೂಡಿಸಿದ್ದು, ಅದು ವರ್ತುಲಾಕಾರದಲ್ಲಿ ತಿರುಗುತ್ತದೆ. ಮಕ್ಕಳು ಒಂದೊಂದು ಸೀಟಿನ ಮೇಲೆ ಕುಳಿತರೆ ಅವರೂ ಆ ಚಕ್ರಿ ತಿರುಗಿದಂತೆ ವರ್ತುಲಾಕಾರವಲ್ಲಿ ತಿರುಗುತ್ತಾರೆ. ಇದು ಎಲ್ಲ ವಯಸ್ಸಿನ ಮಕ್ಕಳಿಗೂ ಬಹಳ ಇಷ್ಟವಾದೊಂದು ಆಟ.

ಜಂಗಲ್‌ಜಿಮ್ : ಇದನ್ನು ಕಬ್ಬಿಣ ಅಥವಾ ಕಟ್ಟಿಗೆಯ ಕೋಲುಗಳಿಂದ ಚೌಕಟ್ಟಿನ ಆಕಾರದಲ್ಲಿ 9-10 ಅಡಿ ಎತ್ತರವಿರುವಂತೆ ರಚಿಸಲಾಗಿರುತ್ತದೆ. ಇದರಲ್ಲಿದ್ದ ಚೌಕಟ್ಟುಗಳನ್ನು ಹತ್ತುವುದು, ಇಳಿಯುವುದು, ಒಳಗೆ ನುಸುಳಿ ಹೋಗುವುದು, ಹೀಗೆ ಮಕ್ಕಳು ಇದರ ಮೇಲೆ ಏರಿಳಿದು ಆಟವಾಡುತ್ತಾರೆ. ಇದರಿಂದ ದೇಹದ ಎಲ್ಲ ಭಾಗದ ಸ್ನಾಯುಗಳಿಗೆ ವ್ಯಾಯಾಮ ಸಿಗುತ್ತದೆ.

ಉಯ್ಯಾಲೆ (ಜೋಕಾಲಿ) : ಮಕ್ಕಳಿಗೆ ತೂಗುವುದೆಂದರೆ ಆನಂದ. ಕೂಸಿರುವಾಗಲೂ ತೊಟ್ಟಿಲಲ್ಲಿ ತೂಗಿದಾಗ ಮಲಗಿಕೊಳ್ಳುತ್ತವೆ. ಶಿಶುವಿಹಾರದ ಮಕ್ಕಳಿಗೆ 7 ಅಡಿ ಎತ್ತರದ ಜೋಕಾಲಿ ಕಟ್ಟಬಹುದು. ನಿಂತು ಆಡಲು ಕೆಳಗೆ ಒಂದು ಕಟ್ಟಿಗೆ ತುಂಡು ಹಾಕಬಹುದು. ಮಕ್ಕಳು ಇದರ ಮೇಲೆ ನಿಂತು ಜೀಕುತ್ತಾರೆ. ಬಹಳ ಚಿಕ್ಕ ಮಕ್ಕಳಿಗೆ ಕೂಡುವುದಕ್ಕಾಗಿ ಜೋಕಾಲಿಯಲ್ಲಿ 6 ಅಂಗುಲ ಅಗಲ, 9 ಅಂಗುಲ ಉದ್ದ ಹಾಗೂ 1½ ಅಂಗುಲ ದಪ್ಪದ ಹಲಗೆ ಹಾಕಬೇಕು. ಇದರ ಮೇಲೆ ಮಕ್ಕಳು ಕುಳಿತು ಕೂಡ ಜೋಕಾಲಿ ಆಡಬಹುದು. ಗಿಡಗಳ ಟೊಂಗೆಗಳಿಗೂ ಕೂಡ ಹಗ್ಗ ಕಟ್ಟಿ ಜೋಕಾಲಿಯಾಡುವುದು ಹಳ್ಳಿಗಳಲ್ಲಿ ಸಾಮಾನ್ಯ.

ಸಾಧನರಹಿತ ಆಟಗಳು

ಆಟದ ಬಯಲಿನಲ್ಲಿ ಯಾವುದೇ ಆಟದ ಸಾಧನಗಳಿಲ್ಲದೆಯೂ ಆಡಬಹುದು. ಇಂಥ ಆಟಗಳು ಹೆಚ್ಚಾಗಿ ಸಾಮೂಹಿಕವಾದವು. ಐಕ್ಯಭಾವನೆ, ಸಹಕಾರ, ಒಂದು ಗುರಿ ಸಾಧಿಸಲು ಎಲ್ಲರೂ ಒಟ್ಟಾಗಿ ದುಡಿಯಬೇಕೆಂಬುವರ ಅರಿವು ಈ ಆಟಗಳಿಂದ ಸಿದ್ಧಿಸುತ್ತವೆ. ಕಣ್ಣುಮುಚ್ಚಾಲೆ, ಚೆಂಡಿನಾಟ, ಮ್ಯೂಸಿಕಲ್‌ಚೇರ್, ಓಡುವ ಆಟಗಳು ಇತ್ಯಾದಿ ಆಟಗಳನ್ನಾಡಿಸಬಹುದು. ಆದರೆ ಚಿಕ್ಕ ಮಕ್ಕಳಿಗ ವೈಯಕ್ತಿಕ ಆಟದ ಕಡೆಗೆ ಒಲವು ಹೆಚ್ಚು. ಬೆಳೆದಂತೆ ಸಾಮೂಹಿಕ ಆಟಗಳನ್ನು ಆಡಲು ಇಷ್ಟಪಡುತ್ತಾರೆ. ಆದಕಾರಣ ಯಾವುದೇ ಕಾರಣದಿಂದಲೂ ಮಕ್ಕಳಿಗೆ ಇಂಥದೇ ಆಟವಾಡಬೇಕೆಂಬ ಕಡ್ಡಾಯವಿರಕೂಡದು.

ಓಟ : ಒಂದು ನಿಶ್ಚಿತ ವಸ್ತು, ಗೋಡೆ ಇಲ್ಲವೇ ಶಿಕ್ಷಕಿಯನ್ನು ಓಡಿಬಂದು ಮುಟ್ಟಲು ಮಕ್ಕಳಿಗೆ ಹೇಳಬಹುದು. ಆದರೆ ಗೆಲುವು ಸೋಲುಗಳ ವಿಚಾರ ಇಲ್ಲಿ ತರ

ಬಾರದು. ಮಕ್ಕಳು ತಮ್ಮ ಶಕ್ತ್ಯಾನುಸಾರವಾಗಿ ಓಡುತ್ತಾರೆ. ಈ ಆಟಕ್ಕೆ ಹೆಚ್ಚು ಕಟ್ಟುನಿಟ್ಟು ಇಲ್ಲದಿರುವುದರಿಂದ 2-2½ ವರ್ಷದ ಮಕ್ಕಳಿಂದಲೂ ಈ ಆಟವಾಡಿಸಬಹುದು. ಅಲ್ಲದೆ ಕಣ್ಣು ಮುಚ್ಚಾಲೆ, ಕುರುಡನನ್ನು ಮುಟ್ಟುವುದು ಇತ್ಯಾದಿ ಆಟಗಳನ್ನು ಸಹ ಆಡಿಸಬಹುದು; ಮಕ್ಕಳು ಕುಸ್ತಿ ಕೂಡ ಆಡಬಹುದು; ಸಾಧನಗಳಿಲ್ಲದೆ



ಚಿತ್ರ 4: ಪಾರಾಗಲು ಓಡುವುದೊಂದೇ ಉಪಾಯ

ಬಯಲಾಂಗಣ ಆಟಗಳನ್ನೂ ಆಡಿಸಬಹುದು. ಶಿಶುವಿಹಾರದಲ್ಲಿ ಒಂದು ದೊಡ್ಡ ಕೋಣೆ ಇದ್ದರೆ ಆಟದ ಬಯಲಿನಲ್ಲಿ ಆಡಿಸಿದ ಆಟಗಳನ್ನು ಕೋಣೆಯ ಒಳಗೂ ಆಡಿಸಬಹುದು. ಅಲ್ಲದೆ ಲಡ್ಡು ಲಡ್ಡು ತಿಮ್ಮಯ್ಯ, ಮುದಿದಾಳುವನ್ನು ಹುಡುಕುವುದು, ಮಕ್ಕಳ ಕೈಯಲ್ಲಿ ಮುಚ್ಚಿಟ್ಟುಕೊಂಡ ವಸ್ತು ಹುಡುಕುವುದು, ಮ್ಯೂಸಿಕಲ್ ಚೇರ್, ಬಗಾಟ ಬುಗರಿ, ಜುಮ್ಮಾ—ಇವೆಲ್ಲವುಗಳನ್ನು ಸಹ ಆಡಿಸಬಹುದು.

ಶಾಂತಿಯ ಆಟಗಳು

ಪ್ರತಿಯೊಂದು ಕ್ರಿಯೆಯಲ್ಲಿ ಕ್ರಿಯಾಶೀಲ ಸ್ನಾಯುಗಳ ಜೊತೆಗೆ ಕ್ರಿಯಾನಿರೋಧಿ ಸ್ನಾಯುಗಳೂ ಕೆಲಸ ಮಾಡುತ್ತವೆ. ಅವುಗಳ ಸಹಕಾರ ಯೋಗ್ಯವಾಗಿದ್ದರೆ ಕ್ರಿಯೆಯನ್ನು ಕೌಶಲ್ಯಪೂರ್ಣವಾಗಿ ನಿರ್ವಹಿಸಲು ಸಾಧ್ಯ. ಶಾಂತಿಯ ಆಟಗಳು ಕ್ರಿಯಾನಿರೋಧಿ ಸ್ನಾಯುಗಳ ಮೇಲೆ ಹತೋಟಿ ಸಾಧಿಸಲು ಸಹಕಾರಿಯಾಗಿರುತ್ತವೆ. ಮಗು

ಅಧ್ಯಾಯ 5

ಸ್ಥೂಲ ಸ್ನಾಯು ಚಟುವಟಿಕೆಗಳು

ಶಾರೀರಕ ಚಟುವಟಿಕೆಗಳು ವಿವಿಧ ಸ್ನಾಯುಗಳ ಸಹಕಾರದಿಂದ ಜರುಗುತ್ತವೆ. ಮಕ್ಕಳು ಮೊದಮೊದಲು ಸ್ಥೂಲ ಸ್ನಾಯುಗಳನ್ನು ಉಪಯೋಗಿಸಲು ಕಲಿಯುತ್ತಾರೆ. ವ್ಯಾವಹಾರಿಕ ಜೀವನದ ಕೆಲಸಗಳು, ಕ್ರೀಡಾಂಗಣದ ಆಟಗಳು, ತೋಟದ ಕೆಲಸ ಇವು ಗಳಿಂದ ಮಕ್ಕಳಿಗೆ ಈ ಸ್ಥೂಲ ಸ್ನಾಯುಗಳ ಉಪಯೋಗ ಮಾಡಲು ಸಹಾಯಸಿಕ್ಕುತ್ತದೆ. ಇವುಗಳನ್ನು ಶ್ರಮದ ಕೆಲಸಗಳೆಂದು ಕರೆಯಬಹುದು. ಇವಲ್ಲದೆ ಸೂಕ್ಷ್ಮ ಸ್ನಾಯುಗಳ ಚಲನವಲನೆಗೂ, ಕಲಾತ್ಮಕ ದೃಷ್ಟಿಯಿಂದ ಸ್ನಾಯುಗಳ ಚಲನವಲನೆಗೂ ಅವಕಾಶ ಸಿಕ್ಕಬೇಕು.

ವ್ಯಾವಹಾರಿಕ ಜೀವನದ ಕೆಲಸಗಳಲ್ಲಿ ಶ್ರಮಯುತವಾದುವನ್ನು ಬಯಲು ಸ್ಥಳದಲ್ಲಿ ಮಾಡಿಸಿದರೆ ಕೆಲಸದಲ್ಲಿ ಹೆಚ್ಚಿನ ಸ್ವಾತಂತ್ರ್ಯ ಒಳ್ಳೆಯ ಸ್ವಚ್ಛ ಗಾಳಿ, ಬೆಳಕು ದೊರೆತು ಮಕ್ಕಳ ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮವಾಗುತ್ತದೆ. ಈ ಕೆಲಸಗಳು ಸಾಮೂಹಿಕ ಸ್ವರೂಪದವು ಇರುತ್ತವೆ. ಮಕ್ಕಳು ತಮ್ಮ ಕ್ರಿಯಾಶಕ್ತಿಯನ್ನು ಇವುಗಳಲ್ಲಿ ಉಪಯೋಗಿಸುವರಲ್ಲದೆ ಅವರ ರಚನಾತ್ಮಕ ಶಕ್ತಿಗೆ ಚಾಲನೆ ದೊರೆಯುತ್ತದೆ. ತಮ್ಮ ಅಂತಃಶಕ್ತಿಯ ಉಪಯೋಗ ಮಾಡಲು ಮಕ್ಕಳು ಬಹಳ ಉತ್ಸುಕರಿರುತ್ತಾರೆ. ಅವರಿಗೆ ಯೋಜಿಸಿದ ಶ್ರಮದ ಕೆಲಸ ಕೊಡದೆಹೋದರೆ ಈ ಶಕ್ತಿ ಅಯುಕ್ತ ರೀತಿಯಲ್ಲಿ ಉಪಯೋಗಿಸಲ್ಪಡುತ್ತದೆ.

ತೋಟಗಾರಿಕೆ ಮಹತ್ವ: ತೋಟಗಾರಿಕೆಯಿಂದ ಮಕ್ಕಳಿಗೆ ಸಾಕಷ್ಟು ವ್ಯಾಯಾಮ ದೊರಕುತ್ತದೆ. ಅಗೆಯುವುದು, ಮಡಿಮಾಡುವುದು, ನೀರುಹಾಕುವುದು, ಇತ್ಯಾದಿ ಕ್ರಿಯೆಗಳಿಂದ ಮಕ್ಕಳ ಸ್ಥೂಲ ಸ್ನಾಯುಗಳಿಗೆ ಸಾಕಷ್ಟು ಕೆಲಸ ಸಿಕ್ಕುತ್ತದೆ. ಲ್ಲದೆ, ಅಲ್ಲಿ ಬೆಳೆಯುವ ತರಕಾರಿ, ಹೂವು, ಹಣ್ಣುಗಳಿಗೂ ಬೆಲೆ ಇರುತ್ತದೆ. ಅದನ್ನು ವರೇ ಉಪಯೋಗಿಸುತ್ತಿದ್ದರೂ ತಮ್ಮ ಶ್ರಮದ ಫಲ ತಾವೇ ತಿನ್ನುವುದು, ನೋಡು ದರಿಂದ ತೃಪ್ತಿಯುಂಟಾಗುತ್ತದೆ. ಮಿಗಿಲಾಗಿ ಅನೇಕ ವೈಜ್ಞಾನಿಕ ವಿಚಾರಗಳೂ ಳಿಯುತ್ತವೆ. ಸಸ್ಯಶಾಸ್ತ್ರದಲ್ಲಿಯ ಭೂಮಿಯ ಗುಣಧರ್ಮಗಳು, ಬೀಜ, ಮೊಳಕೆ, ಡ ಬೆಳೆದು ಫಲಪುಷ್ಪ ನೀಡುವುದನ್ನೆಲ್ಲ ಪ್ರತ್ಯಕ್ಷ ಕಾಣುತ್ತಾರೆ. ಗಿಡಗಳ ಬೇರುಗಳು, ಂಡ, ಎಲೆ, ಹೂವು, ಹೊಲ ಇವುಗಳನ್ನು ಆಗಾಗ ನೋಡುವ ಅವಕಾಶವೂ ಈ ಮೂಲಕ ದೊರೆಯುತ್ತದೆ. ಅವುಗಳ ಆಕಾರ, ಬಣ್ಣ, ತೂಕಗಳ ಬಗ್ಗೆಯೂ

ಬೀಜೋತ್ಪತ್ತಿ, ಬೀಜ ಪ್ರಸರಣೆ ಹಾಗೂ ಗಡ್ಡೆಯಿಂದ, ಕಡ್ಡಿಯಿಂದ ಸಸಿಗಳ ವಂಶ ವೃದ್ಧಿಯನ್ನು ಸಹ ವೀಕ್ಷಿಸಲು ಸಾಧ್ಯವಾಗುತ್ತದೆ. ಗಿಡಗಳು ಜೀವಿಸಿರಲು ಬೇಕಾಗುವ ನೀರು, ಗಾಳಿ, ಬೆಳಕು, ಮಣ್ಣು ಇತ್ಯಾದಿಗಳ ಆವಶ್ಯಕತೆಯನ್ನು ಸಹ ತಿಳಿಯುತ್ತಾರೆ.



ಚಿತ್ರ 5 : ಮಕ್ಕಳ ಕೈತೋಟ 'ನಾವೂ ಬೆಳೆಯುತ್ತೇವೆ'

ತೋಟದ ಕೆಲಸದಿಂದ ಮಕ್ಕಳ ಭಾವನಾ ವಿಕಾಸಕ್ಕೂ ಸಹಾಯವಾಗುತ್ತದೆ. ಅವರ ಸೌಜನ್ಯ ಪ್ರವೃತ್ತಿ ಹಾಗೂ ವಾತ್ಸಲ್ಯಗಳಿಗೆ ಸಾಕಷ್ಟು ಅವಕಾಶ ಸಿಗುತ್ತದೆ. ಮಕ್ಕಳು ಬೀಜದಿಂದ ಮೊಳಕೆ ಬಂದು, ಸಸಿಯಾಗಿ ಬೆಳೆದು ಹೂವು, ಹಣ್ಣು ಕೊಡುವುದನ್ನು ಕಂಡು ತಾವೇ ಅವುಗಳಿಗೆ ಅವಶ್ಯವಾದ ನೀರು, ಗೊಬ್ಬರ ಹಾಕಲು ಮುಂದಾಗುತ್ತಾರೆ. ತಮ್ಮ ಸಸಿಗಳು ಚೆನ್ನಾಗಿ ಬೆಳೆಯಬೇಕೆಂದು ಕಾಳಜಿ ವಹಿಸುತ್ತಾರೆ. ಸುಂದರವಾದ ಬಣ್ಣ ಬಣ್ಣದ ಹೂವುಗಳನ್ನು ಕಂಡು ಆನಂದಿಸುತ್ತಾರೆ. ಅದು ಅಲಕ್ಷ್ಯದಿಂದ ನೀರು ಹಾಕದೆ ಒಣಗಿದರೆ ಖಿನ್ನರಾಗುತ್ತಾರೆ. ಬೇರೆ ಯಾರಾದರೂ ಅವನ್ನು ಕೊಯ್ಯಲು ಬಾರದಂತೆ ಸಂರಕ್ಷಿಸುತ್ತಾರೆ. ತಮ್ಮದೆಂಬ ಭಾವನೆ ಮಕ್ಕಳಲ್ಲಿ ಬೆಳೆಯುತ್ತದೆ. ಹೂವುಗಳು ಗಾಳಿಗೆ ಅಲ್ಲಾಡುವುದು, ಬಿಸಿಲಿಗೆ ಬಾಡುವುದು, ಕೊನೆಗೆ ಒಣಗುವುದನ್ನು ಕಂಡು ಜೀವನದ ಪರಿಚಯವಾಗುತ್ತದೆ. ಸೌಂದರ್ಯದ ಕಲ್ಪನೆ, ಆರಾಧನೆಗಳು ಬೆಳೆಯುತ್ತವೆ : ಬಳ್ಳಿಗಳನ್ನು ಯಾವ ಕಡೆ ಹಾಕಬೇಕು, ಹೂವಿನ ಸಸಿಗಳ ಇತರ ಸಸಿಗಳನ್ನು ಹೇಗೆ ಎಲ್ಲಿ ಹಾಕಬೇಕೆಂಬ ಯೋಜನೆ ಮಾಡಲು ನೆರವಾಗುತ್ತದೆ. ಇದರಿಂದ ಜೀವನದ ಇತರ ವಿಷಯುಗಳಲ್ಲಿಯೂ ಯೋಜನೆಗಳನ್ನು ರೂಪಿಸುವ ಅಭ್ಯಾಸವಾಗುತ್ತದೆ.

ಮಕ್ಕಳ ಭಾಷಾ ಶಿಕ್ಷಣಕ್ಕೂ ತೋಟದ ಕೆಲಸದಿಂದ ಸಹಾಯವಾಗುತ್ತದೆ. ಅನುಭವದಿಂದ ಭಾಷಾವೃದ್ಧಿಯಾಗುತ್ತದೆ. ಅವರು ಹೆಚ್ಚು ತೊಂದರೆಯಿಲ್ಲದೆ ಕಲಿತ ಶಬ್ದಗಳನ್ನೂ, ವಿಷಯಗಳನ್ನೂ ಬಹುಕಾಲ ನೆನಪಿಡುತ್ತಾರೆ. ಸಸ್ಯಜೀವನ, ಪ್ರಾಣಿ ಜೀವನ, ಭೂಗುಣ ಮತ್ತು ತೋಟದ ಕೆಲಸಗಳಿಗೆ ಸಂಬಂಧಿಸಿದಂತ ಅನೇಕ ಶಬ್ದಗಳ ಪರಿಚಯವಾಗುತ್ತದೆ.

ಹಳ್ಳಿಗಳಲ್ಲಿ ಮಕ್ಕಳು ತಮ್ಮ ಹೊಲಗದ್ದೆ, ತೋಟಗಳಲ್ಲಿ ಚಿಕ್ಕಂದಿನಿಂದಲೂ ಓಡಾಡುತ್ತಿರುವುದರಿಂದ ಅವುಗಳ ಅಲ್ಪಸ್ವಲ್ಪ ಪರಿಚಯವಿರುತ್ತದೆ. ಆದರೆ ಶೈಕ್ಷಣಿಕ ದೃಷ್ಟಿಯಿಂದ ಹೆಚ್ಚು ಲಾಭ ಸಿಕ್ಕಿರುವುದಿಲ್ಲ. ಶಿಕ್ಷಕ ಮಕ್ಕಳನ್ನು ಇಂಥ ಸ್ಥಳಗಳಿಗೆ ಪ್ರವಾಸಕ್ಕೆ ಕರೆದೊಯ್ದು ಅಲ್ಲಿಯ ನಿತ್ಯಜೀವನ, ಮಣ್ಣಿನಗುಣ, ಸಾಗುವಳಿ ಕ್ರಮಗಳನ್ನು ಮಕ್ಕಳ ಗಮನಕ್ಕೆ ತಂದು ಅವರ ಜ್ಞಾನಾಭಿವೃದ್ಧಿಯಲ್ಲಿ ಸಹಾಯಮಾಡಬಹುದು.

ತೋಟದ ಕೆಲಸಮಾಡಲು ಮಕ್ಕಳಿಗೆ ಯೋಗ್ಯವಾದ ಉಪಕರಣ, ವಸ್ತುಗಳು ಇರಬೇಕು. ಚಿಕ್ಕ ಚಿಕ್ಕ ಗುದ್ದಲಿ, ಸಲಿಕೆ, ಕುರುಪಿ, ಸಾದಾ ಹಾಗೂ ಅಗಲ ಕಸಬರಿಕೆ, ಬುಟ್ಟಿ, ಕಸ ಒಯ್ಯಲು ಡಬ್ಬಿ, ಗಾಡಿ, ನೀರು ತರುವುದಕ್ಕಾಗಿ ಬಕೆಟ್ಟು, ಹೆಂಟೆ ಒಡೆಯಲು ಕೋಲು ಮುಂತಾದ ಮಕ್ಕಳಿಗೆ ಯೋಗ್ಯವಾದ ಸಾಧನಗಳಿರಬೇಕು. ಅವುಗಳಿಗೆ ಆಕರ್ಷಕ ಬಣ್ಣವಿರಬೇಕು. ಮಕ್ಕಳು ಅದನ್ನು ಉಪಯೋಗಿಸಿದ ನಂತರ ಅವುಗಳನ್ನು ಸ್ವಸ್ಥಾನಗಳಲ್ಲಿ ಮತ್ತೆ ಇಡುವಂತೆ ನೋಡಿಕೊಳ್ಳಬೇಕು. ಹಾಗೆಯೇ ಕೆಲಸದ ನಂತರ ಸ್ವಚ್ಛವಾಗಿ ಕೈಕಾಲು ತೊಳೆಯಲು ಮಕ್ಕಳು ಮರೆಯಬಾರದು.

ಪ್ರಾಯೋಗಿಕ ತೋಟದ ಕೆಲಸ: ಯಾವ ಬೀಜ ಮೊಳೆಯಬಲ್ಲದು, ಯಾವುದು ಇಲ್ಲ: ಗಿಡಕ್ಕೆ ನೀರು, ಮಣ್ಣು, ಹವೆ, ಬಿಸಿಲು, ಗೊಬ್ಬರದ ಆವಶ್ಯಕತೆ ಗಳೆಷ್ಟಿದೆ ಇತ್ಯಾದಿ ವಿಚಾರಗಳನ್ನು ಮಕ್ಕಳಿಗೆ ನಿದರ್ಶಿಸಿ ತೋರಿಸಬಹುದು. ಈ ಆವಶ್ಯಕತೆ ಗಳಲ್ಲಿ ಕೆಲವನ್ನು ತಪ್ಪಿಸಿ ಅದರಿಂದಾಗುವ ಪರಿಣಾಮವೇನೆಂಬುದನ್ನು ಮಕ್ಕಳ ಅನುಭವಕ್ಕೆ ತರಬಹುದು. ಬಿಸಿಲಿಲ್ಲದೆ ಬೆಳೆದ ಸಸಿಗಳು ಹಳದಿ ಬಣ್ಣದವೂ ಬಿಸಿಲಿನಲ್ಲಿಯವು ಹಸುರಾ ಗಿಯೂ ಇರುತ್ತವೆಂಬುದನ್ನು ಮನಗಾಣಿಸಬಹುದು. . ಹಾಗೆಯೇ ಗಾಜಿನ ಸೀಸೆಯಲ್ಲಿ ಬೀಜಹಾಕಿ ಅದರ ಬೇರು, ಕಾಂಡ, ಎಲೆಗಳ ಬೆಳವಣಿಗೆ, ಈರುಳ್ಳಿ (ಉಳ್ಳೀಗಡ್ಡಿ), ಆಲೂಗಡ್ಡೆ (ಬಟಾಟೆ), ಗಜ್ಜರಿ, ಮೂಲಂಗಿ, ಅರಿಶಿನ ಇತ್ಯಾದಿಗಳು ಬೆಳೆಯುವ ಬೇರೆ ಬೇರೆ ರೀತಿಗಳನ್ನು ತೋರಿಸಬಹುದು. ಕೇವಲ ಬೀಜದಿಂದ ಮಾತ್ರವಲ್ಲ, ಎಲೆ, ಕಾಂಡ, ಟೊಂಗೆಗಳಿಂದಲೂ ಗಿಡ ಬೆಳೆಸಬಹುದೆಂದು ಮನವರಿಕೆ ಮಾಡಿಕೊಡಬಹುದು. ಮಾತ್ರವಲ್ಲ, ಉಪಯುಕ್ತವಾದ ಗಿಡಬಳ್ಳಿಗಳನ್ನು ಬೆಳೆದು ಆಹಾರದ ಪೌಷ್ಟಿಕತೆಯನ್ನು ಹೆಚ್ಚಿಸಲು ಅನುಕೂಲಮಾಡಿಕೊಡಬೇಕು. ಹಳ್ಳಿಗಳಲ್ಲಿ ಈ ಉದ್ದೇಶ ಸಾಧನೆಯ ಕಡೆ ಹೆಚ್ಚು ಗಮನಕೊಡಬೇಕು.

ಇತರ ಶ್ರಮಯುತ ಕೆಲಸಗಳೆಂದರೆ ಸಣ್ಣ ಸಾಚಾ (ಮೋಲ್ಡ್) ನೆರವಿನಿಂದ ಇಟ್ಟಿಗೆ ಮಾಡುವಿಕೆ, ಮನೆಕಟ್ಟುವಿಕೆ, ಬಡಗಿಯಂತೆ ಕಟ್ಟಿಗೆ ಜೋಡಿಸುವಿಕೆ, ಆಟದ ಬಯಲು ಸಿದ್ಧಪಡಿಸುವಿಕೆ ಇತ್ಯಾದಿಗಳು. ಇವೆಲ್ಲವೂ ಮಕ್ಕಳಿಗೆ ಬಹಳ ಇಷ್ಟ. ಶಿಕ್ಷಕಿ ಯತ್ನಶೀಲಳಾಗಿದ್ದರೆ ಮಕ್ಕಳಿಗೆ ಇಂಥ ಅನೇಕ ಆಟ, ಚಟುವಟಿಕೆಗಳ ಮೂಲಕ ವಿವಿಧಾನುಭವಗಳನ್ನು ತಂದುಕೊಟ್ಟು ಅವರ ಜೀವನವನ್ನು ಸಫಲಗೊಳಿಸಬಲ್ಲಳು.

ಅಧ್ಯಾಯ 6

ಮುಕ್ತವ್ಯವಸಾಯ ಮತ್ತು ಜ್ಞಾನೇಂದ್ರಿಯ ವಿಕಾಸ

ಮಗು 2-2½ ವರ್ಷದ್ದಾಗುವಾಗ ಮನೆಯ ವಾತಾವರಣದಿಂದ ಇನ್ನೂ ವಿಸ್ತಾರ ಜಗತ್ತಿಗೆ ಕಾಲಿಡಲು ಹಾತೊರೆಯುತ್ತದೆ. ಅದಕ್ಕೆ ತನ್ನ ಸ್ನಾಯುಗಳನ್ನು ಮನಸೋಇಚ್ಛೆ ಆಡಿಸುವ ಕಾತರವಿರುತ್ತದೆ. ಇದಕ್ಕೆ ಶಿಶುವಿಹಾರಗಳಲ್ಲಿ ಒದಗಿಸಬಹುದಾದ ಮುಕ್ತವ್ಯವಸಾಯ ಒಂದು ಸದವಕಾಶ. ಇಲ್ಲಿ ಹೆಚ್ಚು ಕಡಮೆ ತನ್ನದೇ ವಯಸ್ಸಿನ ಇತರ ಮಕ್ಕಳೂ ಇರುವುದರಿಂದ ಆಟವಾಡಲು ಒಳ್ಳೆಯ ಜೊತೆಗಾರರು ಸಿಕ್ಕಂತಾಗುತ್ತದೆ. ಈವರೆಗೆ ತನ್ನಷ್ಟಕ್ಕೆ ತಾನೇ ಇರುತ್ತಿದ್ದ ಮಗು ಈಗ ಇತರರ ಸಹವಾಸ ಬಯಸುತ್ತದೆ. ತನ್ನ ಸಾಮಾಜಿಕ ಸಂಬಂಧ ವ್ಯವಹಾರಗಳನ್ನು ಬೆಳೆಸಿಕೊಳ್ಳುತ್ತದೆ. ಇದಕ್ಕಾಗಿ ಮುಕ್ತ ವ್ಯವಸಾಯದಲ್ಲಿನ ಸಾಧನಗಳು, ಚಟುವಟಿಕೆಗಳು ಅನುಕೂಲಮಾಡಿಕೊಡುತ್ತವೆ. ಕುಟುಂಬದ ಸುರಕ್ಷಿತ ವಾತಾವರಣದಿಂದ ಈಗ ಹೊರ ಜಗತ್ತಿನೊಂದಿಗೆ ಸಂಪರ್ಕ ಬೆಳೆಸುವಾಗ ಇನ್ನೂ ಹೆಚ್ಚಿನ ಸ್ವಾತಂತ್ರ್ಯಬೇಕು. ತನ್ನಿಚ್ಛೆಯಂತೆ ಚಟುವಟಿಕೆಗಳನ್ನು ಕೈಗೊಳ್ಳಲು ಇದರಲ್ಲಿ ಅವಕಾಶವಿರುತ್ತದೆ. ಹೊಸದಾಗಿ ಶಿಶುವಿಹಾರಕ್ಕೆ ಸೇರಿದ ಮಕ್ಕಳು ಮೊದಮೊದಲು ಅಳುತ್ತಾರೆ. ಆದರೆ ಯಾವುದಾದರೂ ಆಟದಲ್ಲಿ ಮಗ್ನರಾದರೆ ಮನೆಯ ನೆನಪನ್ನು ಪೂರ್ತಿ ಮರೆತುಬಿಡುತ್ತಾರೆ. ಅವರ ಮುಖದ ಮೇಲಿನ ಸಂತೋಷವನ್ನು ಕಂಡು ಶಿಕ್ಷಕಿಗೂ ಸಮಾಧಾನ, ಆನಂದ. ಹೀಗೆ ಮನೆಯಿಂದ ಶಾಲೆಯ ಇತರ ಮಕ್ಕಳ ಜೊತೆ ವಾತಾವರಣಕ್ಕೆ ಹೊಂದಿಕೊಳ್ಳಲು ಚಟುವಟಿಕೆಗಳು ಸಹಾಯಕಾರಿ.

ಮುಕ್ತವ್ಯವಸಾಯದಲ್ಲಿ ಮಗುವಿಗೆ ಪೂರ್ಣ ಸ್ವಾತಂತ್ರ್ಯವಿರುತ್ತದೆ. ತನಗೆ ಬೇಕಾಗಿರುವ ಹಾಗೆ ಮನೆ ಕಟ್ಟುತ್ತದೆ; ಗೋಪುರ ಕಟ್ಟುತ್ತದೆ; ಚಿತ್ರ ನೋಡುತ್ತದೆ. ಕಪ್ಪುಹಲಗೆಯ ಮೇಲೆ ಗೆರೆಯೆಳೆದು ಚಿತ್ರ ಬರೆಯುತ್ತದೆ. ಇಲ್ಲಿ ಶಿಕ್ಷಕಿಯ ಮಾರ್ಗ ದರ್ಶನ ಅಥವಾ ಸಹಾಯದ ಆವಶ್ಯಕತೆಯಿರುವುದಿಲ್ಲ. ಆಗ ಶಿಶುವಿಹಾರದ ಯಾವುದೇ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿಲ್ಲ; ಹೊಸದಾಗಿ ಬಂದ ಮಗು ಈ ನಿಯಮಗಳನ್ನು ತಿಳಿದು ಪಾಲಿಸಲು ಸ್ವಲ್ಪ ಕಾಲಾವಕಾಶ ಕೊಡಬೇಕು. ಈ ವೇಳೆಯಲ್ಲಿ ಅದು ತನ್ನನ್ನು ತಾನೇ ಮರೆತು ಚಟುವಟಿಕೆಯಲ್ಲಿ ಮಗ್ನವಾಗಿ ವಾತಾವರಣಕ್ಕೆ ಹೊಂದಿಕೊಳ್ಳುವಂತೆ ನೋಡಿಕೊಳ್ಳುವುದು ಅವಶ್ಯ.

ಶಿಶುವಿಹಾರದಲ್ಲಿ ಮಕ್ಕಳಿಗೆ ಸ್ವೇಚ್ಛೆಯಿಂದ ಸ್ವತಂತ್ರವಾಗಿ ಆಟವಾಡಲು ಅವಕಾಶ ವಿರುವುದರಿಂದ ಅವರ ಮನಸ್ಸು ಹಗುರಾಗುತ್ತದೆ. ಇತರ ವೇಳೆಯಲ್ಲಿ ಕಂಡುಬರುವ

ಚಂಚಲತೆ ತಮಗೆ ಇಷ್ಟವಾದ ಕ್ರಿಯೆ ಮಾಡುವಲ್ಲಿ ಕಂಡುಬರುವುದಿಲ್ಲ. ಈ ಏಕಾಗ್ರತೆಯಿಂದ ಅವರ ಕಾರ್ಯಕುಶಲತೆ ಬೆಳೆಯುತ್ತದೆ : ಸ್ನಾಯುಗಳ ಸಂಯೋಜನೆ ಸಾಧಿಸುವಲ್ಲಿ ಸಹಾಯಕವಾಗುತ್ತದೆ. ತಮ್ಮ ಕಾರ್ಯದಲ್ಲಿ ಹೊಸ ಹೊಸ ವಿಚಾರಗಳನ್ನು ಕಂಡು ಪ್ರಗತಿಯನ್ನು ಸಾಧಿಸುತ್ತಾರೆ. ಹೊಸ ನಿರ್ಮಾಣದಿಂದ ಮಗು ಆನಂದಿಸುತ್ತದೆ. ಶಿಶುವಿಹಾರದಲ್ಲಿ, ಶಿಕ್ಷಣ ಸ್ವಯಂಶಿಕ್ಷಣವಾಗಿರುವುದರಿಂದ ಈ ಸಾಧನೆಯು ಬಹಳ ಮಹತ್ವದ್ದು. ಪ್ರಾರಂಭದಲ್ಲಿ ಮನಸ್ಸಿನ ಸಮತೋಲನ ತಂದುಕೊಳ್ಳುವುದಕ್ಕಾಗಿ ಮುಕ್ತವ್ಯವಸಾಯದ ಈ ಚಟುವಟಿಕೆಗಳಿರುತ್ತವೆ. ಇದರ ತರುವಾಯ ಮಗು ಇತರ ಚಟುವಟಿಕೆಗಳಲ್ಲಿ ಹಂತಹಂತವಾಗಿ ಪ್ರಗತಿ ಸಾಧಿಸಬೇಕು.



ಚಿತ್ರ 6 : ಮುಕ್ತ ವ್ಯವಸಾಯ

ಮಣಿ, ಬೀಜ, ಹೂವು, ಎಲೆ, ಶಂಖ ಪೋಣಿಸುವುದು; ಚಿತ್ರ ಅಥವಾ ಮನೆ ಕಟ್ಟುವ ತುಂಡುಗಳಿಂದ ಜೋಡಿಸಿ ಮನೆ, ಗೋಪುರ ಇತ್ಯಾದಿ ರಚನಾತ್ಮಕ ಕೆಲಸ: ಚಿತ್ರಗಳನ್ನು ನೋಡುವುದು : ಬಟ್ಟೆಯನ್ನು ಮಡಿಕೆ ಹಾಕುವುದು ; ಒಂದು ಡಬ್ಬಿಯಲ್ಲಿ ಇನ್ನೊಂದು, ಮತ್ತದರಲ್ಲಿ ಅದಕ್ಕಿಂತ ಚಿಕ್ಕದು ಹೀಗೆ ಡಬ್ಬಿಗಳನ್ನು ಒಂದರಲ್ಲೊಂದು ಹಾಕುವುದು ; ದೊಡ್ಡ ಡಬ್ಬಿಯ ಮೇಲೆ ಚಿಕ್ಕದರಂತೆ ಒಂದರ ಮೇಲೆ ಒಂದು ಡಬ್ಬಿಗಳನ್ನಿಡುವುದು : ಕರಿ ಹಲಗೆ ಮತ್ತು ಸೀಮೆ ಸುಣ್ಣಗಳ ಉಪಯೋಗ ಮುಂತಾದ ಕೆಲಸಗಳನ್ನು ಮಕ್ಕಳಿಗೆ ಕೊಡಬಹುದು.

ಜ್ಞಾನಗಳಿಸುವ ಕೆಲಸ ಮಕ್ಕಳಲ್ಲಿ 3–5 ವರ್ಷದವರೆಗೆ ರಭಸದಿಂದ ಸಾಗಿರುತ್ತದೆ. ಜ್ಞಾನೇಂದ್ರಿಯಗಳು ಈ ವಯಸ್ಸಿನಲ್ಲಿ ಬಹಳ ಉತ್ತೇಜಿತವಾಗಿರುತ್ತವೆ. ಮೇಡಂ ಮಾಂಟೆಸ್ಸರಿಯವರು ಪ್ರತಿಯೊಂದು ಜ್ಞಾನೇಂದ್ರಿಯ ವಿಕಾಸಕ್ಕೆ ನಿರ್ದಿಷ್ಟವಾದ ಸಾಧನಗಳನ್ನು ತಿಳಿಸಿದ್ದಾರೆ. ಪ್ರತ್ಯೇಕವಾಗಿ ಒಂದೊಂದು ಜ್ಞಾನೇಂದ್ರಿಯಕ್ಕೂ ಶಿಕ್ಷಣ ದೊರೆತು, ಅವುಗಳ ಕಾರ್ಯ ಸುಲಭವಾದ ಮೇಲೆ ಬೇರೆ ಬೇರೆ ಜ್ಞಾನೇಂದ್ರಿಯಗಳ ಸಂಯೋಜನೆ ಸುಲಭವಾಗಿ ಅನುಭವ ಸಮೃದ್ಧವಾಗಬಲ್ಲದೆಂಬುದು ಅವರ ಮತ. ಮಗು ಪ್ರಯೋಗ, ಪರೀಕ್ಷೆ, ನಿರೀಕ್ಷೆಯಿಂದ ತನ್ನ ತಪ್ಪುಗಳನ್ನು ತಾನೇ ತಿದ್ದಿಕೊಂಡು ಸುಧಾರಿಸುತ್ತದೆ. ಅದಕ್ಕೆ ಸ್ಪರ್ಶ, ದರ್ಶನ, ವಾಸನೆ, ರುಚಿ ಹಾಗೂ ಧ್ವನಿ ಮುಂತಾದವುಗಳನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ವಯಸ್ಸಿನಲ್ಲಿ ಸ್ಪಷ್ಟ ಹಾಗೂ ಸೂಕ್ಷ್ಮ ಸಂವೇದನೆಗಳನ್ನು ಗ್ರಹಿಸುವ ಶಕ್ತಿ ಮಕ್ಕಳಿಗೆ ಬಂದರೆ ಮುಂದಿನ ಅವರ ಜೀವನ ಶಿಕ್ಷಣಕ್ಕೆ ಅನುಕೂಲವಾಗಬಲ್ಲದು. ಮಕ್ಕಳು ಇಂಥ ಚಟುವಟಿಕೆಗಳಲ್ಲಿ ಮೇಲಿಂದ ಮೇಲೆ ತೊಡಗುವುದರಿಂದ ಇಂದ್ರಿಯ ನಿಗ್ರಹವನ್ನು ಸಾಧಿಸಬಲ್ಲರು. ಹಾಗೆಯೇ ಸ್ಮರಣ ಶಕ್ತಿಯನ್ನು ಬೆಳೆಸಿಕೊಳ್ಳಬಲ್ಲರು.

ಮಾಂಟೆಸ್ಸರಿ ಪದ್ಧತಿಯಂತೆ ಶಾಸ್ತ್ರೀಯವಾಗಿ ತಯಾರಿಸಿದ ಸಾಧನಗಳನ್ನೊದಗಿಸಿ ಮಕ್ಕಳಿಗೆ ಶಿಕ್ಷಣ ನೀಡುವುದು ಅನೇಕ ಶಿಶುವಿಹಾರಗಳಲ್ಲಿ ಆರ್ಥಿಕವಾಗಿ ಸಾಧ್ಯವಾಗದಿರಬಹುದು. ಶಿಕ್ಷಕಿ ಸುಲಭದಲ್ಲಿ ಇಂಥ ಕೆಲವು ವಸ್ತುಗಳನ್ನಾದರೂ ಮಕ್ಕಳಿಗೆ ಕೊಟ್ಟು, ಅವರ ರುಚಿ, ಸ್ಪರ್ಶ, ವಾಸನೆ, ಶ್ರವಣ ಶಕ್ತಿ ಹಾಗೂ ಅನುಭವಗಳನ್ನು ಹೆಚ್ಚಿಸಬೇಕು. ಮಕ್ಕಳಿಗೆ ನೈಸರ್ಗಿಕ ರೀತಿಯಲ್ಲಿ ಎಂದರೆ ಹಳ್ಳಿಯಲ್ಲಿ ಸಿಗತಕ್ಕ ಅನೇಕ ಹುಳಿ, ಉಪ್ಪು, ಸಿಹಿ ವಸ್ತುಗಳಿಂದಲೇ ರುಚಿಯ ಅನುಭವ ಮಾಡಿ ತೋರಿಸಬಹುದು. ಶಬ್ದ ಮಾಡುವ ಗೆಜ್ಜೆ, ಘಂಟೆ, ಝುಳು ಝುಳು ಹರಿಯುವ ನೀರು, ಪಕ್ಷಿಗಳ ಇಂಚರ ಇವುಗಳ ಧ್ವನಿಯ ವ್ಯತ್ಯಾಸಗಳನ್ನು ಗಮನಕ್ಕೆ ತರಬಹುದು. ಸ್ಪರ್ಶದಲ್ಲಿಯೂ ಕೂಡ ನುಣುಪಾದ ಬೆಣಚು ಕಲ್ಲು, ಸಣ್ಣ ಉಸುಕು, ದಪ್ಪನೆಯ ಉಸುಕು, ಬಿರುಸು ಕಲ್ಲು, ಮಟ್ಟಿಕಲ್ಲು ಇಂಥವುಗಳಿಂದಲೂ ತಣ್ಣನೆ, ಬೆಚ್ಚನೆ ವಸ್ತುಗಳಿಂದಲೂ ಸ್ಪರ್ಶಜ್ಞಾನ ಹೆಚ್ಚಿಸಬಹುದು. ಒಂದು ಗಿಡದ ಚಿಕ್ಕ ದೊಡ್ಡ ಎಲೆಗಳು, ಹೂವುಗಳು ಮತ್ತು ದೇಟುಗಳಿಂದ ಗಾತ್ರ, ಆಕಾರ, ಬಣ್ಣಗಳ ವ್ಯತ್ಯಾಸ, ವಾಸನೆಗಳನ್ನು ಕಂಡುಹಿಡಿಯುವುದಲ್ಲದೆ ಅವುಗಳನ್ನು ವರ್ಣಿಸಲು ಇರುವ ಶಬ್ದಗಳನ್ನು ಸಹ ರೂಢಿ ಮಾಡಿಸಬಹುದು. ಹಾಗೆಯೇ ಧ್ವನಿಪೆಟ್ಟಿಗೆ ಮತ್ತು ವಾಸನಾತ್ಮಕ ವಸ್ತುಗಳನ್ನು ಕಡಮೆ ಬೆಲೆಯಲ್ಲಿ ದೊರಕಿಸಿ ಮಕ್ಕಳಿಗೆ ಬೇರೆ ಬೇರೆ ಧ್ವನಿ ಹಾಗೂ ಗಂಧಗಳ ಪರಿಚಯ ಮಾಡಿಕೊಡಬಹುದು. ಹಳ್ಳಿಗಳಲ್ಲಿ ಮಕ್ಕಳು ಚಿಕ್ಕವರಿರುವಾಗಿನಿಂದಲೇ ನಿಸರ್ಗದ ಮಡಿಲಲ್ಲಿ ಬೆಳೆಯುವುದರಿಂದ ಕೃತ್ರಿಮ ಪದ್ಧತಿಗಳಿಗಿಂತಲೂ ನೈಸರ್ಗಿಕ ಪದ್ಧತಿಯಿಂದಲೇ ಶಿಕ್ಷಣ ಕೊಡುವುದು ಲೇಸು.

ಗಾಂಧೀಜಿಯವರು ಹೇಳಿದ ಕೆಲವು ವಿಷಯಗಳನ್ನು ಹಳ್ಳಿಯಲ್ಲಿ ಕೆಲಸ ಮಾಡುವ ಶಿಕ್ಷಕಿ ಗಮನಿಸಬೇಕು ; ಮಕ್ಕಳ ಶಿಕ್ಷಣಕ್ಕಾಗಿ ಉಪಯೋಗಿಸಬೇಕಾದ ಸಾಧನಗಳು ಸ್ವತಃ ಶಿಕ್ಷಕಿಯೇ ತಯಾರಿಸಿದವುಗಳಾಗಿರಬೇಕು. ಸ್ಥಳೀಯವಾಗಿ ಸಿಗತಕ್ಕ ವಸ್ತುಗಳಿಂದ ಮಾಡಿದುವಾಗಿದ್ದು ತಯಾರಿಸಲು ಸ್ಥಳೀಯ ಬಡಗಿ, ಕುಂಬಾರರ ಸಹಾಯ ಪಡೆದು ಮಾಡಿದವುಗಳಾಗಿರಬೇಕು.

ಹೀಗೆ ಮಕ್ಕಳು ಆಡುತ್ತಿರುವಾಗ ಅವರ ಜ್ಞಾನೇಂದ್ರಿಯ ಶಿಕ್ಷಣವೂ ಪರ್ಯಾಯವಾಗಿ ಆಗುತ್ತದೆ. ಮೇಡಂ ಮಾಂಟೆಸ್ಸರಿಯವರು ಜ್ಞಾನೇಂದ್ರಿಯ ಶಿಕ್ಷಣದ ಸಾಧನಗಳಂತೆ ಇವು ಶಾಸ್ತ್ರೀಯ ಸಾಧನಗಳಲ್ಲದಿದ್ದರೂ ನೈಸರ್ಗಿಕ ವಾತಾವರಣದಲ್ಲಿ ಮಕ್ಕಳು ಗಳಿಸುವ ಜ್ಞಾನವು ಈ ಚಟುವಟಿಕೆಗಳ ಮೂಲಕವೂ ಸಾಧ್ಯವೆಂದಿದ್ದಾರೆ. ಅನೇಕ ಹಳ್ಳಿಗಳಲ್ಲಿ ಶಾಸ್ತ್ರೀಯ ಪದ್ಧತಿಗನುಸರಿಸಿದ ಸಾಧನಗಳನ್ನು ಕೊಂಡುಕೊಳ್ಳುವುದು ಕಠಿಣವಾಗಿರುವುದರಿಂದ ಜ್ಞಾನೇಂದ್ರಿಯ ಶಿಕ್ಷಣಕ್ಕೆ ಹಲವಾರು ಸಾಧನಗಳು ಸುಲಭದಲ್ಲಿ ಸಿಕ್ಕುವಂತೆ ನೋಡಿಕೊಳ್ಳುವುದು ಅವಶ್ಯ. ಶಿಕ್ಷಕಿ ಈ ಸಾಧನಗಳನ್ನು ಚೆನ್ನಾಗಿ ತಿಳಿದಿದ್ದರೆ ತಾನೇ ಈ ಕೆಲಸವನ್ನು ಸ್ಥಳೀಯವಾಗಿ ಸಿಗತಕ್ಕ ವಸ್ತುಗಳಿಂದ ಸ್ಥಳೀಯ ಕುಂಬಾರ, ಬಡಗಿ, ಕಮ್ಮಾರ ಮುಂತಾದವರ ಸಹಾಯದಿಂದ ಮಾಡಿಸಿಕೊಳ್ಳಬಹುದು.

ಅಧ್ಯಾಯ 7

ಕೈಕೆಲಸ

ಸ್ನಾಯುಗಳ ಚಲನವಲನದ ಮಹತ್ವ : ಮೆದುಳಿನ ವಿಕಾಸಕ್ಕೂ ಮತ್ತು ಕೈಯ್ಯ ಕಾರ್ಯಶಕ್ತಿಗೂ ಪ್ರತ್ಯಕ್ಷ ಸಂಬಂಧವಿದೆ. ಕೈಯಿಂದ ವಿವಿಧ ಕೆಲಸಗಳನ್ನು ಮಾಡುವುದರಿಂದ ಸ್ನಾಯುಗಳ ಬೆಳವಣಿಗೆಯಾಗುವುದಲ್ಲದೆ ಬುದ್ಧಿವಿಕಾಸಕ್ಕೂ ಸಹಾಯ ವಾಗುತ್ತದೆ. ಮೊದಮೊದಲು ಕ್ರಿಯೆಯನ್ನು ತಿಳಿದು ಮಾಡುತ್ತ ಅದು ರೂಢಿಯಾದ ಮೇಲೆ, ಮೆದುಳಿನ ನಿಯಂತ್ರಣವಿಲ್ಲದೆ ಸ್ನಾಯುಗಳು ಕೆಲಸ ಮಾಡುವುದನ್ನು ಕಲಿತು ಕೊಳ್ಳುತ್ತವೆ. ಹೀಗೆ ಸ್ನಾಯುಗಳು ಕೆಲಸ ಮಾಡುವುದರಲ್ಲಿ ಸ್ವಯಂಪೂರ್ಣವಾದರೆ ಕಾರ್ಯಕೌಶಲ್ಯ ಬೆಳೆಯುತ್ತದೆ. ಹೀಗೆ ಮೊದಲು ಮಗುವಿನ ಸ್ನಾಯುಗಳು ಕೆಲಸ ಮಾಡಲು ಆರಂಭಿಸುತ್ತವೆ. ಅವುಗಳ ಕಾರ್ಯಚಟುವಟಿಕೆ ರೂಢಿಯಾದಂತೆ ಸೂಕ್ಷ್ಮ ಸ್ನಾಯುಗಳು ಕಾರ್ಯ ಚಟುವಟಿಕೆಯಿಂದ ವಿಕಾಸಹೊಂದುತ್ತವೆ. ಮೆದುಳು, ಬೇರೆ ಬೇರೆ ಚಟುವಟಿಕೆಗಳ ಕಾರ್ಯ ಸಂಯೋಜನೆಯಿಂದ ಕೌಶಲ್ಯ ಹೆಚ್ಚಿಸಲು ಸಹಾಯ ಮಾಡುತ್ತದೆ. ಕೈಗಳಲ್ಲಿಯ ಸ್ನಾಯು ಕ್ರಿಯೆಯು ಸ್ವೇಚ್ಛೆಯಿಂದ ನಡೆದಾಗ ಕೌಶಲ್ಯ ಬೆಳೆಯುತ್ತದೆ.

ಮನುಷ್ಯನ ಸಹಜ ಪ್ರವೃತ್ತಿಗಳಲ್ಲಿ ರಚನಾತ್ಮಕ ಮತ್ತು ಅಹಂಪ್ರವೃತ್ತಿಗಳು ಮಹತ್ವವಾದವುಗಳು. ಈ ಎರಡೂ ಸಹಜ ಪ್ರವೃತ್ತಿಗಳ ತೃಪ್ತಿ ಕೈಕೆಲಸದಿಂದ ಸಾಧ್ಯ. ಮಕ್ಕಳು ಕೈಯಲ್ಲಿ ಸೀಮೆಸುಣ್ಣ (ಖಡು), ಪೆನ್ಸಿಲ್ ಅಥವಾ ಸಣ್ಣಕಡ್ಡಿ ಸಿಕ್ಕಿದರೂ ಅದರಿಂದ ಗೀಚಲು ಶುರುಮಾಡುತ್ತಾರೆ ; ಮಣ್ಣಲ್ಲಿ ಮನೆ ಕಟ್ಟುತ್ತಾರೆ, ಹೀಗೆ ಏನಾದರೂ ರಚಿಸುವುದರಲ್ಲಿ ಹಾಗೂ ಅದನ್ನು ಬೇರೆಯವರಿಗೆ ತೋರಿಸುವಲ್ಲಿ ಮಕ್ಕಳಿಗೆ ಆನಂದ ; ಇದರಿಂದ ಮನಃಸ್ವಾಸ್ಥ್ಯವುಂಟಾಗುತ್ತದೆ. ಅಲ್ಲದೆ ತಾವೂ ಕೆಲಸ ಸಾಧಿಸಬಲ್ಲೆವೆಂಬ ಆತ್ಮವಿಶ್ವಾಸವೂ ಬೆಳೆದುಬರುತ್ತದೆ. ಆದರೆ ಮಗುವಿನ ಈ ಸಹಜ ಪ್ರವೃತ್ತಿಗಳ ವಿಕಾಸ ಹಾಗೂ ಉಪಯೋಗಗಳಿಗೆ ಸರಿಯಾದ ಮಾರ್ಗ ಸಿಗದೆಹೋದರೆ ಮನಸ್ಸಿನ ಬೆಳವಣಿಗೆ ಕುಂಠಿತವಾಗಿ ಅದು ಸಮಸ್ಯೆಯ ಮಗುವಾಗಿ ಪರಿಣಮಿಸುತ್ತದೆ.

ಮಗು ಜಗತ್ತಿನ ಅನೇಕ ವಿಷಯಗಳನ್ನು ಅವಲೋಕನದಿಂದ ಗ್ರಹಿಸಿ ಆನಂದಿ ಸುತ್ತದೆ. ಜಗತ್ತನ್ನು ತಾನು ತಿಳಿದಂತೆ ತನ್ನ ಕಲಾಕೃತಿಯಲ್ಲಿ ನಿರ್ಮಿಸಲು ಯತ್ನಿಸು ತ್ತದೆ. ಇದಕ್ಕೆ ಕೈಕೆಲಸ ಒಂದು ಮಾರ್ಗವಾಗುತ್ತದೆ. ತನ್ನ ಕಲ್ಪನೆಯನ್ನು ನಿಜ ರೂಪಕ್ಕೆ ತರಲು ಸಹಾಯಮಾಡುತ್ತದೆ. ಅಷ್ಟೇ ಅಲ್ಲ ಅದರ ಎಳೆಯ ಹೃದಯದಲ್ಲಿ

ಹುದುಗಿದ ದುಃಖ, ಸಂತೋಷ ಅಥವಾ ಮಾನಸಿಕ ಒತ್ತಡಗಳು ವ್ಯಕ್ತವಾಗಿ ಅದು ಮತ್ತೆ ಸಮಾಧಾನ ಸ್ಥಿತಿಗೆ ಬರಲು ಸಹಾಯ ಮಾಡುತ್ತದೆ. ಮಗು ರಚಿಸುವ ಚಿತ್ರದಲ್ಲಿ ಅದರ ಮನೋವ್ಯಾಪಾರದ ಪ್ರತಿಬಿಂಬವೇ ಕಾಣುತ್ತದೆ. ಸೃಷ್ಟಿ ಸೌಂದರ್ಯ ಅಥವಾ ಬೇರೆಯವರ ಕೃತಿಯ ರಸಾಸ್ವಾದನೆಗೂ ಸಹಾಯವಾಗುತ್ತದೆ.

ಮಕ್ಕಳಿಗೆ ಕೊಡುವ ಕೈಕೆಲಸ ಅವರಿಗೆ ಇಷ್ಟವಾದದ್ದಿರಬೇಕು. ಅದು ಅವರ ಬೆರಳಿನ ಕುಶಲತೆ ಹೆಚ್ಚಿಸುವಂಥದ್ದೂ ಇರಬೇಕು. ಈ ಚಟುವಟಿಕೆಗೆ ಬೇಕಾಗುವ ಸಾಮಗ್ರಿ ಸ್ಥಳೀಯವಾಗಿ ಕಡಮೆ ಬೆಲೆಯಲ್ಲಿ ದೊರಕುವಂಥದ್ದಾಗಿರಬೇಕು. ಮಾಡಿದ ಕೃತಿಗಳು ಮಕ್ಕಳ ಉಪಯೋಗಕ್ಕೆ ಬರುವಂಥದ್ದಿರಬೇಕು. ಹಳ್ಳಿಯಲ್ಲಿ ಸಿಗತಕ್ಕ ಬೆಂಡು, ಮಣ್ಣು, ಜೇಡಿಮಣ್ಣು, ಬೀಜಗಳು, ಶಂಖ, ಕಪ್ಪೆಚಿಪ್ಪು (ಸಿಂಪು), ಗರಿ ಇವುಗಳನ್ನು ಉಪಯೋಗಿಸಿಕೊಂಡು ಕಡಮೆ ಖರ್ಚಿನಲ್ಲಿ ಕೈಕೆಲಸ ಮಾಡಿಸಬೇಕು.

ಮಣ್ಣಿನ ಕೆಲಸ: ಹಳ್ಳಿಗಳಲ್ಲಿ ವಿಪುಲವಾಗಿ ಜೇಡಿ ಮಣ್ಣು ಸಿಗುತ್ತದೆ. ಮಕ್ಕಳಿಗೂ ಮಣ್ಣಿನ ಕೆಲಸ ಬಹಳ ಇಷ್ಟ. ಈ ಕೆಲಸಕ್ಕಾಗಿ, ಜಿಗಟು ಮಣ್ಣನ್ನು ಸಂಗ್ರಹಿಸಿ ಅದರಲ್ಲಿ ನೀರು ಹಾಕಿ ಅರಲು ತಯಾರಿಸಿ ನೆನೆಯಲು ಬಿಡಬೇಕು. ಮಕ್ಕಳು ಇದನ್ನು ತೆಗೆದುಕೊಂಡು ತಮ್ಮ ಮನಸ್ಸಿಗೆ ಬಂದ ವಸ್ತುಗಳನ್ನು ಮಾಡಲು ಅವಕಾಶಕೊಡಬೇಕು. ಅದಕ್ಕಾಗಿ ನುಣುಪಾದ $6'' \times 9''$ ಅಳತೆಯ ಕಟ್ಟಿಗೆ ಅಥವಾ ಕಲ್ಲಿನ ಹಲಗೆಯನ್ನು ಪ್ರತಿಯೊಂದು ಮಗುವಿಗೂ ಕೊಡಬೇಕು. ಇದು ಸಾಧಿಸದೆ ಹೋದರೆ ನೆಲವನ್ನು ನುಣುಪಾಗಿ ಮಾಡಿ ಸಾರಿಸಿ ಮಕ್ಕಳಿಗೆ ಅದರ ಮೇಲೆ ಕೈಕೆಲಸ ಮಾಡಲು ಹೇಳಬೇಕು. ಮಣ್ಣು, ಮೆತ್ತಗೆ ಜಿಗಟಿದ್ದು ಕಲ್ಲು, ಕಸರು ಇರಬಾರದು. ಮಣ್ಣನ್ನು ಸರಿಯಾಗಿ ಕುಟ್ಟಿ ಬಟ್ಟೆಯಲ್ಲಿ ಸೋಸಿದರೆ ಮೆತ್ತನೆ ಮಣ್ಣು ಸಿಗುತ್ತದೆ. ಅದಕ್ಕೆ ನೀರು ಹಾಕಿ, ಕಲೆಸಿ, ನೆನೆಸಿಟ್ಟರೆ ಮಣ್ಣಿನ ಕೆಲಸಕ್ಕೆ ಒಳ್ಳೆಯ ಮಣ್ಣು ತಯಾರಾಗುತ್ತದೆ. ಇಂಥ ಅರಲಿನ ಗುಂಪಿ ಮತ್ತು ಮಕ್ಕಳಿಗೆ ಬೇಕಾಗುವ ಫಳಿ (ತುಂಡುಹಲಗೆ) ಯನ್ನು ಒಂದೆಡೆ ಇಡಬೇಕು. ಮಕ್ಕಳು ತಾವೇ ತಮಗೆ ಬೇಕಾದಷ್ಟು ಮಣ್ಣು ಮತ್ತು ಫಳಿ ತೆಗೆದುಕೊಳ್ಳುವಂತಿರಬೇಕು. 'ನೀನು ಇದನ್ನೇ ಮಾಡು' ಎಂದು ಶಿಕ್ಷಕಿ ಎಂದೂ ಮಗುವಿಗೆ ಒತ್ತಾಯಿಸಬಾರದು. ಆದರೆ, ಅವರು ತಮ್ಮ ಕೆಲಸ ಮುಗಿಸಿದ ಮೇಲೆ ಉಳಿದ ಮಣ್ಣು ಮತ್ತು ಫಳಿಯನ್ನು ಅದರದರ ಸ್ಥಳದಲ್ಲಿ ಇಟ್ಟು ಕೈ ಸ್ವಚ್ಛವಾಗಿ ತೊಳೆದುಕೊಳ್ಳುವಂತೆ ಶಿಕ್ಷಕಿ ಆಗ್ರಹಪೂರ್ವಕವಾಗಿ ನೋಡಿಕೊಳ್ಳಬೇಕು.

ಮಕ್ಕಳಿಗೆ ಪ್ರತ್ಯಕ್ಷವಾಗಿ ಇಂಥದನ್ನು ಮಾಡು ಎಂದು ಹೇಳದೇ ಹೋದರೂ ತರಗತಿಯಲ್ಲಿ ಮಾಡಿಕೊಟ್ಟ ಹಣ್ಣು, ತರಕಾರಿ, ಸೊಪ್ಪು ಪಶು, ಪಕ್ಷಿಗಳ ಪರಿಚಯದಿಂದಾಗಿ ರಚನಾತ್ಮಕ ಕ್ರಿಯೆಗಳಿಗೆ ತಕ್ಕ ವಾತಾವರಣ ನಿರ್ಮಿಸಬೇಕು. ಶಿಶುವಿಹಾರದಲ್ಲಿ ಹಣ್ಣು, ತರಕಾರಿ, ವಿವಿಧ ನಮೂನೆ ಪ್ರಾಣಿಗಳ ಗೊಂಬೆ, ಚಿತ್ರ ಇತ್ಯಾದಿಗಳು ಯಾವಾಗಲೂ

ಮಕ್ಕಳ ದೃಷ್ಟಿಗೆ ಬೀಳುವಂತೆ ಇಟ್ಟಿರಬೇಕು. ಕೈಕೆಲಸದ ವೇಳೆಗೆ ಅಂಥ 4-6 ನಮೂನೆಗಳನ್ನು ಅವರ ಮಧ್ಯದಲ್ಲಿ ಇಡಬಹುದು. ಆದರೆ ಅವನ್ನೇ ಮಾಡಬೇಕೆಂಬ ಒತ್ತಾಯ ವಿರಕೂಡದು.

ಮಕ್ಕಳು ಕೈಕೆಲಸದಲ್ಲಿ ಸಾಧಿಸುತ್ತಿರುವ ಪ್ರಗತಿಯನ್ನು ಶಿಕ್ಷಕಿ ಗಮನಿಸಬೇಕು. ಕೆಲವು ಮಕ್ಕಳು ಅನೇಕ ದಿನಗಳವರೆಗೆ ಮಣ್ಣಿನ ಗೋಲಿಗಳನ್ನೇ ಮಾಡುತ್ತಾ ಕುಳಿತುಕೊಳ್ಳುತ್ತಾರೆ. ಹೀಗೆ ಪ್ರಗತಿ ಸಾಧಿಸದ ಮಕ್ಕಳಿಗೆ ಶಿಕ್ಷಕಿ ಸಹಾಯಮಾಡಬೇಕು. ಮೊದಲು ಮಣ್ಣಿನ ಗೋಲಿಗಳನ್ನು ಮಾಡಿದರೆ, ಮುಂದೆ ಅದರಲ್ಲಿ ಒಂದು ಸಣ್ಣ ತಗ್ಗು ಮಾಡಿದರೆ ಅದೇ ಪಾತ್ರೆಯಾಗುತ್ತದೆ ; ಉದ್ದವಾದ ಗೋಲಾಕಾರವು ಹಾವು, ಶ್ಯಾವಿಗೆ, ಕೋಡುಬಳೆ, ಚಕ್ಕುಲಿಯಾಗುತ್ತದೆ : ಚಪ್ಪಟೆಯಾದ ದುಂಡಾದ ವಸ್ತುವು ರೊಟ್ಟಿ, ಹೋಳಿಗೆ ಇಲ್ಲವೇ ಮಣೆಯಾಗುತ್ತದೆ. ಇದಲ್ಲದೆ ಅದರಲ್ಲಿ ಬಕೆಟ್. ಒಲೆ—ಹೀಗೆ ಮಗುವಿಗೆ ಪರಿಚಯವಿದ್ದ ವಸ್ತುವನ್ನು ಮಾಡಿ ಪ್ರಗತಿಸಾಧಿಸುವಂತೆ ಶಿಕ್ಷಕಿ ಸಹಾಯ ಮಾಡಬೇಕು.

ಮಕ್ಕಳ ಜೊತೆಯಲ್ಲಿ ಶಿಕ್ಷಕಿಯೂ ಮಣ್ಣಿನ ಕೆಲಸ ಮಾಡಬೇಕು. ಇದರಿಂದ ಮಕ್ಕಳೂ ಸಹ ಶಿಕ್ಷಕಿಯು ಮಾಡಿದ ಸ್ವಚ್ಛ ನೀಟಾದ ಆಕೃತಿ ನೋಡಿ ಅದರಂತೆ ಮಾಡಲು ಯತ್ನಿಸುತ್ತಾರೆ. ಮಕ್ಕಳು ಯಾವ ವಸ್ತು ತಯಾರಿಸುತ್ತಿದ್ದಾರೆಂದು ಶಿಕ್ಷಕಿ ಆಗಾಗ ವಿಚಾರಿಸಿಕೊಳ್ಳಬೇಕು. ದಪ್ಪವಾದ ಚೌಕಾಕಾರಮಾಡಿ ಅದನ್ನೇ ಮಕ್ಕಳು ಚಕ್ಕಡಿ ಎಂದು ಹೇಳಬಹುದು. ಅಂತೂ ಶಿಕ್ಷಕಿ ಅವರ ಪ್ರಗತಿಯನ್ನು ನಿರೀಕ್ಷಿಸುತ್ತಿರಬೇಕು. ಅಂತೆಯೇ ಮಕ್ಕಳು ಮಾಡಿದ ಮಣ್ಣಿನ ಕೃತಿಗಳನ್ನು ಅವರ ಎದುರಿನಲ್ಲಿಯೇ ಒಡೆದು ನಾಶಮಾಡಬಾರದು. ಅವುಗಳಲ್ಲಿ ಒಳ್ಳೆಯವನ್ನು ಆಯ್ದು ಒಣಗಿಸಿ ಉಳಿದವುಗಳನ್ನು ಮತ್ತೆ ಮಣ್ಣಲ್ಲಿ ನೆನೆಹಾಕಿ ಮುಂದೆ ಉಪಯೋಗಿಸಬಹುದು. ಒಳ್ಳೆಯ ಕೃತಿಗಳಿಗೆ ಬಣ್ಣ ಕೊಡಬಹುದು, ಅವನ್ನು ಸುಟ್ಟು ತೆಗೆದಿಡಬಹುದು. ಒಟ್ಟಿನಲ್ಲಿ ಮಕ್ಕಳ ಕೈ ಕೆಲಸ ಮೊದಲಿನಿಂದ ಕೊನೆಯವರೆಗೆ ವ್ಯವಸ್ಥಿತವಾಗಿ ನಡೆಯುವಂತೆ ಲಕ್ಷ್ಯವಹಿಸಬೇಕು.

ಹೊಲಿಗೆ ಕೆಲಸ: ಮಕ್ಕಳ ಸೂಕ್ಷ್ಮ ಸ್ನಾಯುಗಳ ಬೆಳವಣಿಗೆ ಹಾಗೂ ತತ್ಸಂಬಂಧ ಉದ್ದೇಶಗಳಿಗಾಗಿ ಅವರಿಗೆ ಹೊಲಿಗೆ ಕೆಲಸವನ್ನು ಸಹ ಕಲಿಸಿಕೊಡಬಹುದು. 9" × 9" ಅಳತೆಯ ಜಾಕಾಯಿ (ಪ್ಲೈವುಡ್) ಹಲಗೆ, ರಟ್ಟು ಇಲ್ಲವೇ ತಗಡು ತೆಗೆದುಕೊಂಡು ಅದರ ಮೇಲೆ ತ್ರಿಕೋನ, ವರ್ತುಲ, ಚೌಕೋನ ಇತ್ಯಾದಿ ಆಕಾರಗಳನ್ನು ರಚಿಸಬೇಕು, ಅದರ ಮೇಲೆ ಈ ಆಕೃತಿಯ ಗೆರೆಯು ಮೇಲೇ ಮುಕ್ಕಾಲು ಅಂಗುಲ ಅಂತರದಂತೆ ರಂಧ್ರಗಳನ್ನು ಕೊರೆಯಬೇಕು. ಬೂಟಿನ ಲೇಸು ಅಥವಾ ಉಡಿದಾರದಿಂದ ಇದರಲ್ಲಿ ಮೇಲಿಂದ ಕೆಳಗೆ, ಕೆಳಗಿನಿಂದ ಮೇಲೆ ದಾರ ಹಾಯಿಸುವಂತೆ ಮಕ್ಕಳಿಗೆ ತೋರಿಸಬೇಕು. ಈ ದಾರದ ತುದಿ ತಗಡಿನ ತುಂಡಿನದಿದ್ದು ಬೂಟಿನ ಲೇಸಿನಂತೆ ಗಟ್ಟಿ

ಯಾದದಿದ್ದರೆ ಒಳ್ಳೆಯದು ಇಲ್ಲವೇ ಪ್ಲಾಸ್ಟಿಕ್ ವೈರ್ ಕೂಡ ಈ ಕೆಲಸಕ್ಕೆ ಉಪಯೋಗಿಸಬಹುದು. ದಾರವನ್ನು ರಂಧ್ರದ ಮೇಲೆ, ಕೆಳಗೆ ಹಾಯಿಸುವುದು ಮಕ್ಕಳಿಗೆ ಮೋಜೆನಿಸಿ ಸಂತೋಷದಿಂದ ಈ ಕೆಲಸಮಾಡುತ್ತಾರೆ. ಅದೇ ಆಕೃತಿಯ ಮೇಲೆ ಎಳೆ ಹಾಕುವುದು, ಬಿಟ್ಟು ಹಾಕುವುದು, ದುಂಡು ಹೊಲಿಗೆ ಹಾಕುವುದನ್ನೂ ತಿಳಿಸಿಕೊಡಬಹುದು.

ಈ ಕೆಲಸ ಮಕ್ಕಳಿಗೆ ಮಾಡುವುದು ರೂಢಿಯಾದಂತೆ ಹೊಲಿಗೆ ಕಾರ್ಡುಗಳನ್ನು ಕೊಡಬೇಕು. ಇದಕ್ಕಾಗಿ ರಟ್ಟು ಅಥವಾ ಉಪಯೋಗಿಸಿದ ಪೋಸ್ಟ್‌ಕಾರ್ಡುಗಳನ್ನೂ ಸಹ ಉಪಯೋಗಿಸಬಹುದು. ದಪ್ಪನಾದ ಗೆರೆಗಳಿಂದ ಈ ಕಾರ್ಡಿನ ಮೇಲೆ ಹೆಚ್ಚು ಅಂಕುಡೊಂಕುಗಳಿಲ್ಲದೆ, ಸೂಕ್ಷ್ಮ ವಿವರಗಳಿಲ್ಲದ ಸರಳ ಆಕೃತಿಯಲ್ಲಿ ಬದನೆ, ಕುಂಬಳ, ಹಣ್ಣು, ಕನ್ನಡಿ, ಶಟ್ಟಿ, ಬಟ್ಟಲು ಹೀಗೆ ಆಕೃತಿ ಬರೆದು ಅದಕ್ಕೂ ಮೊದಲಿನಂತೆಯೇ ಕಾಲು ಅಂಗುಲ ಅಂತರದ ಮೇಲೆ ರಂಧ್ರ ಕೊರೆದು ಬಣ್ಣದ ದಾರದಿಂದ ಹೊಲಿಯಲು ಹೇಳಬೇಕು. ಸೂಜಿದಾರದಿಂದಲೂ ಮಕ್ಕಳು ಈ ರಂಧ್ರದೊಳಗಿನಿಂದ ಹೊಲಿಯಬಹುದು. ಈ ರೀತಿ ಅವರು ಹೊಲಿದ ಕಾರ್ಡಿನ ಮೇಲೆ ಅವರ ಹೆಸರು, ವಯಸ್ಸು, ಹೊಲಿದ ತಾರೀಖು ಬರೆದಿಡಬೇಕು.

ಗೋಣಿಚೀಲದ ಮೇಲೆ ಬಣ್ಣದ ದಪ್ಪ ದಾರ ಅಥವಾ ಸುರುಳಿಯಿಂದ ಹೊಲಿಯುವುದನ್ನು ಮಕ್ಕಳಿಗೆ ಹೇಳಿಕೊಡಬಹುದು. ಮೊದಮೊದಲು ಚಿಕ್ಕ ಚಿಕ್ಕ ಚೌಕೋನ ; ಆಮೇಲೆ ಮನೆ ಎಣಿಸಿ ಅಡ್ಡ, ಉದ್ದ, ತಿರುವುಮುರುವು, ಮೇಲೆ, ಕೆಳಗೆ, ಹೀಗೆ ಬೇರೆ ಪ್ರಕಾರವಾಗಿ ಹೊಲಿಯುವುದನ್ನು ತೋರಿಸಬೇಕು. ಈ ಕೆಲಸಕ್ಕೆ ಕೊಡುವ ಗೋಣಿಚೀಲದ ತುಂಡು ಸ್ಪಷ್ಟ ಚೌಕುಳಿಯುಳ್ಳದ್ದಾಗಿರಬೇಕು. ಹಾಗೆಯೇ ಸೂಜಿಯೂ ದಪ್ಪದಿದ್ದು ದಾರವೂ ಸಹ ಬಣ್ಣದ್ದೂ, ದಪ್ಪವಾದದ್ದೂ ಆಗಿರಬೇಕು. ತಯಾರಾದ ತುಂಡುಗಳಿಂದ ಆಸನಚೀಲ ತಯಾರಿಸಬಹುದು.

ಮಡಿಕೆ ಮಾಡುವುದು, ಕತ್ತರಿಸುವುದು : ಕಾಗದದಲ್ಲಿ ಸರಿಯಾದ ಮಡಿಕೆ ಹಾಕಿ ಅವಶ್ಯವಿದ್ದಲ್ಲಿ ಕತ್ತರಿಸಿ ಹಡಗು, ಫೋಟೋ ಚೌಕಟ್ಟು, ಗಿರಿಗಿಟ್ಲೆ, ಮುಸುಕುಡಿಕೆ, ಬೀಸಣಿಗೆ ಮುಂತಾದುವನ್ನು ಮಾಡುವುದೂ ಚಾಪೆ ಹೆಣೆಯುವುದು, ಹೂ, ಪಕ್ಷಿ, ಪ್ರಾಣಿಗಳ, ಗಿಡಮರಗಳ ಆಕಾರಗಳನ್ನು ಕತ್ತರಿಸುವುದನ್ನೂ ಮಕ್ಕಳಿಗೆ ಕಲಿಸಿಕೊಡಬಹುದು. ನೀಟಾಗಿ ಕತ್ತರಿಸಿದವುಗಳನ್ನು ಒಂದು ಪುಸ್ತಕದಲ್ಲಿ ಅಂಟಿಸಿಡಬಹುದು. ಹಳ್ಳಿಗಳಲ್ಲಿ ಬಣ್ಣದ ಕಾಗದ ಸಿಗುವುದು ತೊಂದರೆಯಾದರೆ, ಹಳೆಯ ದಿನಪತ್ರಿಕೆಗಳನ್ನು ಸೋವಿಯ ದರದಲ್ಲಿ ತಂದು ಅದರಿಂದ ಮಡಿಕೆ ಹಾಕುವ ಹಾಗೂ ಕತ್ತರಿಸುವ ಕೆಲಸವನ್ನು ಹೇಳಿಕೊಡಬಹುದು. ಈ ಕೆಲಸಮಾಡುವುದು ಅವರಿಗೆ ಒಂದು ಇಷ್ಟವಾದ ಹವ್ಯಾಸವೇ. ಹೀಗಾಗಿ ಅವರಲ್ಲಿ ಏಕಾಗ್ರತೆ ಬೆಳೆಸಲು ಸೂಕ್ಷ್ಮಸ್ನಾಯುಗಳಿಗೆ ಕೆಲಸಕೊಡುವುದೂ ಇದರಿಂದ ಸಾಧ್ಯವಾಗುತ್ತದೆ.

ಕಾಗದದ ಮೇಲೆ ಕತ್ತರಿಸುವಲ್ಲಿ ಮೊದಲು ಸರಳರೇಖೆ ಗುಂಟ ಕತ್ತರಿಸಲು, ಸರಳ ಆಕೃತಿ, ಅಂದರೆ ಕಾಟಕೋನ, ಚೌಕೋನ, ತ್ರಿಕೋನ ಇವುಗಳ ಗೆರೆಗುಂಟ ಕತ್ತರಿಸಲು ಕಲಿಸಬೇಕು. ಬಳಿಕ ರಟ್ಟು ಅಥವಾ ತಗಡಿನ ಆಕೃತಿಯ ಮೇಲೆ ಕೊರೆಯುವುದು ತಿಳಿಸಬೇಕು. ಕತ್ತರಿಸಿ ಉಳಿದ ಭಾಗಗಳನ್ನು ಪುಸ್ತಕದಲ್ಲಿ ಅಂಟಿಸಿ ಬೇರೆ ಬೇರೆ ಆಕಾರಗಳನ್ನು ಮಾಡಬಹುದು. ಹಬ್ಬ ಸಮಾರಂಭಗಳ ಕಾಲಕ್ಕೆ ಮಕ್ಕಳು ಕತ್ತರಿಸಿದ ಕಾಗದದ ತುಂಡಗಳಿಂದ ತೋರಣ, ಚಿಕ್ಕದೊಡ್ಡ ಹೂಗಳ ತಯಾರಿಕೆಗಳನ್ನು ಮಾಡುವ ಕಾರ್ಯಕ್ರಮವೂ ಪ್ರಶಂಸನೀಯ. ಇಂಥ ಕೆಲಸಗಳಿಗೆ ಎಲೆ, ಅರಳೆ, ಬ್ಯಾಗಡಿ, ಬಣ್ಣದ ಕಾಗದಗಳನ್ನು ಉಪಯೋಗಿಸಬಹುದು.

ಅಂಟಿಸುವುದು : ಕತ್ತರಿಸಿದ ಚಿತ್ರಕೃತಿಗಳನ್ನು ಮಕ್ಕಳು ಪುಸ್ತಕದಲ್ಲಿ ಅಂಟಿಸುವಂತೆ ನೋಡಿಕೊಳ್ಳಬೇಕು. ಕಾರ್ಡಿನ ಮೇಲೆ ಕಾಗದ ಅಂಟಿಸುವುದು, ಪುಸ್ತಕಗಳ ಮೇಲೆ ಹೆಸರಿನ ಚೀಟಿ ಅಂಟಿಸುವುದು, ಕಾಗದದ ಚಿಕ್ಕ ಚಿಕ್ಕ ತುಂಡುಗಳನ್ನು ಒಂದರ ಮೇಲೊಂದು ಅಂಟಿಸಿ, ಬೇರೆ ಬೇರೆ ಆಕೃತಿಗಳನ್ನಲ್ಲದೆ ಬಟ್ಟಲು, ಹೂದಾನಿಗಳನ್ನು ಸಹ ಮಾಡಬಹುದು. ಮಕ್ಕಳಿಗೆ ಬೇಕಾಗಿರುವಷ್ಟೆ ಅಂಟನ್ನು ತೆಗೆದುಕೊಂಡು ಅಂಟಿಸಬೇಕಾದ ಕಾಗದ, ಬಟ್ಟೆ, ಅರಳೆ, ಎಲೆ ಇತ್ಯಾದಿಗಳನ್ನು ನೀಟಾಗಿ ಅಂಟಿಸಿ ಅಂಟು ಹರಡದಂತೆ ಬಟ್ಟೆಯಿಂದ ಒತ್ತುವುದನ್ನು ತೋರಿಸಬೇಕು.

ಚಿತ್ರ ಕೆಲಸ: ಚಿತ್ರ ಬರೆಯುವುದು, ಬಣ್ಣದ ಸೀಮೆಸುಣ್ಣದ ತುಂಡುಗಳು ಸಿಕ್ಕರೆ ಅವುಗಳಿಂದ ಗೆರೆ ಎಳೆಯುವುದು, ಗೀಚುವುದು ಎಂದರೆ ಮಕ್ಕಳಿಗೆ ಇಷ್ಟ. ಮಕ್ಕಳ ಕಲ್ಪನಾಶಿಲ್ಪ ಒಡಮೂಡಿ ವ್ಯಮೆತ್ತಲು ಇದೊಂದು ಸಾಧನ. ಬಣ್ಣಗಳಿಂದ ಚಿತ್ರಬರೆಯುವಾಗ, ಮಕ್ಕಳು ಇದು ಆನೆ, ಗುಬ್ಬಿ, ಮೋಟಾರು ಎಂದು ಹೇಳಿದರೂ ಅದು ಗೆರೆ ಎಳೆದದ್ದೊ, ಗೀಚಿದ್ದೊ ಮಾತ್ರ ಕಂಡುಬರುತ್ತದೆ. ನಾಯಿ ಒಂದು ಕಡೆ; ಅದು ತಿನ್ನುವರೊಟ್ಟೆ ಇನ್ನೊಂದು ಕಡೆ ಇದ್ದರೂ, ನಾಯಿ ರೊಟ್ಟೆ ತಿನ್ನುತ್ತಿದೆಯೆಂದು ಮಗು ಹೇಳುತ್ತದೆ. ಮಕ್ಕಳಿಗೆ ಚಿತ್ರದ ಪ್ರಮಾಣ, ಅಂತರಗಳ ಕಲ್ಪನೆ ಇರುವುದಿಲ್ಲ. ಅದು ಬಾಹ್ಯ ಜಗತ್ತಿನಲ್ಲಿ ನಿರೀಕ್ಷಿಸಿದ್ದು ಮನಸ್ಸಿನಲ್ಲಿ ತುಂಬಿರುತ್ತದೆ. ಅದೆಲ್ಲ ಹೊರ ಹೊಮ್ಮಲು ಈ ಚಿತ್ರದ ಕೆಲಸ ಬಹಳ ಸಹಾಯಕ. ಅದೂ ಅಲ್ಲದೆ ಯಾವುದೋ ಕಾರಣದಿಂದ ಮಕ್ಕಳ ಮನಸ್ಸಿನ ಮೇಲೆ ಉಂಟಾದ ಗಾಢವಾದ ಪರಿಣಾಮಕ್ಕೆ ಸಮಾಧಾನ ಸಿಕ್ಕುವುದೂ ಈ ಚಿತ್ರಕೆಲಸದಿಂದ ಸಾಧ್ಯ. ಮಗು ಯಾರಾದರೂ ತನ್ನನ್ನು ಹೊಡೆದರೆ ಆ ದುಃಖ, ಕೋಪಗಳನ್ನು ತನ್ನ ಗೊಂಬೆಗೆ ಹೊಡೆದು ತೋರಿಸುವಂತೆಯೇ ಚಿತ್ರದಲ್ಲೂ ತನ್ನನ್ನು ಹೊಡೆದವರನ್ನೇ ತಾನು ಹೊಡೆಯುತ್ತಿರುವಂತೆ ಅಥವಾ ಕೋಲು, ಕಲ್ಲು ಇವುಗಳನ್ನು ಬರೆದು ಅದನ್ನು ವ್ಯಕ್ತಪಡಿಸಿ ಸಮಾಧಾನ ಹೊಂದಲು ಯತ್ನಿಸುತ್ತದೆ. ಮಕ್ಕಳ ಆನಂದ, ಮನಸ್ಸಿನ ಉದ್ವೇಗ ಮುಂತಾದವು ಹೊರಹೊಮ್ಮಲು

ಅವಕಾಶ ಸಿಕ್ಕದಿದ್ದರೆ ಅದರ ಪರಿಣಾಮ ವಿಪರೀತವಾಗಿ ಸಮಸ್ಯೆಯ ಮಕ್ಕಳಾಗಿ ಪರಿಣಮಿಸುವರು.

ಈ ಚಿತ್ರ ಕೆಲಸಕ್ಕೆ ಬೇಕಾಗುವ ಸಾಧನಗಳು: ಕರಿಹಲಗೆ ಮತ್ತು ಸೀಮೆಸುಣ್ಣ (ಖಡು). ಮಗುವಿನ ಎತ್ತರಕ್ಕೆ ಸಾಲುವಷ್ಟು ಚಿಕ್ಕ ಚಿಕ್ಕ $1\frac{1}{2} \times 1\frac{1}{2}$ ಅಡಿ ಕರಿಹಲಗೆಗಳು ಬೇಕಾಗುತ್ತವೆ. ಹಲಗೆಗಳನ್ನು 3-4 ಅಡಿ ಎತ್ತರದ ಮೇಲೆ ಸ್ಟ್ಯಾಂಡ್ ಮೇಲಾಗಲೀ, ಗೋಡೆಗಳಮೇಲಾಗಲೀ ಹಾಕಿರಬೇಕು, ಇಲ್ಲವೇ ಮಕ್ಕಳು ನೆಲದ ಮೇಲೆ ಈ ಹಲಗೆಗಳನ್ನಿಟ್ಟು ಬರೆಯಲು ಬರುವಂತಿರಬೇಕು. ಅವುಗಳನ್ನು ಒರೆಸಿ ಸ್ವಚ್ಛ ಮಾಡಲು ಬಟ್ಟೆ ತುಂಡುಗಳು ಇರಬೇಕು. ವಿಶಿಷ್ಟ ರೀತಿಯಲ್ಲಿ ಕಪ್ಪುಹಲಗೆ ಮಾಡಿಸುವುದು ಸಾಧ್ಯವಾಗದೇ ಹೋದರೆ ಚಹಾದ ಡಬ್ಬಿಗಳಲ್ಲಿ ಬರುವ ಜಾಕಾಯಿ ಮರ (ಪ್ಲೈವುಡ್)ದ ತುಂಡುಗಳಿಂದ ಇಂಥ ಹಲಗೆ ಮಾಡಿ ಅದಕ್ಕೆ ಕಪ್ಪು ಬಣ್ಣ ಕೊಟ್ಟು ಕಡಮೆ ಖರ್ಚಿನಲ್ಲಿ ಹಲಗೆಗಳನ್ನು ತಯಾರಿಸಬಹುದು. ಇದಕ್ಕೆ ಬೇಕಾಗುವ ಬಳಪ, ಸೀಮೆಸುಣ್ಣ, ಜೇಡಿ ಮಣ್ಣುಗಳನ್ನು ಉಪಯೋಗಿಸಿ ಚಿತ್ರಕೆಲಸ ಮಾಡಿಸಬಹುದು. ಹೀಗೆ ಹಲಗೆಗಳನ್ನು ತಯಾರಿಸುವುದು ಖರ್ಚಿನದೆನಿಸಿದರೆ ಬಿದಿರಿನ ತಟ್ಟಿಗಳ ಅದೇ ಅಳತೆ ತುಂಡುಗಳನ್ನು ಸಗಣಿಯಿಂದ ಸಾರಿಸಿ ಅದರ ಮೇಲೆ ಬಣ್ಣದ ಕೆಲಸ ಮಾಡಿಸಬಹುದು. ಅದನ್ನೇ ಮತ್ತೆ ಸಗಣಿಯಿಂದ ಸಾರಿಸಿದರೆ ಮತ್ತೆ ಮತ್ತೆ ಉಪಯೋಗಿಸಲು ಅನುವಾಗುತ್ತದೆ. ಹೀಗೆ ಸಾರಿಸಿ ಸ್ವಚ್ಛ ಮಾಡುವುದನ್ನು ಮಕ್ಕಳೂ ಶಿಕ್ಷಕಿಯೂ ಕೂಡಿಯೇ ಮಾಡಬಹುದು.

ನೀರು ಬಣ್ಣಗಳ ಉಪಯೋಗ: ನೀರು ಬಣ್ಣ (Water paint) ಗಳಿಂದ ಚಿತ್ರಕೆಲಸ ಮಾಡುವುದು ಮಕ್ಕಳಿಗೆ ಇನ್ನೂ ಇಷ್ಟ. ಇದಕ್ಕಾಗಿ ಪೇಟೆಯಲ್ಲಿ ಸಿಗತಕ್ಕ ನೀರಿನ ಬಣ್ಣಗಳನ್ನೂ ತೈಲ ಬಣ್ಣಗಳನ್ನೂ ಉಪಯೋಗಿಸುವುದು ಖರ್ಚಿನದೆನಿಸಿದರೆ, ಕೆಂಪು, ಹಳದಿ, ಬೂದಿ ಬಣ್ಣ, ಜೇಡಿಮಣ್ಣು ಹಳ್ಳಿಯಲ್ಲಿ ಸಿಗುತ್ತವೆ. ಅವನ್ನೇ ಉಪಯೋಗಿಸಿ ಬಣ್ಣ ತಯಾರಿಸಬಹುದು. ಗೋಡೆಗೆ ಹಾಕುವ ಬಣ್ಣದ ಪುಡಿ ಬಹಳ ಕಡಮೆ ಬೆಲೆಯಲ್ಲಿ ಸಿಗುತ್ತದೆ. ಇದನ್ನು ಮೈದಾಹಿಟ್ಟಿನ ಗಂಜಿ ಅಥವಾ ಗೋಂದಿನ ನೀರಿಗೆ ಸೇರಿಸಿ ಮಕ್ಕಳಿಗೆ ತಮ್ಮ ಬೆರಳುಗಳಿಂದ ಇಲ್ಲವೇ ಬೆಂಡೆಕಾಯಿ ತುಂಡು ಅಥವಾ ಹಸಿಯುಗಳು ಇಲ್ಲವೇ ದಂಟಿನ ತುಂಡುಗಳನ್ನು ಜಜ್ಜಿ ಬ್ರಶ್‌ನಂತೆ ಮಾಡಿ, ಅವುಗಳ ಮುಖಾಂತರ ಈ ಬಣ್ಣಗಳಲ್ಲಿ ಅದ್ದಿ ಚಿತ್ರ ರಚಿಸಲು ಕಲಿಸಬಹುದು. ಇದಕ್ಕಾಗಿ ಉತ್ತಮಕಾಗದ ಉಪಯೋಗಿಸುವುದು ಹೆಚ್ಚು ಖರ್ಚಿನದಾದರೆ ಹಳೆಯ ದಿನಪತ್ರಿಕೆಯ ಕಾಗದಗಳನ್ನೇ ಉಪಯೋಗಿಸಬಹುದು.

ಮಕ್ಕಳು ಬಣ್ಣವನ್ನು ಕೆಳಗೆ ಬೀಳಿಸದಂತೆ ಇಲ್ಲವೇ ತಮ್ಮ ಬಟ್ಟೆಯ ಮೇಲೆ ಕಲೆ ಮಾಡಿಕೊಳ್ಳದಂತೆ ನೋಡಿಕೊಂಡು ಬಣ್ಣ ಹಾಕಿದ ತಟ್ಟೆ, ಗಡಿಗೆ, ಬಟ್ಟಲುಗಳನ್ನು

ಕೆಲಸ ಮುಗಿದ ಮೇಲೆ ಸ್ವಚ್ಛಮಾಡಿ, ಅವುಗಳ ಸ್ಥಳದಲ್ಲಿ ಇಡುವಂತೆ ಶಿಕ್ಷಕಿ ಅಗ್ರಹ ಪೂರ್ವಕವಾಗಿ ಮಕ್ಕಳಿಂದ ಮಾಡಿಸಬೇಕು.



ಚಿತ್ರ 7: ಬಣ್ಣದ ಅಂದಚೆಂದ

ಮಕ್ಕಳು ಚಿತ್ರ ಬರೆಯುವುದನ್ನು ಶಿಕ್ಷಕಿ ಸೂಚಿಸಬಹುದಾದರೂ ತಮಗೆ ಬೇಕಾಗಿರುವುದನ್ನೇ ಬರೆಯುವ ಸ್ವಾತಂತ್ರ್ಯ ಮಕ್ಕಳಿಗೆ ಇರಬೇಕು. ಚಿತ್ರದ ಕೆಲಸಕ್ಕೆ ಯೋಗ್ಯ ವಾತಾವರಣವೆಂದರೆ ಪಶುಪಕ್ಷಿ, ಗಿಡಮರ, ದರಿಕಂದಕಗಳ ಚಿತ್ರಗಳ ಮಾದರಿಗಳನ್ನು ಮಕ್ಕಳಿಗೆ ಕಾಣುವಂತೆ ಇಟ್ಟಿರುವಿಕೆ. ಮಧ್ಯದಲ್ಲಿ ಚಿತ್ರಕ್ಕಾಗಿ ಬೇಕಾಗುವ ಕಥೆ ವಿಷಯ ಹೇಳುವುದು ಮತ್ತು ಅದರಲ್ಲಿ ಚಿತ್ರದ ವರ್ಣನೆ ಮಾಡುವುದು. ಹಾಗೆಯೇ ಮಕ್ಕಳು ಬರೆದ ಚಿತ್ರಗಳ ಮಾಹಿತಿಯನ್ನು ಶಿಕ್ಷಕಿ ಅವರನ್ನು ಕೇಳಿ ತಿಳಿದುಕೊಳ್ಳಬಹುದು. ಚಿತ್ರದ ಕಾಗದಗಳ ಮೇಲೆ ಆಯಾ ಮಕ್ಕಳ ಹೆಸರು ತಾರೀಖು ಬರೆದಿಡಬೇಕು: ಇದರಿಂದ ಮಕ್ಕಳ ಚಿತ್ರದ ಕೆಲಸದಲ್ಲಿ ಆಗುತ್ತಿರುವ ಬದಲಾವಣೆ, ಪ್ರಗತಿ ತಿಳಿದು ಬರುತ್ತದೆ.

ರಂಗೋಲಿ ಹಾಕುವುದು: ಚಿತ್ರದ ಕೆಲಸದಲ್ಲಿ ರಂಗೋಲಿ ಹಾಕುವುದನ್ನು ಕಲಿಸಬಹುದು. ಎಲೆ, ಹೂವಿನ ಎಸಳು, ಸಣ್ಣ ಸಣ್ಣ ಕಾಗದದ ಚೂರುಗಳು, ಬಣ್ಣ ಬಣ್ಣದ ಮಟ್ಟಿ ಮಣ್ಣು, ಸೀಮೆಸುಣ್ಣದ ತುಂಡುಗಳು, ಬಣ್ಣಗಳನ್ನೂ ಕೂಡ ಈ ರಂಗೋಲಿ ಕೆಲಸಕ್ಕೆ ಉಪಯೋಗಿಸಬಹುದು. ಜೊತೆಗೆ ಹೆಸರು, ಕಡಲೆ, ಚೆನ್ನಂಗಿ,

ಅಕ್ಕಿ ಮುಂತಾದ ಕಾಳುಗಳನ್ನು ಸಹ ಉಪಯೋಗಿಸಿ ರಂಗೋಲಿಯನ್ನು ತುಂಬಬಹುದು. ಹೀಗೆ ಉಪಯೋಗಿಸಿದ ಕಾಳುಗಳು ನಾಶವಾಗದಂತೆ ಅವನ್ನು ಮತ್ತೆ ಬೇರೆಬೇರೆ ಮಾಡಿಸಬೇಕು. ಧಾನ್ಯ ಆರಿಸುವ ತರಬೇತಿಗಾಗಿಯೇ ಧಾನ್ಯಮಿಶ್ರಣ ಮಾಡಿಕೊಡುವುದಕ್ಕಿಂತ ಹೀಗೆ ಮಿಶ್ರಿತವಾದ ಧಾನ್ಯಗಳನ್ನು ಕೊಟ್ಟು ಬೇರ್ಪಡಿಸಲು ಹೇಳಬೇಕು. ರಂಗೋಲಿಯನ್ನು ಹಾಕುವುದಲ್ಲದೆ ಎಲೆ, ಹೂವು ಮತ್ತು ಬೀಜಗಳ ನೈಸರ್ಗಿಕ ಸೌಂದರ್ಯವನ್ನು ಉಪಯೋಗಿಸಿಕೊಂಡು ರಂಗೋಲಿ ಹಾಕುವುದಾಗಲೀ ಅಥವಾ ಬರೆದ ಚಿತ್ರ ತುಂಬುವುದಾಗಲೀ ಮಕ್ಕಳಿಗೆ ತೋರಿಸಿ ಅಲಂಕರಣ ರೀತಿ ತೋರಿಸಬಹುದು. ಇದಲ್ಲದೆ ಮಕ್ಕಳು ತಯಾರಿಸಿದ ಮಣ್ಣಿನ ಸಾಮಾನುಗಳ ಮೇಲೆ ಹಾಗೂ ಗೋಡೆ, ನೆಲ, ಕಾಗದ, ಹಲಗೆಗಳ ಮೇಲೂ ರಂಗೋಲಿ ಚಿತ್ತಾರ ಮಾಡಬಹುದು.

ಕಾಗದದ ಮುದ್ದೆ : ಕಾಗದವನ್ನು ನೀರಿನಲ್ಲಿ ನೆನೆಹಾಕಿ ಅದಕ್ಕೆ ಸ್ವಲ್ಪ ಮೆಂತ್ಯ ಅಥವಾ ಹುಣಸೇ ಬೀಜದ ಹಿಟ್ಟು ಅಥವಾ ಅಂಟು ಹಾಕಿ ಚೆನ್ನಾಗಿ ಕುಟ್ಟಿ ರುಬ್ಬಿ, ಮಣ್ಣಿನ ಮುದ್ದೆಯಂತೆ ಕಾಗದದ ಮುದ್ದೆಯನ್ನು ಕೈಕೆಲಸಕ್ಕಾಗಿ ತಯಾರಿಸಬಹುದು. ಇದರಲ್ಲಿ ಮಣ್ಣಿನಿಂದ ಮಾಡಬಹುದಾದ ಎಲ್ಲ ವಸ್ತುಗಳನ್ನು ತಯಾರಿಸಲು ಬರುತ್ತದೆ. ಅದನ್ನು ಚೆನ್ನಾಗಿ ಒಣಗಿಸಿದ ಮೇಲೆ ಬಣ್ಣ ಹಾಕಿ ಚಿತ್ರ, ರಂಗೋಲಿಗಳನ್ನೂ ಬರೆಯಬಹುದು. ಇದು ಒಣಗಿದ ಮೇಲೆ ಹಗುರಾಗಿಯೂ, ಗಟ್ಟಿಯಾಗಿಯೂ ಇದ್ದು ಬಹುಕಾಲ ಬಾಳುತ್ತದೆ.

ಇತರ ಕೈಕೆಲಸಗಳು : ಮೇಲೆ ಹೇಳಿದ ವಸ್ತುಗಳಿಂದಲ್ಲದೆ ಇತರ ನಿರುಪಯುಕ್ತವೆನಿಸುವ ವಸ್ತುಗಳಿಂದಲೂ, ಕೈಕೆಲಸ ಮಾಡಬಹುದು. ಖಾಲಿಯಾದ ಬೆಂಕಿ ಪೆಟ್ಟಿಗೆ, ಸಿಗರೇಟ್ ಪ್ಯಾಕೆಟ್, ಚಾಕಲೇಟ್ ಹೊಟ್ಟು, ಖಾಲಿ ಸೀಸೆ ಇತ್ಯಾದಿಗಳಿಂದ ಏನಾದರೂ ಉಪಯುಕ್ತ ವಸ್ತುಗಳನ್ನು ತಯಾರಿಸಬಹುದು. ಬೆಂಕಿಪೆಟ್ಟಿಗೆಯಿಂದ ಪುಟ್ಟ ಸೋಫಾ, ಟೇಬಲ್, ಕುರ್ಚಿ, ಮೋಟಾರ್, ರೈಲು ಗಾಡಿ ಇತ್ಯಾದಿಗಳನ್ನು ಮಾಡಬಹುದು. ಸಿಗರೇಟ್ ಪ್ಯಾಕೆಟ್‌ನಿಂದ ಕುದುರೆ, ಫೋಟೋ ಚೌಕಟ್ಟುಗಳನ್ನು ಮಾಡಬಹುದು. ಒಣಭತ್ತ ಅಥವಾ ಗೋಧಿ ಹುಲ್ಲಿನಿಂದ ಇಲ್ಲವೇ ಕಾಗದದ ಸಣ್ಣ ಸಣ್ಣ ಚೂರುಗಳಿಂದ ಗೊಂಬೆ, ಗೊಂಬೆಯ ತಲೆ, ಪಕ್ಷಿಗಳನ್ನು ಮಾಡಿ ಬಣ್ಣಹಾಕಬಹುದು. ಬೇರೆಬೇರೆ ಆಕಾರ ಮತ್ತು ಅಳತೆಗಳ ಬೂಚುಗಳಿಂದ ಗೊಂಬೆಗಳ ಮುಖ, ಹೊಟ್ಟೆಯಂಥ ಭಾಗಗಳನ್ನು ಮಾಡಿ ದಂಟು ಅಥವಾ ಹುಲ್ಲಿನ ಕೈಕಾಲುಗಳನ್ನು ಅದಕ್ಕೆ ಜೋಡಿಸಬಹುದು. ಹಾಗೆಯೇ ದುಪ್ಪಟಿ ಬಟ್ಟೆಯ ಸಣ್ಣಸಣ್ಣ ತುಂಡುಗಳನ್ನು ಸೇರಿಸಿ ಗೊಂಬೆ ಗಿಳಿ ಮುಂತಾದವುಗಳನ್ನು ಮಾಡಬಹುದು. ಶಂಖ, ಕಪ್ಪೆಚಿಪ್ಪುಗಳನ್ನು ಜೋಡಿಸಿ ಪಶುಪಕ್ಷಿಗಳು, ಆಭರಣ ಇತ್ಯಾದಿ ವಸ್ತುಗಳನ್ನು ತಯಾರಿಸಬಹುದು. ರಟ್ಟಿನ ಡಬ್ಬಿಗಳಿಂದಲೂ ಮನೆ, ಚಿತ್ರ ತೋರಿಸುವ ಡಬ್ಬಿ ಇತ್ಯಾದಿಗಳನ್ನು ಮಾಡಬಹುದು.

ಕೈಕೆಲಸದಿಂದ ಕೈಗಳ, ವಿಶೇಷವಾಗಿ ಬೆರಳುಗಳ ಸ್ನಾಯುಗಳು ಬಲಗೊಳ್ಳುತ್ತವೆ. ಜೊತೆಗೆ ಮಕ್ಕಳ ರಚನಾತ್ಮಕ ಶಕ್ತಿ ಹಾಗೂ ಅಹಂಪ್ರವೃತ್ತಿಗಳಿಗೆ ಚಾಲನೆ ಸಿಕ್ಕಿ ತೃಪ್ತಿಯಾಗುತ್ತದೆ ; ಅವರ ಅವಲೋಕನ, ಗ್ರಹಣಶಕ್ತಿಗಳೂ ಬೆಳೆಯುತ್ತವೆ. ಮಾತ್ರವಲ್ಲ ಏಕಾಗ್ರತೆ, ಕಾರ್ಯಕುಶಲತೆ, ಸೌಂದರ್ಯ ಪ್ರಜ್ಞೆಯಂಥ ಗುಣಗಳೂ ವೃದ್ಧಿಯಾಗುತ್ತವೆ.

ಅಧ್ಯಾಯ 8

ಭಾಷಾಭ್ಯಾಸ ಮತ್ತು ಗಣಿತ

ಮಕ್ಕಳು ತಮ್ಮ ವಿಚಾರಗಳನ್ನು ಮತ್ತು ಬೇಡಿಕೆಗಳನ್ನು ವ್ಯಕ್ತಪಡಿಸಲು ಕಾತುರದಿಂದಿರುತ್ತಾರೆ. ಮಗುವಿನ ಧ್ವನಿಪೆಟ್ಟಿಗೆಯ ಬೆಳವಣಿಗೆ ಹಾಗೂ ಅನುಕರಣೆಗಳಿಂದಾಗಿ, ಅದು ಶಬ್ದಗಳನ್ನು ಉಚ್ಚರಿಸಲು ಯತ್ನಿಸುತ್ತದೆ. ಒಮ್ಮೆ ಒಂದು ಶಬ್ದ ತಿಳಿದರೆ ಅದನ್ನೇ ಪದೇ ಪದೇ ಉಚ್ಚರಿಸಿ ರೂಢಿಮಾಡಿಕೊಳ್ಳುತ್ತದೆ. ಸೃಷ್ಟಿಪರಿಚಯ ಮಾಡಿಕೊಳ್ಳುವಾಗ ಅದಕ್ಕೆ ವಿವಿಧಾನುಭವಗಳು ಆಗುತ್ತವೆ. ಬೇರೆ ಬೇರೆ ಜ್ಞಾನೇಂದ್ರಿಯಗಳನ್ನು ಉಪಯೋಗಿಸಿ ಜ್ಞಾನ ಪಡೆಯುತ್ತದೆ. ಅಂತೆಯೇ ತನ್ನಲ್ಲಿಯ ಮೂಲಭೂತ ಸಿಟ್ಟು, ಪ್ರೇಮ, ವಾತ್ಸಲ್ಯ ಮುಂತಾದ ಭಾವನೆಗಳನ್ನು ವ್ಯಕ್ತಪಡಿಸಲು ಮಾಧ್ಯಮ ಹೊಂದಿರಬೇಕು. ಅಂಥವುಗಳಲ್ಲಿ ಭಾಷೆಯೂ ಒಂದು. ಪಶುಪಕ್ಷಿಗಳೂ ಕೂಡ ತಮ್ಮ ಮರಿಗಳು, ಸಂಗಾತಿಗಳ ಬಗ್ಗೆ ಇರುವ ಪ್ರೇಮ, ವಾತ್ಸಲ್ಯಗಳನ್ನು ವ್ಯಕ್ತಪಡಿಸಲು ವಿಶಿಷ್ಟ ಶಬ್ದಮಾಡುತ್ತವೆ. ಮನುಷ್ಯ ತನ್ನ ಬುದ್ಧಿ ವಿಕಾಸ ಹಾಗೂ ಧ್ವನಿಪೆಟ್ಟಿಗೆಯ ವಿಶಿಷ್ಟ ಬೆಳವಣಿಗೆಯಿಂದಾಗಿ ಭಾಷೆಯನ್ನು ಸೃಷ್ಟಿಸಿಕೊಂಡಿದ್ದಾನೆ. ಇದು ಪರಸ್ಪರ ತಿಳಿವಳಿಕೆಗೆ ಒಂದು ಸಾಧನವಾಗಿದೆಯಲ್ಲದೆ ಸಾಮಾಜಿಕ ಜೀವನ ಸುಭದ್ರತೆಯ ಮೂಲ ; ವಿಜ್ಞಾನ ಪ್ರಗತಿಗೂ ಸಹಕಾರಿ.

ಪ್ರತಿಯೊಂದು ಪ್ರಾಣಿಯೂ ಸ್ವಯಂಪ್ರೇರಣೆಯಿಂದಲೇ ಜೀವನದ ಅವಶ್ಯಕತೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಮಗು ತನ್ನ ಸುತ್ತ ಇದ್ದ ದೊಡ್ಡವರ ಸ್ವರ, ಅವರು ಮಾತನಾಡುವಾಗ ಆಗುವ ಧ್ವನಿಯ ಏರಿಳಿತ ಹಾಗೂ ತುಟಿಯ ಚಲನವಲನಗಳನ್ನು ಗಮನವಿಟ್ಟು ನೋಡಿ ತನ್ನ ಧ್ವನಿಯನ್ನು ಅದಕ್ಕೆ ಹೊಂದಿಸಿಕೊಂಡು ಅನುಕರಿಸಲು ಯತ್ನಿಸುತ್ತದೆ ; ಹಾಗೆಯೇ ಬೇರೆ ಬೇರೆ ಶಬ್ದ ಹೊರಡಿಸುವುದನ್ನು ನೋಡುತ್ತೇವೆ. ಎಷ್ಟೋ ಸಲ ಅದು ತನ್ನಷ್ಟಕ್ಕೆ ತಾನೇ ವಟಗುಟ್ಟುವುದನ್ನು ಗಮನಿಸಬಹುದು. ಇದು ಭಾಷೆಯನ್ನು ಕಲಿಯುವ ಪ್ರಾಥಮಿಕ ಪ್ರಯತ್ನವಾಗಿದ್ದು ಧ್ವನಿಪೆಟ್ಟಿಗೆ ವಿಕಸಿತವಾಗುತ್ತಿರುತ್ತದೆ. ಮಗು ಮೂಗಿನಿಂದ ಆಗಬೇಕಾದ ಕೆಲವು ವಿಶಿಷ್ಟ ಉಚ್ಚಾರಗಳನ್ನು ಈ ವಯಸ್ಸಿನಲ್ಲಿಯೇ ಕಲಿಯಬಲ್ಲದು ; ಮುಂದೆ ಅದು ಸಾಧ್ಯವಾಗದು ಎಂದು ಕೆಲವು ಶಾಸ್ತ್ರಜ್ಞರ ಅಭಿಪ್ರಾಯ. ಶಬ್ದಗಳ ಅರ್ಥಕ್ಕಿಂತಲೂ ಉಚ್ಚಾರದ ಕಡೆಗೆ ಮಗು ಲಕ್ಷ್ಯಕೊಡುತ್ತದೆ. ಮೊದಲು ಒಂದೇ ಅಕ್ಷರ ಹಾಗೂ ಶಬ್ದದಿಂದ ಪ್ರಾರಂಭವಾಗುವ ಭಾಷೆ ತೊದಲು ನುಡಿಗೆ ಬರುತ್ತದೆ. ಮಗು

ಹಾಗೇ ತನ್ನ ಪ್ರಯತ್ನ ಮುಂದುವರಿಸಿ ತನ್ನ ಕಲ್ಪನೆ, ಭಾವನೆ, ಬೇಕುಬೇಡಗಳನ್ನು ಭಾಷೆಯಲ್ಲಿ ವ್ಯಕ್ತಪಡಿಸಲು ಯತ್ನಿಸುತ್ತದೆ. ಅದರ ಈ ಪ್ರಯತ್ನಕ್ಕೆ ತಕ್ಕ ಸಹಾಯ ದೊರೆತರೆ ಅದರ ಉಚ್ಚಾರ, ಭಾಷೆ ಸುಧಾರಿಸಿ ಕಲ್ಪನಾಶಕ್ತಿ, ವಿಚಾರ ಶಕ್ತಿಗಳಿಗೆ ಹೆಚ್ಚಿನ ಚಾಲನೆ ಸಿಕ್ಕುತ್ತದೆ. ಈ ವಯಸ್ಸಿನಲ್ಲಿ ಪ್ರಗತಿಯು ತೀವ್ರಗತಿಯಲ್ಲಿ ನಡೆದಿರುತ್ತದೆ. ದೊಡ್ಡವರು ಪರಭಾಷೆ ಕಲಿಯಲು ತೆಗೆದುಕೊಳ್ಳುವ ವೇಳೆ ಹಾಗೂ ಶ್ರಮದ ಪ್ರಮಾಣ ನೋಡಿದಾಗ ಮಗು ಭಾಷೆಯನ್ನು ಎಷ್ಟು ಶೀಘ್ರವಾಗಿ, ಸುಲಭದಲ್ಲಿ ಕಲಿಯುವುದೆಂಬುದು ತಿಳಿಯುತ್ತದೆ. ವರ್ತಮಾನ, ಭೂತಕಾಲ ಸೂಚಕ ಶಬ್ದ ಪ್ರಯೋಗ, ಸ್ತ್ರೀಲಿಂಗ, ಪುಲ್ಲಿಂಗ ಹೀಗೆ ಅಭಿವ್ಯಕ್ತಿ ವಿವರಗಳನ್ನೆಲ್ಲ ಶೀಘ್ರವಾಗಿ ಕಲಿಯಬಲ್ಲದು.

ಮಗು ಹೀಗೆ ನೈಸರ್ಗಿಕ ಭಾಷೆಯನ್ನು ಕಲಿಯುತ್ತಿದ್ದರೂ ಅದಕ್ಕೆ ದೊಡ್ಡವರ ಸಹಾಯ, ಸಹಾನುಭೂತಿ ಅವಶ್ಯ. ಅವರು ಮಗುವಿನೊಡನೆ ಹಾಗೂ ಎದುರಿನಲ್ಲಿ ಮಾತನಾಡುವ ಭಾಷೆಯಿಂದಲೇ ಅದು ಸಾಕಷ್ಟು ಕಲಿಯುತ್ತದೆ. ಇದೂ ಭಾಷಾ ಶಿಕ್ಷಣವೇ. ಮಗು ಶಬ್ದಗಳ ಉಚ್ಚಾರಗಳನ್ನು ಕೇಳಿ ಅದನ್ನು ತಾನೂ ಉಚ್ಚರಿಸಲು ಯತ್ನಿಸುತ್ತದೆ. ಆದ್ದರಿಂದ ಅದಕ್ಕೆ ಪದಸಂಪದ್ಭರಿತ ಭಾಷೆ ಕೇಳುವ ಅವಕಾಶ ಸಿಗಬೇಕು. ಇದಕ್ಕಾಗಿ ಶಿಶುವಿಹಾರದಲ್ಲಿ ಬೇರೆ ಬೇರೆ ಅವಕಾಶಗಳನ್ನು ಒದಗಿಸಲಾಗುತ್ತದೆ. ಜ್ಞಾನೇಂದ್ರಿಯಗಳ ಮೂಲಕ ಉಂಟಾದ ವಿವಿಧ ಅನುಭವಗಳ ಅಭಿವ್ಯಕ್ತಿ ಹಾಗೂ ಶಿಷ್ಟ ಭಾಷಾ ಪ್ರಯೋಗಗಳಲ್ಲಿ ಮಗುವಿಗೆ ನೆರವೀಯಲಾಗುತ್ತದೆ. ಬಿಸಿ, ತಣ್ಣಗೆ, ನುಣುಪು ಬಿರುಸು, ದೊಡ್ಡದು, ಚಿಕ್ಕದು, ಬೇರೆ ಬೇರೆ ಬಣ್ಣ, ರುಚಿ ಇತ್ಯಾದಿಗಳನ್ನು ಅವರ ಅನುಭವಕ್ಕೆ ತಂದು ಆಯಾ ಶಬ್ದಗಳನ್ನು ತಿಳಿಸಿಕೊಡಲಾಗುತ್ತದೆ. ಬರಹ ಹಾಗೂ ವಾಚನವನ್ನು ವಿಶಿಷ್ಟ ಪದ್ಧತಿಗನುಸಾರವಾಗಿ ಕಲಿಸಲಾಗುತ್ತದೆ. ಕಥೆ, ಹಾಡು, ನಾಟಕ, ಸಂಭಾಷಣೆ, ಪ್ರವಾಸ, ಹರಟೆಗಳು ಹಾಗೂ ಶಾರೀರಕ ಶಿಕ್ಷಣದ ಮೂಲಕವೂ ಭಾಷಾಶಿಕ್ಷಣವನ್ನು ನೀಡಲಾಗುತ್ತದೆ. ಮಗು ಸ್ವಾವಲಂಬನೆ ಸಾಧಿಸುವಲ್ಲಿ ಭಾಷಾ ಶಿಕ್ಷಣ ಬಹಳ ಮುಖ್ಯವಾದುದು. ಈ ಭಾಷೆಯ ಕಲಿಕೆಯಲ್ಲಿ ಮಗುವಿನ ಯತ್ನಕ್ಕೆ ತಕ್ಕಂತೆ ಶಿಶುವಿಹಾರ ಹಾಗೂ ಕುಟುಂಬಗಳಲ್ಲಿ ಯೋಗ್ಯ ವಾತಾವರಣ ದೊರೆತು ಸ್ಪಷ್ಟ ಉಚ್ಚಾರಣೆಯೊಡಗೂಡಿದ ಶುದ್ಧ, ಶಿಷ್ಟ ಪರಿಸರ ದೊರೆತರೆ ಭಾಷಾ ಶಿಕ್ಷಣವು ಸಫಲವಾಗುತ್ತದೆ.

ಮಗು ಭಾಷೆ ಕಲಿಯಲು ಸಹಾಯವಾಗುವಂಥ ಕೆಲವು ವಿಧಾನಗಳನ್ನು ಮುಂದೆ ಕೊಡಲಾಗಿದೆ. ಅವುಗಳಿಂದ ಮಗುವಿನ ಶಬ್ದಭಂಡಾರ ಬೆಳೆಯುವುದಲ್ಲದೆ ಮೂಲಾಕ್ಷರಗಳನ್ನೂ ಸಹ ಕಲಿಯಲು ಸಹಾಯಕವಾಗುತ್ತದ. ವಾಚನ, ವ್ಯಾಕರಣ ಹಾಗೂ ಲೇಖನಗಳಿಗೆ ಈ ಮೂಲಕ ಪ್ರವೇಶ ಮಾಡಲನುಕೂಲಕರ. ಅವುಗಳೆಂದರೆ: ಮಗುವಿನ

ಸುತ್ತಮುತ್ತಲಿದ್ದ ವಾತಾವರಣದಲ್ಲಿಯ ಪರಿಚಿತ ವಸ್ತುಗಳ ಪರಿಚಯ–(1) ಬಟ್ಟೆ, ಧಾನ್ಯ, ಪಾತ್ರೆ, ಮತ್ತಿತರ ವಸ್ತುಗಳು (2) ಚಿತ್ರಗಳು ಮತ್ತು ಪ್ರತಿಕೃತಿಗಳು (3) ಮೂಲಾಕ್ಷರ ಪರಿಚಯ (4) ಮರದ, ರಟ್ಟಿನ ಅಕ್ಷರಗಳ ಸಹಾಯದಿಂದ ಅಕ್ಷರ ತಿದ್ದುವುದು (5) ಅನುಲೇಖನ (ಶಿಕ್ಷಕಿ ಬರೆದದ್ದನ್ನು ನೋಡಿ ಮಕ್ಕಳು ಬರೆಯು ವುದು) (6) ಅಕ್ಷರಗಳನ್ನು ಜೋಡಿಸಿ ಸರಳ ಶಬ್ದ ಮಾಡುವುದರ ಮೂಲಕ ಆಟದಲ್ಲೇ ಪಾಠ ಕಲಿಯುವುದು (7) ಸುತ್ತಲಿನ ವಾತಾವರಣದಲ್ಲಿ ನೋಡಿದ ವಸ್ತುಗಳ ಹೆಸರು ಬರೆಯುವುದು (8) ಶುದ್ಧಬರಹ (9) ಕೇಳಿದ್ದನ್ನು ಬರೆಯುವುದು. ಹೀಗೆ ನಾನಾ ವಿಧವಾಗಿ ಮಕ್ಕಳು ಭಾಷೆಯನ್ನು ಸರಳ, ಸುಲಭ ರೀತಿಯಲ್ಲಿ ಕಲಿಯಲು ಸಾಧ್ಯವಾಗು ತ್ತದೆ. ಶಿಶುವಿಹಾರಗಳಲ್ಲಿ ಮಕ್ಕಳಿಗೆ ಅಕ್ಷರಗಳ ಪರಿಚಯವಾಗುತ್ತದೆ. ಪಾಲಕರು ತಮ್ಮ ಮಗು ಚಿಕ್ಕದಾಗಿರುವಾಗಲೇ ಅಂದರೆ 3–4 ವರ್ಷದ್ದಿರುವಾಗಲೇ ಎಲ್ಲ ಅಕ್ಷರ ಗಳನ್ನೂ ಓದಲು ಅಥವಾ ಬರೆಯಲು ಕಲಿತಿರಬೇಕೆಂದು ಆಶಿಸಿದರೆ ಮಗುವಿನ ಮೇಲೆ ಒತ್ತಾಯ ಹೇರಿದಂತೆ ಆಗುತ್ತದಷ್ಟೆ. ಅವರ ಧ್ವನಿಪೆಟ್ಟಿಗೆಯಿನ್ನೂ ಬೆಳೆಯಬೇಕಾ ಗಿರುತ್ತದೆ. ಹಾಗೆಯೇ ಚಿಕ್ಕ ದೊಡ್ಡ ಸ್ನಾಯುಗಳ ಸಂಯೋಜನೆಯಾಗಿ ಕಾರ್ಯ ಕುಶಲತೆಗಳು ಇನ್ನೂ ಸಾಧಿಸಬೇಕಾಗಿರುತ್ತದೆ. ಆದ್ದರಿಂದ ಮಗು ಅಕ್ಷರಗಳನ್ನು ಓದುವುದು, ಬರೆಯುವುದನ್ನು ಹಂತಹಂತವಾಗಿ ಕಲಿಯಬೇಕೇ ವಿನಃ ಶಿಶುವಿಹಾರಕ್ಕೆ ಸೇರಿದ ವರ್ಷ ಆರು ತಿಂಗಳಲ್ಲಿ ಕಲಿಯಬೇಕೆಂದು ಒತ್ತಾಯಿಸಿದರೆ ಸಾಧುವಾಗಿ ತೋರುವುದಿಲ್ಲ ಮಾತ್ರವಲ್ಲ, ಅದರ ಬೆಳವಣಿಗೆಗೂ ತೊಂದರೆಯುಂಟಾಗುತ್ತದೆ. ಅದಕ್ಕೆ ಭಾಷಾ ಶಿಕ್ಷಣದಲ್ಲಿ ಆಸಕ್ತಿ ಹುಟ್ಟುವುದಕ್ಕಿಂತ ಅನಾಸಕ್ತಿ ಅಥವಾ ದ್ವೇಷವೇ ಉಂಟಾಗ ಬಹುದು. ಇದರಿಂದ ಮಕ್ಕಳು ತೊದಲುವುದು ಅಥವಾ ಉಗ್ಗುವುದನ್ನು ಪ್ರಾರಂಭಿ ಸಲೂಬಹುದು. ಮಕ್ಕಳ ಸ್ವಯಂ ವಿಕಾಸಕ್ಕೆ ಅವಕಾಶಕೊಟ್ಟು ಬೇಕಾದ ಸಹಾಯ, ಸಹಕಾರ ಮಾತ್ರ ಸಲ್ಲಿಸುವಂತಿರಬೇಕು.

ಶಿಶುವಿಹಾರ ಶಿಕ್ಷಣದಲ್ಲಿ ಗಣಿತದ ಅಲ್ಪ ಪರಿಚಯ ಅಂದರೆ ಸಂಖ್ಯೆಗಳ ಪರಿಚಯವೂ ಆಗಬೇಕು. ಇದನ್ನು ಸಂಖ್ಯಾವಾಚಕ ಶಬ್ದಗಳಿಂದ ವಸ್ತುಗಳನ್ನು ಅಂದರೆ ಕೋಲು, ಕಡ್ಡಿಗಳು, ಬೀಜಗಳು ಮುಂತಾದುವನ್ನು ಎಣಿಸುವುದರ ಮೂಲಕ ತಿಳಿಸಬಹುದು. ಮಾಂಟೆಸ್ಸರಿಯವರ ವಿಶಿಷ್ಟಸಾಧನಗಳ ಸಹಾಯದಿಂದ ಶಾಸ್ತ್ರೀಯ ವಾಗಿ ಗಣಿತವನ್ನು ಕಲಿಸಬಹುದಾದರೂ, ಗ್ರಾಮೀಣ ಪ್ರದೇಶಗಳ ಶಿಶುವಿಹಾರಗಳಿಗೆ ಈ ಸಾಧನಗಳನ್ನು ದೊರಕಿಸಿಕೊಳ್ಳುವುದಕ್ಕೆ ತೊಂದರೆಯಿದ್ದರೆ ಶಿಕ್ಷಕಿ ಸುಲಭವಾಗಿ ಸಿಗತಕ್ಕ ಹಣ್ಣು, ಗಿಡಗಳ ಚಿಕ್ಕದೊಡ್ಡ ಕಡ್ಡಿಗಳು, ದೇಟು, ಎಲೆ, ಹೂವುಗಳು ಮತ್ತು ಬೀಜಗಳ ಮುಖಾಂತರ ಇಲ್ಲವೇ ಇನ್ನಿತರ ವಸ್ತುಗಳ ಮುಖಾಂತರವೂ ಗಣಿತದ ಪರಿಚಯ ಮಾಡಿಕೊಡಬಹುದು. ಮೂಲ ಅಂಕಿಗಳು, ಸಮ, ವಿಷಮ ಅಂಕಿಗಳು, ಸುಲಭ ಸಂಕಲನ, ಗುಣಾಕಾರಗಳನ್ನು ಕಲಿಸಬಹುದು. ಆಕಾರ, ಅಳತೆ, ಸಂಖ್ಯೆಗಳನ್ನು ಮಕ್ಕಳು

ದಿನನಿತ್ಯದ ವ್ಯವಹಾರದಲ್ಲಿ ತಾವಾಗಿಯೇ ಪರಿಚಯ ಮಾಡಿಕೊಳ್ಳುವುದನ್ನು ಲಕ್ಷಿಸಿ ಹೇಳಿಕೊಡಬೇಕು. ಮಗು ತನಗೂ ಇನ್ನೊಬ್ಬರಿಗೂ ಉಂಡೆ ಕೊಟ್ಟರೆ ಅವನಿಗೆ ಎಷ್ಟು ತನಗೆ ಎಷ್ಟು, ಅವನದು ದೊಡ್ಡದೋ ತನ್ನದು ದೊಡ್ಡದೋ ಎಂಬುದನ್ನು ಬಹು ಬೇಗ ತಿಳಿಯುತ್ತದೆ. ಹೀಗೆ ಸ್ಥೂಲವಾಗಿ ಪರಿಚಯ ಮಾಡಿಕೊಳ್ಳುವಾಗ ಅವರಿಗೆ ಸಹಾಯಮಾಡಿದರೆ ಅವರ ಗಣಿತಜ್ಞಾನ ದೃಢವಾಗುತ್ತದೆ. ಅಂಗಡಿಕಾರನ ಹುಡುಗ ಬೇಗನೆ ಸಂಖ್ಯೆ ಎಣಿಸುವುದನ್ನು, ದುಡ್ಡು ಕೂಡಿಸುವುದನ್ನೂ, ವಜಾ ಬಾಕಿ ತೆಗೆಯುವುದನ್ನೂ ಇತರ ಮಕ್ಕಳಿಗಿಂತ ಬೇಗ ಕಲಿತುಕೊಳ್ಳುತ್ತಾನೆ. ಇದಕ್ಕೆ ಕಾರಣ ಅವನು ತನ್ನ ಮನೆಯವರು ಮಾತನಾಡುವುದನ್ನೂ ಅವರ ವ್ಯವಹಾರವನ್ನೂ ಕಂಡು ಕೇಳಿರುತ್ತಾನೆ. ಹೀಗೆ ಜೀವನದ ಅನುಭವಗಳು ಸಮೃದ್ಧವಾದಂತೆ ಗಣಿತಜ್ಞಾನವೂ ಸುಧಾರಿಸುತ್ತದೆ.

ಹತ್ತರವರೆಗೆ ಅಂಕಿಗಳ ಬಾಯಿಪಾಠ ಮಾಡಿಸಬೇಕು ; ಹಾಗೆಯೇ ಸುಲಭವಸ್ತುಗಳನ್ನು ಎಣಿಸುವುದು ಕಲಿಸಬೇಕು. ಕೋಣೆಯಲ್ಲಿ ಎರಡು ಮೇಜು, ಎರಡು ಕುರ್ಚಿ, ಒಂದು ಕೋಲು ಇದ್ದರೆ ಅದರ ವರ್ಗ ಮಾಡಿ ಅವುಗಳನ್ನೆಣಿಸಿ ಬಳಿಕ ಎಲ್ಲ ವಸ್ತುಗಳನ್ನು ಸೇರಿಸಿ ಎಣಿಸುವುದು ಕಲಿಸಬೇಕು. ಆ ನಂತರ ಬೇರೆಬೇರೆ ವಸ್ತುಗಳ ಒಂದೇ ದೊಡ್ಡ ಗುಂಪು ಮಾಡಿ ಎಣಿಸಲು ತಿಳಿಸಬೇಕು. ಕಟ್ಟಿಗೆಯ ವಸ್ತುಗಳು ಎಷ್ಟು ? ಮಣ್ಣಿನ ವಸ್ತುಗಳು ಎಷ್ಟು ? ಹಾಲು, ಬೆಲ್ಲ, ಧಾನ್ಯ ಎಣಿಸುವುದರಲ್ಲಿ ಅಳತೆ ಮಾಡುವುದು, ತೂಕಮಾಡುವುದು ಇತ್ಯಾದಿಯಾಗಿಯೂ ಮಕ್ಕಳಿಗೆ ತಿಳಿಸಬೇಕು. ಮೊದಲು ಒಂದು ಬಟ್ಟಲು, ಎರಡು ಬಟ್ಟಲು, ಒಂದು ಸೇರು, ಎರಡು ಸೇರು ಲೆಕ್ಕದಲ್ಲಿ ಕಲಿಸಿ ಮುಂದೆ ಇವುಗಳಲ್ಲಿಯ ಸೂಕ್ಷ್ಮಭೇದಗಳನ್ನು ಮಕ್ಕಳಿಗೆ ತಿಳಿಸಬಹುದು.

ವಸ್ತು ಪರಿಚಯ

ಶಿಶುವಿಹಾರದಲ್ಲಿ ಮಕ್ಕಳ ಅನುಭವಗಳು, ಭಾಷೆ ಹಾಗೂ ಕಲ್ಪನೆಗಳನ್ನು ಶ್ರೀಮಂತಗೊಳಿಸಲು ವಸ್ತುಪರಿಚಯದ ಪಾಠ ಬಹಳ ಅವಶ್ಯ. ಇದನ್ನು ಹಂತಹಂತವಾಗಿ ಮಾಡಿಕೊಟ್ಟಲ್ಲಿ ವಿಷಯ ಮಕ್ಕಳ ಗಮನದಲ್ಲಿ ಚೆನ್ನಾಗಿ ಉಳಿಯುತ್ತದೆ. ಅಲ್ಲದೆ ಅವನ್ನು ವರ್ಗೀಕರಣ ಮಾಡುವ ಅಭ್ಯಾಸವೂ ಬೆಳೆಯುತ್ತದೆ.

(ಅ) ಬಾಟಲಿಗಳಲ್ಲಿ ವಸ್ತುಗಳನ್ನಿಟ್ಟು ಅವುಗಳ ಪರಿಚಯ ಮಾಡಿ ಕೊಡುವುದು

1) ಏಕದಳ ಧಾನ್ಯಗಳು – ಗೋಧಿ, ಅಕ್ಕಿ, ಜೋಳ, ರಾಗಿ, ಗೋವಿನ ಜೋಳ, ನವಣೆ ಇತ್ಯಾದಿಗಳು.

2) ದ್ವಿದಳ ಧಾನ್ಯಗಳು – ಹೆಸರು, ಕಡಲೆ, ಮಡಕೆ, ಹ(ಅ)ಲಸಂದೆ ಇತ್ಯಾದಿಗಳು.

3) ಬೇಳೆಗಳು – ಹೆಸರು, ಕಡಲೆ, ಉದ್ದು, ತೊಗರಿ ಇತ್ಯಾದಿಗಳು.

4) ಮಸಾಲೆ ಪದಾರ್ಥಗಳು (ಒಗ್ಗರಣೆ ಸಾಮಾನುಗಳು) – ಖಾರ, ಉಪ್ಪು, ಅರಿಶಿನ, ಜೀರಿಗೆ, ಮೆಣಸು, ಸಾಸಿವೆ, ಕೊಬ್ಬರಿ ಇತ್ಯಾದಿಗಳು.

5) ಎಣ್ಣೆ ಕಾಳುಗಳು – ಕಡಲೆಕಾಯಿ (ಸೇಂಗಾ), ಎಳ್ಳು, ಕುಸುಬಿ.

6) ಪಕ್ವಾನ್ನದಲ್ಲಿ ಹಾಕುವ ಮಸಾಲೆ – ಬಾದಾಮಿ, ಗೋಡಂಬಿ, ದ್ರಾಕ್ಷಿ, ಪತ್ರೆ, ಜಾಕಾಯಿ.

7) ವೀಳ್ಯದೆಲೆಯ ಮಸಾಲೆ – ಸುಣ್ಣ, ಕಾಚು, ಅಡಿಕೆ, ಲವಂಗ, ಏಲಕ್ಕಿ.

(ಆ) ತಟ್ಟೆಗಳಲ್ಲಿ ವಸ್ತುಗಳನ್ನಿಟ್ಟು ಇಲ್ಲವೇ ಪ್ರತ್ಯಕ್ಷವಾಗಿ ತೋರಿಸಿ ಪರಿಚಯ ಮಾಡುವುದು

1) **ಹಣ್ಣು** – ಆಯಾ ಋತುವಿನಲ್ಲಿ ಬರತಕ್ಕ ಹಣ್ಣುಗಳನ್ನು ತೋರಿಸಿ ತಿನ್ನಲು ಕೊಡಬೇಕು. ಪುನರಾವರ್ತನೆಗೆಂದು ಮಣ್ಣಿನ ಇಲ್ಲವೇ ಮರದಲ್ಲಿ ಮಾಡಿದ ಹಣ್ಣಿನ ಮಾದರಿಗಳನ್ನು ತೋರಿಸಬಹುದು. ಒಂದು ವೇಳೆ ಹಳ್ಳಿಯಲ್ಲಿ ಎಲ್ಲತರದ ಹಣ್ಣುಗಳೂ ಸಿಕ್ಕದೇ ಹೋದರೆ ಸಿಕ್ಕವುಗಳನ್ನಾದರೂ ತೋರಿಸಿ ತಿನ್ನಲು ಕೊಡಬೇಕು.

2) **ತರಕಾರಿ (ಕಾಯಿಪಲ್ಲೆ), ಸೊಪ್ಪುಗಳು** – ಹಳ್ಳಿಯಲ್ಲಿ ಸಿಕ್ಕಬಹುದಾದ ಎಲ್ಲ ತರಕಾರಿ, ಸೊಪ್ಪುಗಳನ್ನೂ ತೋರಿಸುವುದಲ್ಲದೆ ಅವುಗಳನ್ನು ಅವರ ಉಪಾಹಾರದ ವೇಳೆಗೆ ತಿನ್ನಲು ಉಪಯೋಗಿಸಬೇಕು.

3) **ಹೂವುಗಳು** – ಋತುವಿಗೆ ತಕ್ಕಂತೆ ಹೂವುಗಳನ್ನು ಪ್ರತ್ಯಕ್ಷ ತಂದು ತೋರಿಸಬೇಕು ಇಲ್ಲವೇ, ಪ್ರವಾಸಕ್ಕೆ ಮಕ್ಕಳನ್ನು ಕರೆದೊಯ್ದಾಗ ಅವನ್ನು ತೋರಿಸಬೇಕು.

4) **ಪ್ರಾಣಿ, ಪಕ್ಷಿಗಳು** – ಸಾಧ್ಯವಿದ್ದರೆ ಪ್ರಾಣಿ, ಪಕ್ಷಿಗಳನ್ನು ಪ್ರತ್ಯಕ್ಷವಾಗಿ ತೋರಿಸಬೇಕು. ಪ್ರವಾಸಕ್ಕೆ ಹೋದಾಗ ಇದನ್ನು ತೋರಿಸಬಹುದು. ಇಲ್ಲದ ಪಕ್ಷದಲ್ಲಿ ಮರ, ರಬ್ಬರ್ ಅಥವಾ ಮಣ್ಣಿನ ಪ್ರಾಣಿಪಕ್ಷಿಗಳ ಮಾದರಿಯನ್ನಾದರೂ ತೋರಿಸಿ ಪರಿಚಯ ಮಾಡಿಕೊಡಬೇಕು. ಸಾಧ್ಯವಿದ್ದರೆ ಶಿಶುವಿಹಾರದಲ್ಲೇ ಮೊಲ, ಬೆಕ್ಕು, ನಾಯಿ, ಗಿಳಿ, ಪಾರಿವಾಳಗಳನ್ನು ಸಾಕಬಹುದು ಇಲ್ಲವೇ ಇವುಗಳ ಮಾದರಿಗಳನ್ನೂ ಇಡಬಹುದು.

5) **ವಾಹನಗಳು** – ಎತ್ತಿನಗಾಡಿ, ಜಟಕಾ, ರೈಲುಗಾಡಿ, ಮೋಟಾರು ಗಾಡಿ, ಎಂಜಿನ್ ಮುಂತಾದವುಗಳನ್ನು ಪ್ರತ್ಯಕ್ಷವಾಗಿ ಸಾಧ್ಯವಿದ್ದಾಗ ತೋರಿಸಬಹುದು. ಅವೆಲ್ಲ ತಗಡು, ಮರ, ಪ್ಲಾಸ್ಟಿಕ್, ರಬ್ಬರ್‌ಗಳಿಂದ ಮಾಡಿದ ಮಾದರಿಗಳಲ್ಲಿ ಸಿಗುತ್ತವೆ. ಅವನ್ನು ಸಹ ಉಪಯೋಗಿಸಬಹುದು.

6) **ಆಭರಣಗಳು** – ನಕಲಿ ಆಭರಣಗಳು ಜಾತ್ರೆಗಳಲ್ಲಿ, ಪೇಟೆಯಲ್ಲಿ ಕಡಮೆ ಬೆಲೆಯಲ್ಲಿ ಸಿಕ್ಕುತ್ತವೆ. ಅಂಥವುಗಳನ್ನು ತಂದು ತೋರಿಸಿ ಇಲ್ಲವೇ ಗೊಂಬೆಗಳಿಗೆ ತೊಡಿಸಿ ಪರಿಚಯಿಸಬೇಕು.

7) **ಬಟ್ಟೆ, ಉಡುಪುಗಳು** – ಲಂಗ, ಅಂಗಿ, ಶರ್ಟು, ಜುಬ್ಬಾ, ಸೀರೆ, ಟೊಪ್ಪಿಗೆ, ಕುಲಾವಿಗಳನ್ನು ಚಿಕ್ಕ ಪ್ರಮಾಣದಲ್ಲಿ ಹೊಲಿದಿಟ್ಟು ಇಲ್ಲವೆ ಗೊಂಬೆಗಳಿಗೆ ಉಡಿಸಿ ತೋರಿಸಬೇಕು.

ಇದೇ ಪ್ರಕಾರ ಎಣ್ಣೆಕಾಳು, ಖನಿಜ ಧಾತುಗಳು, ಗಿಡದಿಂದ ಸಿಗತಕ್ಕ ಅಂಟು, ರಬ್ಬರ್, ಧೂಪ, ದೇವರ ಮೂರ್ತಿಗಳನ್ನು ಸಹ ಇಡಬಹುದು.

(ಇ) ಚಿತ್ರಗಳು :

ತರಕಾರಿ ಸೊಪ್ಪು, ಹಣ್ಣು, ಹೂವು, ಪ್ರಾಣಿ, ಪಕ್ಷಿ, ದೇಶ ನಾಯಕರು, ಐತಿಹಾಸಿಕ ಪುರುಷರು, ದೇವರ ಮೂರ್ತಿಗಳು ಇವೆಲ್ಲವುಗಳ ಚಿತ್ರ ಇಡಬಹುದು. ಮೇಲೆ ಹೇಳಿದ ಎಲ್ಲ ವಸ್ತುಗಳ ಪರಿಚಯವನ್ನು ಒಮ್ಮೆಲೇ ಮಾಡಬೇಕೆಂದೇನೂ ಇಲ್ಲ. ಹಂತಹಂತವಾಗಿ ಮಾಡುತ್ತ ಹೋದರೆ ಸಾಕು.

ಮಕ್ಕಳಿಗೆ ಹೀಗೆ ವಸ್ತು ಪರಿಚಯದ ಪಾಠ ಕಲಿಸುವ ಕ್ರಮ ಈ ಕೆಳಗಿನಂತಿರಬೇಕು :

ಹಣ್ಣುಗಳ ಪರಿಚಯ ಮಾಡಿಕೊಡುವಾಗ ಪೇರಲ, ಬಾಳೆ, ಪರಂಗಿ ಹೀಗೆ ಬೇರೆ ಬೇರೆ ಹಣ್ಣುಗಳನ್ನು ಚಿಕ್ಕ ತಟ್ಟೆಯಲ್ಲಿಟ್ಟಿದ್ದು ಅವನ್ನು ಕೊಯ್ದುಕೊಡಲು ಚಾಕು ಮತ್ತು ಚಿಕ್ಕಚಿಕ್ಕ ಮೂರು ನಾಲ್ಕು ತಟ್ಟೆ ಬಳಿಯಿರಬೇಕು.

ಮೊದಲು ಬಾಳೆಯ ಹಣ್ಣು ಇಟ್ಟಿರುವ ತಟ್ಟೆ ತೋರಿಸಬೇಕು. ಮಕ್ಕಳಿಗೆ ಬಹುಶಃ ಈ ಹಣ್ಣಿನ ಪರಿಚಯವಿರುವುದರಿಂದ ಅವರೇ ಅದರ ಹೆಸರು ಹೇಳಬಹುದು. ಎಲ್ಲ ಮಕ್ಕಳಿಗೂ ಬಾಳೆಯ ಹಣ್ಣನ್ನು ಕೈಯಲ್ಲಿ ಹಿಡಿದು ನೋಡಲು ಕೊಡಬೇಕು. ಈ ರೀತಿ ಬಾಳೆಹಣ್ಣಿನ ಬಣ್ಣ, ರುಚಿ ಸ್ಪರ್ಶದ ಪರಿಚಯವಾದ ಬಳಿಕ ಮತ್ತೊಂದು ಹಣ್ಣು ಎಂದರೆ ಪೇರಲ ಹಣ್ಣು ತೆಗೆದುಕೊಂಡು ಬಾಳೆಯ ಹಣ್ಣಿನಂತೆಯೇ ಪರಿಚಯ ಮಾಡಿಕೊಡಬೇಕು. ಆಮೇಲೆ ಎರಡೂ ಬಗೆಯ ಹಣ್ಣುಗಳನ್ನೂ ಬೇರೆಬೇರೆ ತಟ್ಟೆಯಲ್ಲಿಟ್ಟು ಬೆರಳಿನಿಂದ ತೋರಿಸಿ ಇದು ಪೇರಲ ಹಣ್ಣು, ಇದು ಬಾಳೆಹಣ್ಣು ಎಂದು ಒಟ್ಟಿಗೆ ಅವುಗಳ ಹೆಸರು ಹೇಳಬೇಕು. ಆಮೇಲೆ 'ಪೇರಲ ಯಾವುದು ?' 'ಬಾಳೆಹಣ್ಣು ಯಾವುದು ?' ಎಂದು ಪ್ರಶ್ನೆ ಕೇಳಬೇಕು. ಬಳಿಕ ಬೆರಳು ತೋರಿಸಿ 'ಇದು ಏನು ?', 'ಇದು ಏನು ?' ಎಂದು ಕೇಳಿ ಮಕ್ಕಳು ಅವುಗಳ ಗುರುತು ಹಿಡಿಯುವಂತೆ ನೋಡಿ

ಕೊಳ್ಳಬೇಕು. ಈ ಪ್ರಕಾರ ಎರಡು ಹಣ್ಣುಗಳ ಪರಿಚಯವಾದ ಬಳಿಕ ಇನ್ನೆರಡು ಬಗೆಯ ಹಣ್ಣುಗಳನ್ನು ತೆಗೆದುಕೊಳ್ಳಬೇಕು. ಆಮೇಲೆ ಮೊದಲನೆಯ ಮತ್ತು ಎರಡನೆಯ ಎರಡು ಜೋಡಿಗಳನ್ನು ಒಟ್ಟಾಗಿಸಿ ನಾಲ್ಕರ ಹೆಸರುಗಳನ್ನು ವಿಚಾರಿಸಿ ಕೊಳ್ಳಬೇಕು ; ಈ ರೀತಿ ಎಲ್ಲ ಹಣ್ಣುಗಳ ಪರಿಚಯ ಮಾಡಿಕೊಡಬೇಕು. ಅನಂತರ ಪುನರಾವರ್ತನೆ ಎಂದು ಈ ಹಣ್ಣುಗಳನ್ನು ಒಂದೆಡೆ ಇಟ್ಟು ಕೇಳಿ ತರಿಸಿಕೊಳ್ಳಬೇಕು. ಎಲ್ಲ ವಸ್ತುಗಳನ್ನು ಮಕ್ಕಳ ಮುಂದೆ ಇಟ್ಟು ಒಬ್ಬೊಬ್ಬರಿಗೆ 'ನಿನಗೆ ಯಾವುದು ಬೇಕು ?' ಎಂದು ಕೇಳಿ ಅವರಿಗೆ ಬೇಕಾಗಿರುವುದನ್ನು ಕೊಡಬೇಕು. ಹೀಗೆ ಮಕ್ಕಳು ಬೇರೆ ಬೇರೆ ವಸ್ತುಗಳನ್ನು ತೆಗೆದುಕೊಂಡ ಮೇಲೆ ಅವುಗಳನ್ನು ತಮ್ಮ ತಮ್ಮಲ್ಲಿ ಕೇಳಿ ಪಡೆದುಕೊಳ್ಳಲು ಬಿಡಬೇಕು. ಶಿಶುವಿಹಾರದಲ್ಲಿ ಮಕ್ಕಳು ಒಬ್ಬರಿಗೊಬ್ಬರು ತಮ್ಮ ವಸ್ತುಗಳನ್ನು ಕೊಟ್ಟು ತೆಗೆದುಕೊಳ್ಳುವಂತಿರಬೇಕು.

ಹಳ್ಳಿಗಳಲ್ಲಿ ದಿನನಿತ್ಯ ಬೇಕಾಗುವ ಹಾಗೂ ಇತರ ವಸ್ತುಗಳನ್ನು ಪಾಲಕರ ಸಹಾಯದಿಂದ ಸುಲಭವಾಗಿ ದೊರಕಿಸಿಕೊಳ್ಳಬಹುದು. ಶಿಕ್ಷಕಿ ಸ್ವಲ್ಪ ಶ್ರಮವಹಿಸಿ ತನ್ನ ಬುದ್ಧಿಯನ್ನು ಪಯೋಗಿಸಿದಲ್ಲಿ ಅನೇಕ ವಸ್ತುಗಳನ್ನು ಸುಲಭವಾಗಿ ದೊರಕಿಸಬಲ್ಲಳು. ವಸ್ತುಪರಿಚಯದಿಂದ ಮಕ್ಕಳ ಸಾಮಾನ್ಯ ಭಾಷಾ ಜ್ಞಾನವೂ ಹೆಚ್ಚುತ್ತದೆ.

ಅಧ್ಯಾಯ 9

ಬಾಲಗೀತೆ, ನಾಟಕ, ಕಥೆ ಮತ್ತು ಹರಟೆಗಳು

ಕಥೆಯಂತೆಯೇ ಹಾಡುಗಳೂ ಸಹ ಚಿಕ್ಕವರಿಂದ ದೊಡ್ಡವರವರೆಗೂ ಇಷ್ಟ. ಅಳುತ್ತಿರುವ ಮಗುವನ್ನು ತೊಟ್ಟಿಲಲ್ಲಿ ಹಾಕಿ ಜೋಗುಳ ಹಾಡಿದಾಗ ಆ ಧ್ವನಿಯ ನಾದದಲ್ಲಿ ಮಗು ನಿದ್ರೆ ಹೋಗುತ್ತದೆ. ಬೀಸುವಾಗ, ಏತ ಹೊಡೆಯುವಾಗ, ಹಂತಿಕಟ್ಟಿದಾಗ, ಹಾಡುಹೇಳುತ್ತಿದ್ದರೆ ಕೆಲಸದ ಶ್ರಮವೂ ತಿಳಿಯುವುದಿಲ್ಲ. ಜೀವನದ ಎಲ್ಲ ಪ್ರಸಂಗಗಳಲ್ಲಿ ವಯಸ್ಸಿನ ಎಲ್ಲ ಹಂತಗಳಲ್ಲಿ ಮನುಷ್ಯನಿಗೆ ಹಾಡು ಬೇಕು. ಮಗುವಿಗೆ ಹಾಡಿನ ಭಾವಾರ್ಥ, ಶಬ್ದಾರ್ಥ ತಿಳಿಯದೆ ಹೋದರೂ ಆ ಹಾಡಿನ ಗಾಯನ ಮಾಧುರ್ಯದಿಂದ ಮುಗ್ಧವಾಗುತ್ತದೆ.

ಹಾಡು ಶಿಶುವಿಹಾರಕ್ಕೆ ಬಹಳ ಅವಶ್ಯ. ಹಾಡು ಹಾಡುತ್ತ, ಕೇಳುತ್ತ ಇದ್ದಂತೆ ಮಗುವಿನ ಮನಸ್ಸು ಶಾಂತವಾಗುತ್ತದೆ; ಚಿತ್ತಸ್ವಾಸ್ಥ್ಯ ಉಂಟಾಗುತ್ತದೆ: ಏಕಾಗ್ರತೆ ಬರುತ್ತದೆ. ಮಗು ಶಿಶುವಿಹಾರ ವಾತಾವರಣದಲ್ಲಿ ಸಮರಸವಾಗಲು ಹಾಡು ಬಹಳ ಸಹಾಯಕ.

ಶಿಶುವಿಹಾರದಲ್ಲಿ ಮಕ್ಕಳಿಗೆ ಕಲಿಸುವ ಹಾಡುಗಳು ಅವರ ಶಕ್ತಿ, ವಯಸ್ಸು, ಮತ್ತು ಅಕ್ಕಪಕ್ಕದ ವಾತಾವರಣಕ್ಕೆ ಅನುಗುಣವಾದವಿರಬೇಕು. ಸರಳ ಸುಲಭ ಶಬ್ದಗಳಲ್ಲಿ ಆನಂದ, ದುಃಖ, ಪ್ರೇಮ, ಶಾಂತಿ ಹೀಗೆ ಎಲ್ಲ ಭಾವಗಳನ್ನು ವ್ಯಕ್ತಮಾಡಬಲ್ಲ ಹಾಡುಗಳನ್ನು ಮಕ್ಕಳಿಗೆ ಹೇಳಿಕೊಡಬೇಕು. ಹಾಡಿನಲ್ಲಿ ಸಾಹಿತ್ಯದ ಲಾಲಿತ್ಯವಿರಬೇಕಲ್ಲದೆ ಭಾಷೆ ಸ್ಪಷ್ಟವಾಗಿರಬೇಕು. ಮಕ್ಕಳಿಗೆ ಚಲಿಸುವ ಪದಾರ್ಥ, ದುಂಡಗೆ ತಿರುಗುವ ವಸ್ತು, ಪ್ರಾಣಿಪಕ್ಷಿಗಳ ಮರಿಗಳು, ಹೂವುಗಳು ಎಂದರೆ ಬಹಳ ಇಷ್ಟ. ಎಂತಲೇ ಅವುಗಳನ್ನು ಕುರಿತ ಹಾಡೂ ಪ್ರಿಯ. ಶಿಕ್ಷಕಿಯಲ್ಲಿ 'ಚಿಕ್ಕ ಗುಲಾಬಿ ಹೂವೆ', 'ರೈಲು ಬಂತು ಚುಕ್ಕು, ಚುಕ್ಕು' ಇಂಥ ಹಾಡುಗಳ ಭಂಡಾರವು ಸಾಕಷ್ಟು ತುಂಬಿರಬೇಕು. ಹೊಸ ಹಾಡುಗಳನ್ನು ಶಿಕ್ಷಕಿ 4-5 ಸಲ ಬೇರೆಬೇರೆ ವೇಳೆಯಲ್ಲಿ ಮಕ್ಕಳಿಗೆ ಕೇಳಿಸಬೇಕು. ಇದರಿಂದ ಅವರಿಗೆ ಆ ಹಾಡು ಕಂಠಪಾಠವಾಗುತ್ತದ. ಇದನ್ನೇ ಕೆಲವು ದಿವಸಗಳ ನಂತರ ಪುನರಾವರ್ತನೆ ಮಾಡಿಸಬೇಕು. ಹಾಡು ಹೇಳುವಾಗ ಕೆಲವು ಹಳೆಯ ಹಾಡುಗಳು, ಕೆಲವು 2-3 ಸಲ ಹೇಳಿದ ಹಾಡು, ಇನ್ನೂ ಹೊಸದಾದ ಹಾಡು, ಹೀಗೆ ಹೇಳುತ್ತಾ ಹೋದರೆ ಮಕ್ಕಳಿಗೆ ಹಾಡು ಕಲಿಯುವುದು ಸುಲಭವಾಗುತ್ತದೆ.

ಬಾಲಗೀತೆಗಳು ಮಕ್ಕಳು ಮಾತನಾಡುವ ತೊದಲುನುಡಿಯಲ್ಲಿಯೇ ಇರಬೇಕೆಂಬುದು ಕೆಲವರ ಅಭಿಪ್ರಾಯ. ಹಾಗೇನಿಲ್ಲ. ಮಗು ದೊಡ್ಡವರ ಹಾಗೆ ಸ್ಪಷ್ಟ ಉಚ್ಚಾರ ಮಾಡಲು ಯತ್ನಿಸುತ್ತದೆ. ಆದರೆ ದೈಹಿಕವಾಗಿ ಅಸಹಾಯಕವಾಗಿರುವುದರಿಂದ ಮಾತು ತೊದಲುತ್ತದಷ್ಟೆ. ಆದಕಾರಣ ತೊದಲುನುಡಿಗಳನ್ನೇ ಬಾಲಗೀತೆಗಳಿಗೂ ಹಾಕದೆ ಸರಳ, ಸುಲಲಿತ, ಸುಲಭ, ಸುಭಗ ಭಾಷೆಯಲ್ಲಿ ಸ್ಪಷ್ಟ ಉಚ್ಚಾರ ಬರುವಂತೆ ಬಾಲಗೀತೆಗಳನ್ನು ರಚಿಸಿರಬೇಕು. ಹಾಗೆಯೇ ಗೀತೆಯ ವಿಷಯಗಳು ಮಕ್ಕಳ ಮನಸ್ಸು, ವರ್ತನೆಗಳ ಮೇಲೆ ವಿಶೇಷ ಪರಿಣಾಮ ಮಾಡಬಹುದಾದ್ದರಿಂದ ಗೀತೆಗಳ ವಿಷಯವನ್ನು ಲಕ್ಷ್ಯಪೂರ್ವಕವಾಗಿ ಆರಿಸಿರಬೇಕು. ಇಂಥ ಗೀತೆಗಳಲ್ಲಿ ಹಲವು ಬಗೆಯವಿರುತ್ತವೆ. ಅವುಗಳನ್ನು ಈ ಕೆಳಗಿನಂತೆ ವರ್ಗೀಕರಿಸಬಹುದು :

1) **ಆಟದ ಹಾಡು**: ಹಾಡನ್ನು ಹೇಳುತ್ತ ನಿಶ್ಚಿತ ರೀತಿಯಲ್ಲಿ ಆಟವಾಡಬೇಕು. ಇದರಲ್ಲಿ ಹಾಡಿನ ಅರ್ಥದಂತೆಯೇ ಕೃತಿಯೂ ಇರಲೇಬೇಕೆಂದೇನಿಲ್ಲ. ಹಾಡಿನ ಧಾಟಿಯಂತೆ, ತಾಳಲಯಗಳಂತೆ ಆಟ ಸಾಗಿರುತ್ತದೆ.

2) **ನೃತ್ಯಗೀತೆ**: ಇದು ಕೂಚಗೀತೆಯಂತೆ ತಾಳಬದ್ಧವಾಗಿರುತ್ತದೆ. ನೃತ್ಯಗೀತೆಯ ತಾಳಧ್ವನಿಯಂತೆ ಧಂ ಧಂ ಎಂದು ಹೆಜ್ಜೆಹಾಕುತ್ತ ಕುಣಿಯಬೇಕಾಗುತ್ತದೆ. ಇಲ್ಲಿ ಗೀತದ ಅರ್ಥಕ್ಕನುಸಾರವಾಗಿ ಅಭಿನಯ ಮಾಡುವುದಿರುವುದಿಲ್ಲ. ಆದರೆ ಕೈಕಾಲು, ಮುಖ ಹಾಗೂ ಸಂಬಂಧಿಸಿದ ಅಂಗಗಳ ಲಲಿತ, ನಯನ ಮನೋಹರ ಚಲನೆ ಮಾಡಬೇಕಿರುತ್ತದೆ. ಕೋಲಾಟ, ಜಮ್ಮಾ, ಪುಗಡಿ, ಹೆಜ್ಜೆ ಕುಣಿತ ಮತ್ತಿತರ ನೃತ್ಯ ಗೀತೆಗಳು ಇವರಲ್ಲಿ ಸಮಾವೇಶವಾಗುತ್ತವೆ. ಕೆಲವರು ಶಿಶುವಿಹಾರದ ವಯಸ್ಸಿನ ಮಕ್ಕಳಿಗೇ ಶಾಸ್ತ್ರೀಯ ನೃತ್ಯದ ಅಂಗವಿನ್ಯಾಸಗಳನ್ನು ಕಲಿಸಲು ಪ್ರಯತ್ನಿಸುತ್ತಾರೆ. ಮಗುವಿಗೆ ಆಗ ಇನ್ನೂ ತನ್ನ ಅಂಗೋಪಾಂಗಗಳ ಮೇಲೆ ಹತೋಟಿಯಿರುವುದಿಲ್ಲ. ಇದರಿಂದ ಅದಕ್ಕೆ ಹೆಚ್ಚು ಶ್ರಮವಾಗುವುದಲ್ಲದೆ ನೃತ್ಯಾದಿ ಲಲಿತ ಕಲೆಗಳ ಬಗ್ಗೆ ವಿಮುಖತೆಯೊದಮೂಡಲೂ ಸಾಧ್ಯ. ಯಾವುದೇ ಕೃತಿಯಲ್ಲಿ ಅಂತಃಸ್ಫೂರ್ತಿ, ಅಭಿರುಚಿ ಹಾಗೂ ಸಹಜತೆಗಳು ಪ್ರಪ್ರಥಮವಾಗಿರಬೇಕು. ಲೋಕನೃತ್ಯ, ಕೋಲಾಟ, ಜುಮ್ಮಾ, ಹೆಜ್ಜೆ ಹಾಕುವಂತಹವಕ್ಕೆ ಪ್ರಾಶಸ್ತ್ಯವಿರಬೇಕು.

3) **ಕೂಚಗೀತೆ**: ಕೂಚಗೀತೆಯನ್ನು ಕವಾಯಿತು ಮಾಡುವಾಗ ವಿಶೇಷವಾಗಿ, ತಾಳಬದ್ಧವಾಗಿ ಹೆಜ್ಜೆಹಾಕಬೇಕಾದಲ್ಲಿ ಉಪಯೋಗಿಸುತ್ತಾರೆ. ಮಕ್ಕಳು ತಾಳಕ್ಕನುಸಾರವಾಗಿ ಹೆಜ್ಜೆಹಾಕುತ್ತ ಹೋಗುವುದರಿಂದ ಹೆಚ್ಚು ಶ್ರಮವೆನಿಸುವುದಿಲ್ಲ. ಪ್ರವಾಸಕ್ಕೆ ಹೋಗುವಾಗ, ಕವಾಯಿತು ಮಾಡುವಾಗ ಇಂಥ ಗೀತೆಗಳನ್ನು ಹೇಳಬಹುದು.

4) **ಅಭಿನಯಗೀತೆ**: ಗೀತೆಯಲ್ಲಿ ಯಾವ ಕ್ರಿಯೆ ಹಾಗೂ ಭಾವವರ್ಣನೆ ಮೂಡಿರುತ್ತದೋ, ಅದರಂತೆ ಮಕ್ಕಳು ಅಭಿನಯ ಮಾಡುತ್ತಾರೆ. ಸೈನಿಕನ ಹಾಡು, 'ಅಜ್ಜನ ಕೋಲಿದು ನನ್ನಯ ಕುದುರೆ', 'ಕೋಗಿಲೆ ಕೋಗಿಲೆ ಎಲ್ಲಿರುತ್ತೀ' ಇಂಥ ಹಾಡುಗಳನ್ನು ಮಕ್ಕಳಿಗೆ 4–5 ಸಲ ಹೇಳಬೇಕು. ಒಮ್ಮೆ ಹಾಡು ಕಲಿತ ಬಳಿಕ ಅಭಿನಯ ಮಾಡುವುದು ಸುಲಭವಾಗುತ್ತದೆ. ಹಾಡಿನ ಪ್ರತಿಯೊಂದು ಶಬ್ದದಂತೆ ಅಭಿನಯ ಮಾಡಬೇಕಿಲ್ಲ. ಹಾಡಿನಲ್ಲಿಯ ಶಬ್ದಗಳ ಅರ್ಥ ಪ್ರಕಟವಾಗುವಂತೆ ಅಭಿನಯವಿದ್ದರೆ ಸಾಕು. ಅಭಿನಯವು ಹೃತ್ಪೂರ್ವಕವಾಗಿಯೂ ಸ್ವಾಭಾವಿಕವಾಗಿಯೂ ಇರುವುದು ಮುಖ್ಯ.

5) **ಪ್ರಾರ್ಥನಾ ಗೀತೆ**: ಶಿಶುವಿಹಾರಗಳಲ್ಲಿ ಕಾರ್ಯಾರಂಭಕ್ಕೆ ಮುನ್ನ ಪ್ರಾರ್ಥನೆ ಹೇಳುವುದು ರೂಢಿ. ಭಾರತೀಯ ಸಂಸ್ಕೃತಿಗನುಗುಣವಾಗಿ ದೇವರ ಹಾಡು, ಭಜನೆ ಹೇಳುವುದು ಪದ್ಧತಿ. ಈ ಹಾಡುಗಳು ಸರಳ, ಸುಲಭವಾದ ಭಾಷೆ ಹಾಗೂ ಧಾಟಿಯಲ್ಲಿದ್ದು, ಸರ್ವಧರ್ಮ ಸಮನ್ವಯವಾಗಿದ್ದರೆ ಮಕ್ಕಳಲ್ಲಿ ಸೌಹಾರ್ದತೆ ಬೆಳೆಸಲು ಅನುಕೂಲವಾಗುತ್ತದೆ. ಇಂಥ ಹಾಡುಗಳ ಪ್ರತಿಯೊಂದು ಶಬ್ದದ ಅರ್ಥವೂ ಮಗುವಿಗೆ ತಿಳಿಯದೇ ಹೋದರೂ ಮನಸ್ಸಿನ ಸಂಸ್ಕಾರ ಬೆಳೆಯಲನುಕೂಲವಿರುತ್ತದೆ. ಕೆಲವು ಕಡೆ ಶಿಶುವಿಹಾರಗಳಲ್ಲಿ ಮಕ್ಕಳು ಪ್ರಾರ್ಥನೆಯನ್ನು ಜೋರಾಗಿ ಚೀರಿ ಹೇಗೆ ಹೇಗೋ ಹೇಳುತ್ತಾರೆ. ಶಿಕ್ಷಕಿಯಾದವಳು ಮಕ್ಕಳು ಶಾಂತವಾಗಿ, ಸುಲಲಿತವಾಗಿ, ಗಂಭೀರವಾಗಿ ಪ್ರಾರ್ಥನಾ ಗೀತೆ ಹಾಡುವಂತೆ ನೋಡಿಕೊಳ್ಳಬೇಕು. ಒಂದು ವೇಳೆ ಮಕ್ಕಳೆಲ್ಲ ಒಂದೇ ಸಮನಾಗಿ ಪ್ರಾರ್ಥನೆ ಹೇಳುವುದು ಸಾಧ್ಯವಾಗದೇ ಹೋದರೆ, ಶಿಕ್ಷಕಿಯೇ ಹಾಡನ್ನು ಸ್ವಲ್ಪ ಸ್ವಲ್ಪ ಹೇಳಿ ಮಕ್ಕಳಿಂದ ಅದನ್ನು ಹೇಳಿಸಬೇಕು. ಬೇರೆ ವೇಳೆಯಲ್ಲಿ ಮಕ್ಕಳಿಗೆ ಈ ಹಾಡನ್ನು ಹಾಡುವ ರೂಢಿ ಮಾಡಿಸಬಹುದು. ಆದರೆ ಪ್ರಾರ್ಥನೆಯ ವೇಳೆಗೆ ಶಾಂತಿ ಹಾಗೂ ಗಂಭೀರತೆಗಳಿರುವಂತೆ ನೋಡಿಕೊಳ್ಳಬೇಕು.

ಸಾಮಾನ್ಯ ಗೀತೆಗಳು: ಮಗು 2½ ವರ್ಷದ್ದಾಗಿ ಮಾತಾಡಲು ಆರಂಭಿಸಿತೆಂದರೆ ಯಾವಾಗಲೂ ಮಾತಿನಲ್ಲೇ ಮುಳುಗಿರುತ್ತದೆ. ಕೆಲಸ ಮಾಡುತ್ತ ತನ್ನಷ್ಟಕ್ಕೆ ತಾನೇ ಮಾತಾಡಿಕೊಳ್ಳುತ್ತಿರುತ್ತದೆ. ಯಾರಾದರೂ ಏನಾದರೂ ಹೇಳಿದರೆ ಅದನ್ನು ಅರ್ಥ ತಿಳಿಯದೆಯೇ ಬಡಬಡಿಸುತ್ತಿರುತ್ತದೆ. ಏಕೆಂದರೆ, ಆ ವಯಸ್ಸಿನಲ್ಲಿ ಅವರ ನಾಲಗೆ ಮಾತಾಡುವುದನ್ನು ರೂಢಿಮಾಡಿಕೊಳ್ಳುತ್ತಿರುತ್ತದೆ. ತುಟಿಯ ಚಲನವಲನ, ಧ್ವನಿಯ ಏರಿಳಿತಗಳನ್ನು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿ ಅದರಂತೆ ತಾನೂ ಅನುಕರಿಸಲು ಪ್ರಯತ್ನಿಸುತ್ತದೆ. ಈ ಪ್ರಯತ್ನ 2½ಯಿಂದ 3 ವರ್ಷಗಳಲ್ಲಿ ಬಹಳ ತೀವ್ರಗತಿಯಲ್ಲಿ ನಡೆದಿರುತ್ತದೆ. ಆಗ ಏನು ಹೇಳಿದರೂ, ಮಾಡಿದರೂ, ನೋಡಿದರೂ ಅದರ ಅನುಕರಣೆ ಮಾಡಲು ಯತ್ನಿಸುತ್ತದೆ. ಗಿಳಿಯಂತೆ ಹೇಳಿದ್ದನ್ನು, ಮಾಡಿದ್ದನ್ನು ತಾನೂ ಮಾಡುತ್ತದೆ. ಸಂಸ್ಕೃತ ಶ್ಲೋಕ, ಸುಭಾಷಿತ ಮುಂತಾದ ಕಠಿಣ ಪಾಠಗಳನ್ನು ಅರ್ಥ ತಿಳಿಯದಿದ್ದರೂ,

ಸರಿಯಾಗಿ ಉಚ್ಚಾರಮಾಡಲು ಬರದಿದ್ದರೂ, ಮಕ್ಕಳು ಬೇಗ ಕಂಠಪಾಠಮಾಡಿಕೊಳ್ಳು ತ್ತಾರೆ. ಇದಕ್ಕೆ ಕಾರಣ ಅವರ ಅಪಾರ ಸ್ಮರಣ ಶಕ್ತಿ. ಪದೇ ಪದೇ ಅದೇ ಶಬ್ದ ಬರುವಂಥ 'ಪಟ ಪಟ', 'ರಪ ರಪ' ಇತ್ಯಾದಿ ನಾಲಗೆಯ ಮೇಲೆ ಒತ್ತುಹಾಕಿ ಹೇಳುವ ಶಬ್ದ ಮಕ್ಕಳಿಗೆ ಇಷ್ಟ. ಇದನ್ನು ಗಮನಿಸಿ 'ಚಂದಪ್ಪಾ ಚಂದಪ್ಪಾ ಚಲುವಾ', 'ಚಂದಪ್ಪ ಚಂದಪ್ಪ ಚಾರಿಕಾಯಿ', 'ಗಿಳಿಯೇ ಗಿಳಿಯೇ ಸುಂದರಿ', 'ಆನೆ ಬಂತೊಂದಾನೆ' ಇತ್ಯಾದಿ ಸಾಮಾನ್ಯವಾಗಿ ಬಡಬಡ ಎನ್ನುವ ಪ್ರಾಸಾನುಪ್ರಾಸ ಗದ್ಯಪದ್ಯಗಳನ್ನು ಕಲಿಸಬಹುದು. ಲಯಬದ್ಧತೆಯಿರುವುದರಿಂದ ಮಕ್ಕಳು ಬೇಗನೆ ಕಲಿಯುತ್ತಾರೆ.


ಶಿಶುವಿಹಾರದಲ್ಲಿ ಪ್ರಾರ್ಥನಾಗೀತೆ, ಅಭಿನಯಗೀತೆ, ಜೋಗುಳ ಇವುಗಳನ್ನೆಲ್ಲ ಮಕ್ಕಳಿಗೆ ಕಲಿಸುವುದರ ಮುಖ್ಯೋದ್ದೇಶ ಭಾಷಾಶಿಕ್ಷಣ. ಗೀತೆ ಹಾಡುವಾಗ ಆನಂದೋತ್ಸಾಹಗಳುಂಟಾಗುತ್ತವೆ. ಅದೂ ಇವುಗಳ ಇನ್ನೊಂದು ಉಪಯೋಗ. ಮಕ್ಕಳು ಈ ಹಾಡುಗಳನ್ನು ಹಾಡುವುದನ್ನೆಲ್ಲ ಮೇಲಿಂದ ಮೇಲೆ ಕೇಳಿಯೇ ಕಂಠಪಾಠ ಮಾಡಬೇಕು. ಸಾಮಾನ್ಯವಾಗಿ ಮಕ್ಕಳು ತಮಗೆ ಇಷ್ಟವಾದ ಹಾಡುಗಳನ್ನು ಬೇಗನೆ ಕಲಿಯುತ್ತಾರೆ. ಕಲಿಸುವಾಗ ಪ್ರತಿಯೊಂದು ಸಾಲನ್ನು ಎರಡು ಮೂರು ಸಲ ಹೇಳಬೇಕು. ಮಕ್ಕಳು ಹೇಳುತ್ತಿರುವಾಗ ಶಿಕ್ಷಕಿಯು ಮಧ್ಯದಲ್ಲಿ ತಾನೂ ಒಮ್ಮೆ ಹೇಳಿ ಅವರಿಂದ ಹೇಳಿಸಿಕೊಳ್ಳಬೇಕು. ಕೆಲವೇಳೆ ಶಿಶುವಿಹಾರಕ್ಕೆ ಹೊಸದಾಗಿ ಬಂದ ಮಕ್ಕಳು ಹಾಡು ಹೇಳದೆ ಸುಮ್ಮನೆ ಉಳಿಯುತ್ತಾರೆ. ಶಿಕ್ಷಕಿ ಇಂಥವರ ವಿಚಾರದಲ್ಲಿ ಕಾತರಳಾಗದೆ ಸಂಯಮದಿಂದ ಪ್ರೋತ್ಸಾಹಿಸಿ, ತಾವಾಗಿಯೇ ಭಾಗವಹಿಸುವಂತೆ ನೋಡಿಕೊಳ್ಳಬೇಕು. ಬಾಲಗೀತೆ ಹಾಡುವಾಗ ಸಾಮಾನ್ಯವಾಗಿ ಉತ್ಸಾಹ, ಆನಂದಮಯ ವಾತಾವರಣವಿರ ಬೇಕು. ಗೀತೆಗಳು ಹೆಚ್ಚು ಅರ್ಥಪೂರ್ಣವೂ ಭಾವಪೂರ್ಣವೂ ಆಗಿದ್ದು ಮಕ್ಕಳ ಭಾಷಾಶಿಕ್ಷಣಕ್ಕೆ ಸಹಾಯಕವಾಗುವಂತಿರಬೇಕು.

ಬಾಲನಾಟಿಕಗಳು

ಚಿಕ್ಕಮಕ್ಕಳು ಸ್ವಭಾವತಃ ಅನುಕರಣ ಪ್ರಿಯರು. ಅವರಲ್ಲಿ ತಮ್ಮ ಅಕ್ಕಪಕ್ಕ ದಲ್ಲಿ ಜರುಗುತ್ತಿರುವ ಪ್ರಸಂಗಗಳನ್ನು ಲಕ್ಷ್ಯಕೊಟ್ಟು ನೋಡಿ ಅದನ್ನು ತಾವೂ ಮಾಡಿ ನೋಡುವ ಪ್ರಯತ್ನ ಸದಾ ನಡೆದಿರುತ್ತದೆ. ಇವುಗಳಲ್ಲಿ ಅವರ ಅಭಿನಯವೂ ಕಂಡು ಬರುತ್ತದೆ. ಅಜ್ಜ ಕೆಮ್ಮುವುದು, ಬೆಕ್ಕು, ನಾಯಿ, ಕಾಗೆ, ಗುಬ್ಬಿ ಕೂಗುವ ಧ್ವನಿಗಳು ಮತ್ತು ರೈಲುಗಾಡಿಯ ಚುಕ್ ಚುಕ್ ನಾದ ಇತ್ಯಾದಿಗಳನ್ನು ಅನುಕರಿಸಿ ಅಭಿನಯಿಸಿ ತೋರಿಸುತ್ತವೆ. ಈ ಅನುಕರಣೆ ಅವರಿಗೆ ಸ್ವಾಭಾವಿಕ. ಅನುಕರಣೆಯ ಮೂಲಕ ಮಕ್ಕಳು ತಮ್ಮ ಭಾವನೆಯ ಆವಿಷ್ಕಾರ ಮಾಡಿಕೊಳ್ಳುತ್ತಾರೆ. ಈ ನಾಟಕಗಳ ಮೂಲಕ ತಮ್ಮ ಅನುಭವಗಳನ್ನು ದೃಢಪಡಿಸಿಕೊಳ್ಳುತ್ತಾರಲ್ಲದೆ, ಜಗತ್ತಿನ ಪರಿಚಯವೂ ವಿಸ್ತೃತಗೊಳ್ಳುತ್ತದೆ. ಮನಸ್ಸಿನಲ್ಲಿಯ ವಿಷಯವನ್ನು ಬೇರೆಯವರೆದುರಿಗೆ ದಿಟ್ಟತನ

ದಲ್ಲಿ ಹೇಳುವ ರೂಢಿಯಾಗುತ್ತದೆ. ವಿನೋದವೃತ್ತಿಯ ಪರಿಪೋಷಣೆಯಾಗುತ್ತದೆ. ಅಲ್ಲದೆ ಮನಸ್ಸಿನ ಆನಂದ, ಭಾವನೆಗಳ ಆವಿಷ್ಕಾರದಿಂದಾಗಿ ಮಕ್ಕಳ ಮನೋವಿಕಾಸಕ್ಕೂ ಎಡೆಯಾಗುತ್ತದೆ.

ಅಭಿನಯವು ನಾಟಕದಲ್ಲಿಯ ಒಂದು ಮುಖ್ಯ ಅಂಶ. ಅದೊಂದು ಕಲೆ. ಪ್ರತಿಯೊಂದು ಕಲೆಯೂ ಮನುಷ್ಯನ ಸೌಂದರ್ಯ ವೃತ್ತಿಯ ಪ್ರತೀಕವಾಗಿದೆ. ಕಲಾ ಕೃತಿಯಿಂದಾಗಿ ಮನುಷ್ಯನ ರಚನಾತ್ಮಕ ಹಾಗೂ ಅಹಂಪ್ರವೃತ್ತಿಗಳಿಗೆ ಸಮಾಧಾನ ಸಿಕ್ಕುತ್ತದೆ. ಈ ಎರಡು ಸಹಜ ಪ್ರವೃತ್ತಿಗಳ ತೃಪ್ತಿಯಿಂದಾಗಿ ಮನೋಸ್ವಾಸ್ಥ್ಯ ಉಂಟಾಗುತ್ತದೆ. ಹಾಗೆಯೇ ನಾಟಕದಲ್ಲಿಯ ಅಭಿನಯದಿಂದಲೂ ಇದು ಸಾಧ್ಯ ವಾಗುತ್ತದೆ.



ಚಿತ್ರ 8 : ನಾಟಕದ ಒಂದು ದೃಶ್ಯ–'ದೇವಿ ! ಕಬ್ಬಿಣದ ಕೊಡಲಿಯೇ ನನಗೆ ಬೇಕು'

ಅಭಿನಯ ಸಹಜತೆಗೆ ನಾಟಕದ ವಸ್ತುವಿನೊಂದಿಗೆ ತನ್ಮಯತೆಮೂಡಬೇಕಾದುದು ಅವಶ್ಯ. ಇದೂ ಲಕ್ಷ್ಯಪೂರ್ವಕ ನಿರೀಕ್ಷಣೆಯಿಂದಲೇ ಸಾಧ್ಯ. ವಿವಿಧ ಭಾವಗಳನ್ನು ಮುಖದ ಮೇಲೆ ವ್ಯಕ್ತಪಡಿಸಲು, ಶಾರೀರಕ ಹಾವಭಾವ ಹೇಗಿರುತ್ತದೆಂದು ಮಕ್ಕಳೂ ಕೂಡ ನೋಡಿ ಗ್ರಹಿಸಿ, ಅದನ್ನು ಮುಂದೆ ತಮ್ಮ ಕೃತಿಯಲ್ಲಿ ತರಬೇಕಾಗುತ್ತದೆ. ಇದಕ್ಕಾಗಿ ಯೋಗ್ಯ ಕ್ರಿಯಾಶಕ್ತಿ ಹಾಗೂ ಸ್ನಾಯುಗಳ ಹತೋಟಿಯಿರಬೇಕಾಗುತ್ತದೆ.

ಆದರೆ ಮಕ್ಕಳು ಈ ವಿವರಗಳನ್ನೆಲ್ಲ ವಿಚಾರಮಾಡದೆ ಸುಲಭವಾಗಿ ಅನುಕರಿಸಿ ಕೃತಿಯಲ್ಲಿ ತರಲು ಪ್ರಯತ್ನಿಸುವುದರಿಂದ ಅವರ ಕಾರ್ಯನಿರೀಕ್ಷಣೆ, ಚಾತುರ್ಯ, ಏಕಾಗ್ರತೆ ಹಾಗೂ ಕ್ರಿಯಾಶಕ್ತಿ ಬೆಳೆಯುವುದಲ್ಲದೆ ಅವರ ಶಬ್ದ ಭಂಡಾರ, ಭಾಷಾಜ್ಞಾನ ಹಾಗೂ ಶಬ್ದಗಳ ಉಚ್ಚಾರಶಕ್ತಿಗಳೂ ಹೆಚ್ಚುತ್ತವೆ. ಧ್ವನಿಯ ಏರಿಳಿತಗಳೂ ತಿಳಿಯುತ್ತವೆ ಮತ್ತು ತನ್ಮಯತೆಯಿಂದಾಗಿ ಆನಂದವೂ ದೊರೆಯುತ್ತದೆ. ಇದಲ್ಲದೆ ಮಕ್ಕಳಲ್ಲಿ ವಿನೋದ ವೃತ್ತಿ ಮತ್ತು ದಿಟ್ಟತನಗಳೂ ಬೆಳೆಯುತ್ತವೆ. ನಾಟಕದಲ್ಲಿ ಮಗು ತನ್ನ ಭಾವನೆಗಳ ಮೇಲೆ ಹತೋಟಿ ಪಡೆಯಲು ಯತ್ನಿಸುವುದರಿಂದ ಮನಸ್ಸಿನ ಪ್ರಕ್ಷುಬ್ಧತೆಯು ಕಡಮೆಯಾಗಿ, ಸಂಯಮದಿಂದ ವರ್ತಿಸಲು ಸಹಾಯಕವಾಗುತ್ತದೆ. ಒಂದು ವಿಷಯವನ್ನು ಮೇಲಿಂದ ಮೇಲೆ ನೋಡಿದರೆ, ಕೇಳಿದರೆ ಕೃತಿಯಲ್ಲಿ ತರಲು ಯತ್ನಿಸುತ್ತಾರೆ. ಪೋಸ್ಟ್‌ಮನ್, ತರಕಾರಿಯವಳು, ಟಾಂಗಾವಾಲ ಮುಂತಾದವರ ನಡೆನುಡಿಯ ಅಭಿನಯ ಹಾಗೂ ಧ್ವನಿಯ ಅನುಕರಣೆಗಳನ್ನು ಸಹಜವಾಗಿ ಮಾಡುತ್ತಾರೆ. ಮುಂದೆ ಸಾವಕಾಶವಾಗಿ ಯಾವುದಾದರೊಂದು ನಗೆನಾಟಕ ಕಲಿಸಿಕೊಡಬೇಕು. ವಿಷಯ ಹಗುರಾಗಿದ್ದು, ಪಾತ್ರಗಳು ಸರಳ, ಸಹಜವಾಗಿರಬೇಕು. ಕಥೆಯಲ್ಲಿಯ ಘಟನೆಗನುಸಾರವಾಗಿ ಸ್ವರದಲ್ಲಿ, ಮುಖಚರ್ಯೆಯಲ್ಲಿ ಯೋಗ್ಯ ಬದಲಾವಣೆ ಮಾಡಿ ಕಥೆಯನ್ನು ನಿರೂಪಿಸಬೇಕು. ಅದೇ ದಿನ ಕೂಡಲೇ ನಾಟಕ ಮಾಡುವುದು ಸಾಧ್ಯವಲ್ಲ. ಮಕ್ಕಳಿಗೆ ಅದೇ ಕಥಾವಿಷಯವನ್ನು ನಾಲ್ಕಾರು ಸಲ ಹೇಳಿ ಮನದಟ್ಟು ಮಾಡಿಕೊಡಬೇಕು. ಆಗಲೇ ಕಥೆಯ ಮರ್ಮ ಸಾವಕಾಶವಾಗಿ ಮಕ್ಕಳ ಗಮನಕ್ಕೆ ಬರುವುದು. ಗ್ರಹಣಶಕ್ತಿಗೆ ಮೀರಿದ ವಿಚಾರ, ಕಥೆ. ಪಾತ್ರಗಳಿದ್ದು ಮಕ್ಕಳಿಗೆ ಬಾಯಿಪಾಠಮಾಡಿಸಿ ನಾಟಕವಾಡಿಸಲು ಯತ್ನಿಸಿದರೆ ಅವರಲ್ಲಿಯ ಸಹಜ ಸೌಂದರ್ಯಕ್ಕೆ ಚ್ಯುತಿಯುಂಟಾಗುತ್ತದೆ. ಮಕ್ಕಳಿಗೂ ಎಷ್ಟು ಪ್ರಯತ್ನಪಟ್ಟರೂ ಸಿದ್ಧಿಸಲಿಲ್ಲವೆಂಬ ಬೇಸರ ಮೂಡಿ ಉತ್ಸಾಹ ಭಂಗವಾಗುತ್ತದೆ. ಕಥೆಯನ್ನು ಮಕ್ಕಳು ಚೆನ್ನಾಗಿ ಗ್ರಹಿಸಿದ ಮೇಲೆ ಯಾರುಯಾರು ಯಾವ ಪಾತ್ರ ಮಾಡುತ್ತಾರೆಂದು ಕೇಳಿ ಅವರಿಗೆ ಸಹಜ ರೀತಿಯಲ್ಲಿ ಅವರು ಮಾತನಾಡುವಂತೆ, ಅಭಿನಯ ಮಾಡುವಂತೆ ಪ್ರೋತ್ಸಾಹಿಸಬೇಕು. ಆಗ ಮಾತ್ರ ಮಕ್ಕಳಿಗೆ ನಾಟಕದಿಂದ ಆನಂದ ಲಭಿಸುತ್ತದೆ.

ಸಾಮಾನ್ಯವಾಗಿ ವಾರ್ಷಿಕ ಸಮಾರಂಭ ಅಥವಾ ವಿಶೇಷ ಸಮಾರಂಭಗಳಲ್ಲಿ ಮಾತ್ರ ಶಿಶುವಿಹಾರಗಳಲ್ಲಿ ಮಕ್ಕಳಿಂದ ನಾಟಕವಾಡಿಸುವುದು ಕಂಡುಬರುತ್ತದೆ. ಇದಕ್ಕಾಗಿ ಚುರುಕಿನ ಕೆಲ ಮಕ್ಕಳನ್ನು ಮಾತ್ರ ಆಯ್ದುಕೊಳ್ಳಲಾಗುತ್ತದೆ. ಇದು ಈ ಮಕ್ಕಳಿಗೂ, ಇಂಥ ಅವಕಾಶ ಸಿಕ್ಕದೆ ಮನೋಭಂಗವಾದ ಮಕ್ಕಳಿಗೂ ಕೂಡ ಹಿತವಲ್ಲ. ಆದ್ದರಿಂದ ಮೂಕ ನಾಟಕಗಳು ಅಥವಾ ನಾಟಕಗಳು ಶಿಶುವಿಹಾರದ ಸಾಮಾನ್ಯ ಕಾರ್ಯಕ್ರಮಗಳಲ್ಲೊಂದಾಗಿರಬೇಕು. ಅದಕ್ಕೆ ಬೇಕಾಗುವ ಪೋಷಾಕುಗಳು ಮತ್ತಿತರ ವಸ್ತುಗಳು ಇದ್ದರೂ, ಇಲ್ಲದಿದ್ದರೂ ಮಕ್ಕಳು ಅಭಿನಯಿಸುತ್ತಾರೆ. ವಿಶಿಷ್ಟ

ವೋಷಾಕು, ಸಾಮಾನುಗಳಿದ್ದರೆ ಇನ್ನಷ್ಟು ಹೆಚ್ಚಿನ ಉತ್ಸಾಹ ಬರುತ್ತದೆ. ಆದರೆ ಈ ವೋಷಾಕು ಮತ್ತು ನಾಟಕದ ಸಾಧನಗಳು ದೊಡ್ಡವರ ನಾಟಕದಂತೆ ಥಳಥಳ ಹೊಳೆಯುತ್ತಿದ್ದರೆ ಮಾತ್ರ ಮಕ್ಕಳ ಲಕ್ಷ್ಯ ಅಭಿನಯಕ್ಕಿಂತ ಬೆಡಗಿನ ಕಡೆಗೆ ಬಿದ್ದೀತು. ಅಲ್ಲದೆ ವೋಷಾಕು ಗಾಢಬಣ್ಣದ್ದು, ಜರಿಯದು, ಬಿರುಸಾಗಿ, ನೀಟಾಗಿ, ನಿಲ್ಲುವಂಥದಿದ್ದರೆ ಮಕ್ಕಳ ಸಹಜ ಅಭಿನಯಕ್ಕೆ ತೊಡಕಾಗುತ್ತದೆ. ಹಾಗೆಯೇ ಮಕ್ಕಳಿಗೆ ಬಣ್ಣ, ತುಟಿಗೆ ಕೆಂಪು ಇತ್ಯಾದಿ ರಂಗುಲೇಪನಗಳಿಂದಲೂ ಚಂಚಲತೆಯುಂಟಾಗುತ್ತದೆ. ಆದ್ದರಿಂದ ಅವರಿಗೆ ಪಾತ್ರಗಳ ಪ್ರತೀಕವಾಗುವ ಸಾಧಾರಣ ವಸ್ತು ಮತ್ತು ವೋಷಾಕುಗಳಿದ್ದು ನಾಟಕ ಮಾಡಿದರೆ ಸಹಜವಾಗಿ ಅಭಿನಯಿಸಿ ಆನಂದಿಸಬಲ್ಲರು.

ರಂಗಭೂಮಿಯ ಸಿದ್ಧತೆಯಲ್ಲೂ ಇದೇ ಸಹಜತೆ, ಸರಳತೆಗಳಿರಬೇಕು. ರಂಗಭೂಮಿಯು ಸ್ವಲ್ಪ ಎತ್ತರಿಸಿದ ನೆಲದ ಮೇಲಿದ್ದರೆ ನೋಡಲು ಅನುಕೂಲ. ದೀಪಗಳ ಝಗಮಗ, ದೊಡ್ಡ ದೊಡ್ಡ ಶಬ್ದ, ಮೇಲಿಂದ ಮೇಲೆ ಬಣ್ಣ, ಪರದೆಗಳನ್ನು ಬದಲಿಸುವುದರಿಂದ ಕಾರಣವರಿಯದೆ ಮಕ್ಕಳು ಗಾಬರಿಯಾಗಿ ಅಭಿನಯವನ್ನು ಮರೆತು ಬಿಡುತ್ತಾರೆ. ಆದಕಾರಣ ಇಂಥ ಕಾರ್ಯಕ್ರಮಗಳಿಗೆ ಪರದೆಗಳಿಲ್ಲದಿದ್ದರೂ ಸರಿ. ಹೆಚ್ಚೆಂದರೆ ಮುಂದಿನದು ಹಾಗೂ ಹಿಂದಿನದು ಹೀಗೆ ಎರಡು ಪರದೆ ಇದ್ದರೂ ಸಾಕು. ಹಾಗೆಯೇ ದೀಪದ ಬೆಳಕು ಸಹ ಯೋಗ್ಯವಾಗಿರುವಷ್ಟೇ ಇರಬೇಕು. ರಂಗಭೂಮಿಯ ಕೊನೆಗೆ ಕೆಲವು ಗಿಡದ ಕುಂಡಗಳು, ಸುಂದರವಾದ ಜಮಖಾನೆ ಹಾಸಿದ್ದು ಮೇಲಿನ ಭಾಗಕ್ಕೆ ತೋರಣ ಕಟ್ಟಿದ್ದು, ಕೆಳಗಿನ ಭಾಗದಲ್ಲಿ ಚಂದವಾಗಿ ರಂಗೋಲಿ ಹಾಕಿದ್ದು ಧೂಪದ ವಾಸನೆಯಿದ್ದರೆ ಮಕ್ಕಳಿಗೆ ಹಿತವಾಗಿರುತ್ತದೆ.

ವಾರದ ಕಾರ್ಯಕ್ರಮಗಳಲ್ಲಿ ನಾಟಕ ತರಬೇತಿಯೂ ಒಂದಾಗಿರುವುದು ಒಳ್ಳೆಯದು. ಇದಕ್ಕಾಗಿ ಕುಟುಂಬಕ್ಕೆ ಬೇಕಾಗುವ ಸಾಮಾನುಗಳಾದ ಚಾಪೆ, ಪಾತ್ರೆ, ಒಲೆ, ದೇವರ ಜಗಲಿ, ಪೂಜೆಯ ಸಾಮಾನು, ಹಾಸಿಗೆ, ಖಾಲಿ ಪೆಟ್ಟಿಗೆ ಮತ್ತು ಡಬ್ಬಗಳು, ಚಿಕ್ಕದೊಡ್ಡ ಚಕ್ರಗಳು, ಮುಂತಾದುವೂ ಇರಬೇಕು. ಡಾಕ್ಟರ್, ಗಾಡಿಯವ ಇಲ್ಲವೇ ಅಂಗಡಿಯವನಾಗಲು ಬೇಕಾದ ವಿಶಿಷ್ಟ ಸಾಮಾನುಗಳು ಮಕ್ಕಳು ಬೇಕೆಂದಾಗ ಸಿಗುವಂತಿರಬೇಕು. ಈ ಎಲ್ಲ ವಸ್ತುಗಳು ಚಿಕ್ಕ ಚಿಕ್ಕ ಆಟಿಕೆಗಳೇ ಆಗಿರದೆ, ಮಕ್ಕಳ ಶಕ್ತಿಗೆ ಸಹಜವಾದ ಅಳತೆ, ತೂಕದವುಗಳೇ ಇದ್ದರೆ ನೈಜತೆ ಹೆಚ್ಚುತ್ತದೆ. ಈ ಸಾಮಾನುಗಳು ಸರಳವಿದ್ದು ಗಟ್ಟಿಯಾದವಾಗಿರಬೇಕು. ಮಕ್ಕಳು ತಾಯಿ, ತಂದೆ, ಡಾಕ್ಟರ್, ಡ್ರೈವರ್, ಶಿಕ್ಷಕ ಮುಂತಾದ ಪಾತ್ರಗಳನ್ನು ಸಹಜವಾಗಿ ಆಡಿಕೊಳ್ಳುವುದಕ್ಕೆ ಅವಕಾಶವಿರಬೇಕು.

ಇಂಥ ಆಟ, ನಾಟಕಗಳು ಮಕ್ಕಳ ಕಿರಿತನವನ್ನು ಎದುರಿಸಲು ಸಹಾಯ ಮಾಡುತ್ತವೆ. ದೊಡ್ಡವರು ಮಾಡುತ್ತಿರುವ ಕೆಲಸಕಾರ್ಯ, ನಡೆನುಡಿಗಳನ್ನು! ನಿತ್ಯ

ಜೀವನದಲ್ಲಿ ಅವರು ನಿರೀಕ್ಷಿಸಿರುತ್ತಾರೆ. ಆದರೆ ಅವರಂತೆಯೇ ವರ್ತಿಸಲು ನಿಜ ಜೀವನದಲ್ಲಿ ಸಾಧ್ಯವಾಗಿರುವುದಿಲ್ಲ. ತನ್ನ ಆದರ್ಶವ್ಯಕ್ತಿ ಚಿಕ್ಕಪ್ಪನನ್ನೋ ಅಥವಾ ಅಧಿಕಾರ ವ್ಯಕ್ತಮಾಡಲು ತಂದೆಯನ್ನೋ, ಅಧಿಕಾರಿಯನ್ನೋ, ಪೋಲೀಸನನ್ನೋ ಅನುಕರಿಸಲು ಅವರಿಗೆ ನಾಟಕಗಳಲ್ಲಿಯೇ ಸಾಧ್ಯವಷ್ಟೆ. ಇದಲ್ಲದೆ ಇಲ್ಲಿ ಮಕ್ಕಳು ಅಸಹಾಯಕತೆಯನ್ನು ಹೆಚ್ಚಾಗಿ ಅನುಭವಿಸುವುದಿಲ್ಲ. ದೊಡ್ಡವರ ಪಾತ್ರವನ್ನು ಅಭಿನಯದಲ್ಲಿ ಅನುಭವಿಸುವುದರಿಂದ ಪ್ರಸಂಗವನ್ನು ಹತೋಟಿಯಲ್ಲೇ ಇಟ್ಟುಕೊಳ್ಳಲು ಯತ್ನಿಸುತ್ತಾರೆ. ಮಗು ಜವಾಬ್ದಾರಿಯನ್ನು ತಿಳಿದು ಎರಡನೆಯವರಿಗೆ ಆಜ್ಞಾಪಿಸುತ್ತದೆ; ಉಳಿದವರಿಗಿಂತ ಹೆಚ್ಚಾಗಿ, ಕೆಲಸಮಾಡುತ್ತದೆ; ನಿರ್ಣಯ ಕೈಗೊಳ್ಳುತ್ತದೆ. ಇದರಿಂದ ತಾನು ಇನ್ನೂ 'ಕಿರಿಯ'ನೆಂಬ ಮಾನಸಿಕ ಒತ್ತಡವನ್ನು ಕೆಲಮಟ್ಟಿಗೆ ಕಡಮೆ ಮಾಡಿಕೊಳ್ಳುತ್ತದೆ. ಇಂಥ ಆಟಗಳಲ್ಲಿ ಮಕ್ಕಳು ಸಾಮಾನುಗಳನ್ನು ಮುರಿಯುತ್ತಾರೆ, ಒಡೆಯುತ್ತಾರೆ; ದೊಡ್ಡ ಶಬ್ದದಿಂದ ಗಲಭೆ ಮಾಡುತ್ತಾರೆ. ಇಂಥ ಪ್ರಸಂಗಗಳಲ್ಲಿ ಅವರು ಅನುಭವಿಸಿದ ಭಾವನೆಗಳನ್ನೇ ಪುನರುಚ್ಚರಿಸಿ ತಮ್ಮ ಭಯ, ಕ್ರೋಧ, ದ್ವೇಷಗಳನ್ನು ಹೊರಚೆಲ್ಲುತ್ತಾರೆ.

ಮನಸ್ಸಿಗೆ ಜಡವಾದ, ತೊಂದರೆಕೊಡುತ್ತಿರುವ ಅನುಭವ, ಭಾವನೆಗಳು ಈ ಆಟ, ನಾಟಕಗಳ ಮೂಲಕ ಹೊರಬೀಳಬಹುದು. ತನ್ನ ಬಗ್ಗೆ ಇರತಕ್ಕ ಬೇರೊಬ್ಬರ ಭಾವನೆ, ನಡತೆ ಹಾಗೂ ತಾನು ಇನ್ನೊಬ್ಬರ ಬಗ್ಗೆ ತಳೆದಿರುವ ಭಾವನೆಗಳನ್ನು ಮಗು ಈ ಮೂಲಕ ವ್ಯಕ್ತಪಡಿಸಿದಾಗ ಅದನ್ನು ಮನಗಂಡು ಆಯಾ ಮಗುವಿನ ಮನಸ್ಸು ತಿಳಿಯಾಗುವಂತೆ ಯತ್ನಿಸಲು ಶಿಕ್ಷಕಿಗೆ ಸಹಾಯವಾಗುತ್ತದೆ. ನಿಷೇಧಾತ್ಮಕ ಭಾವನೆಗಳೂ ಕೂಡ ಈ ಆಟಗಳ ಮೂಲಕ ಹೊಮ್ಮಬಹುದು.

ಬೇರೆಬೇರೆ ಪಾತ್ರಗಳನ್ನು ಮಕ್ಕಳೇ ಅಭಿನಯಿಸಿ ಆಡುವಂತೆ, ಕೀಲುಗೊಂಬೆಗಳನ್ನು ಉಪಯೋಗಿಸಬಹುದು. ಮಕ್ಕಳ ಸಹಾಯದಿಂದ ಶಿಕ್ಷಕಿಯೇ ರಟ್ಟು, ಕಾಗದ, ಬಣ್ಣ, ಸಣ್ಣಸಣ್ಣ ಕೋಲು, ಕಡ್ಡಿ, ಕಾಗದ ನೀರಲ್ಲಿ ನೆನೆಹಾಕಿ ಕುಟ್ಟಿ ಮಾಡಿದ ಮುದ್ದೆ ಮುಂತಾದುವುಗಳನ್ನು ಉಪಯೋಗಿಸಿ ಪಶು, ಪಕ್ಷಿ, ಪ್ರಾಣಿ, ಮನುಷ್ಯ, ಗಿಡಮರಗಳ ಸಾಕಷ್ಟು ದೊಡ್ಡದಾದ ಆಕೃತಿಗಳನ್ನು ಮಾಡಿಕೊಳ್ಳಬೇಕು. ಹಾಗೆಯೇ ಮಕ್ಕಳಿಗೆ ಬೇಕಾಗುವ ಮುಖವಾಡಗಳನ್ನು ಸಹ ತಯಾರಿಸಬಹುದು. ಇದಕ್ಕೆ ತಾತ್ಕಾಲಿಕವಾದ ರಂಗಭೂಮಿಯನ್ನು ಕುರ್ಚಿ, ಕೋಲು, ಬಟ್ಟೆತುಂಡುಗಳನ್ನೇ ಜೋಡಿಸಿ ಮಾಡಿಕೊಳ್ಳಬಹುದು. ಸಾಧ್ಯವಿದ್ದರೆ ಪ್ರತ್ಯೇಕ ರಂಗಭೂಮಿಯನ್ನು ತಯಾರಿಸಬಹುದು. ಹೀಗೆ ತಯಾರಿಸಿದ ರಂಗಭೂಮಿಯ ಮೇಲೆ, ಮಕ್ಕಳು ಆಯಾ ಪಾತ್ರಗಳ ಗೊಂಬೆಗಳ ಮೂಲಕ ಅಭಿನಯ ಮಾಡಿಸಿ, ಸಂಭಾಷಣೆಯನ್ನು ಅವರೇ ನುಡಿದು ನಾಟಕವಾಡಿದರೆ ರಂಜನೀಯವಾಗಿರುತ್ತದೆ. ಈ ಎಲ್ಲ ಉದ್ದೇಶಗಳನ್ನೂ ನಾಟಕದ ಮೂಲಕ ಸಾಧಿಸಬಹುದು.

ಬಾಲಕಥೆಗಳು

ಕಥೆ ಕೇಳುವುದೆಂದರೆ ಮಕ್ಕಳಿಂದ ಮುದುಕರವರೆಗೆ ಎಲ್ಲರಿಗೂ ಇಷ್ಟ. ಅದರಲ್ಲೂ ಮಕ್ಕಳಾದರೆ ಕಥೆ ಕೇಳಲು ಊಟ ನಿದ್ದೆ ಕೂಡ ಬಿಟ್ಟು ಕುಳಿತುಕೊಳ್ಳುತ್ತಾರೆ. ಇದಕ್ಕೆ ಮುಖ್ಯಕಾರಣ ಕಥೆ ಕೇಳುವಾಗ ನಮ್ಮ ಮನಸ್ಸು ಕಥೆಯ ಪಾತ್ರದ ಜೊತೆಗೆ ಪ್ರಸಂಗ, ಪರಿಸ್ಥಿತಿಗಳೊಂದಿಗೆ ಸಂಪೂರ್ಣವಾಗಿ ತಲ್ಲೀನವಾಗುವಿಕೆ ; ನಮ್ಮ ಇರವಿನ ಮರೆವು. ಇದರಿಂದ ನಮ್ಮ ಮನಸ್ಸಿನ ಮೇಲಿದ್ದ ಭಾರ ತಂತಾನೆ ಕಡಿಮೆಯಾಗುವಿಕೆ.

ಚಿಕ್ಕಮಕ್ಕಳಿಗೆ ಹೇಳುವ ಕಥೆಯ ಭಾಷೆ ಸರಳವೂ ಸುಲಲಿತವೂ ಆಗಿದ್ದು ಸುಲಭಗ್ರಾಹ್ಯ ಭಾಷೆಯಲ್ಲಿರಬೇಕು. ಮಕ್ಕಳಿಗೆ ತಿಳಿಯದ ಕಠಿಣ ಶಬ್ದಗಳಿಂದ ಕಥೆ ಕೂಡಿದ್ದಾಗಿದ್ದರೆ, ಆ ಕಥೆಯ ತಿರುಳು ಅದೆಷ್ಟೇ ಉತ್ತಮವಾಗಿದ್ದರೂ ಅವರಿಗೆ ಹಿಡಿಸುವುದಿಲ್ಲ. ಕಥೆಯ ಭಾಷೆ ಮಕ್ಕಳಿಗೆ ತಿಳಿಯುವಂತೆ ಸುಲಭವಾಗಿದ್ದು ಲಘುವಾಗಿರಬೇಕು.

ಕಥೆಯಲ್ಲಿಯ ನಾಯಕ, ನಾಯಕಿಯರಿಗೆ ಸಂಕಟ ಪ್ರಸಂಗಗಳು ಒದಗಿ ಬಂದಾಗ ಅವರದನ್ನು ಧೈರ್ಯದಿಂದ ಎದುರಿಸಿಕೊಂಡು ಹೋದಂತೆ ಮಕ್ಕಳಲ್ಲಿಯೂ ಧೈರ್ಯ, ಎದೆಗಾರಿಕೆ ಮುಂತಾದ ಗುಣಗಳು ಬೆಳೆಯುತ್ತವೆ. ಕಥೆಯಲ್ಲಿನ ವಿವಿಧ ಪಾತ್ರ, ಸನ್ನಿವೇಶಗಳಿಂದಾಗಿ ಮಕ್ಕಳಿಗೆ ಲೋಕ ವ್ಯವಹಾರ ಜ್ಞಾನ ಹೆಚ್ಚುತ್ತದೆ. ಹಾಗೆಯೇ ಆನೆ, ಮೊಲ, ನರಿ, ಸಿಂಹ ಸಮುದ್ರ, ಗುಡ್ಡ, ನದಿ ಇತ್ಯಾದಿಯಾಗಿ ವಿವಿಧ ವಸ್ತು ವಿಚಾರ, ಸನ್ನಿವೇಶಗಳ ಪರಿಚಯವಾಗುತ್ತದೆ. ಅಲ್ಲದೆ, ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿಯೂ ಕಥೆ ಸಹಾಯಕವಾಗಬಲ್ಲುದು. ಜೀಜಾಬಾಯಿ ಶಿವಾಜಿಗೆ ತನ್ನ ಪೂರ್ವಜರ ಶೌರ್ಯ ಕಥೆ ಹೇಳಿ ಅಂತೆಯೇ ಬೆಳೆಸಿದಂತೆ, ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವುದು ಸಾಧ್ಯ.

ಮಕ್ಕಳಿಗೆ ಕಥೆ ಹೇಳುವಾಗ ಈ ಕೆಳಗಿನ ಅಂಶಗಳನ್ನು ಗಮನಿಸಬೇಕು :

1) ಮಕ್ಕಳ ವಯಸ್ಸು, ಗ್ರಹಣಶಕ್ತಿ.

2) ಕಥೆ ಹೇಳುವಾಗ ಮನೆಯಲ್ಲಿಯಂತೆ, ಅಂದರೆ ಶಿಕ್ಷಕಿಯ ಅಕ್ಕಪಕ್ಕದಲ್ಲಿ ಕೆಲವರು ಕೂಡಬಹುದು ; ಇನ್ನು ಕೆಲವರು ಪಕ್ಕದಲ್ಲೆ ನಿಂತುಕೊಳ್ಳಬಹುದು. ಸಲಿಗೆಯಿಂದ ಮಕ್ಕಳು ಕಥೆ ಕೇಳುವಿಕೆ.

3) ಕಥೆಯನ್ನು ಬಹಳ ದೊಡ್ಡ ಧ್ವನಿಯಲ್ಲಿ ಅಥವಾ ಸಣ್ಣಧ್ವನಿಯಲ್ಲಿ ಹೇಳದೆ ಅದು ಎಲ್ಲ ಮಕ್ಕಳಿಗೂ ಕೇಳುವಂತಿದ್ದು ಸ್ವರದಲ್ಲಿ ಪ್ರಸಂಗಾನುಸಾರ ಏರಿಳಿತಗಳಿರುವಿಕೆ.

4) ಕಥೆ ಹೇಳುವಾಗ ಕೈಯಿಂದ ಬಹಳ ಹಾವಭಾವ ಮಾಡದಿದ್ದರೂ ಪ್ರಸಂಗಾನುಸಾರ ಶಿಕ್ಷಕಿಯ ಮುಖದ ಮೇಲಿನ ಹಾವಭಾವಗಳು ಬದಲಿಸುವಿಕೆ.

5) ಕಥೆ ಹೇಳುವಾಗ ಮಧ್ಯ ಮಧ್ಯದಲ್ಲಿ ಪ್ರಶ್ನೆ ಕೇಳುವುದರಿಂದ ಮಕ್ಕಳಿಗೆ ರಸ ಭಂಗವಾಗುತ್ತದೆ. ಗಲಾಟೆ ಮಾಡುವ ಮಕ್ಕಳು ಗಮನ ಸೆಳೆಯಲು ಚಿಕ್ಕ ಪ್ರಶ್ನೆಯೊಂದನ್ನು ಕೇಳಿದರೂ ಅದೇ ರೂಢಿಯಾಗದಂತೆ ನೋಡಿಕೊಳ್ಳುವಿಕೆ.

6) ಕಥೆ ಹೇಳಿದ ನಂತರ ಬೋಧನೆ, ಟೀಕೆ ಮಾಡದಿರುವಿಕೆ (ಕಥೆ ಹೇಳುವಾಗ ಪರೋಕ್ಷವಾಗೇನಾದರೂ ನೀತಿಬೋಧೆಯಾದರೆ ಅಡ್ಡಿಯಿಲ್ಲ).

7) ಕಥೆ ಹೇಳಿ ಮುಗಿದ ಕೂಡಲೇ ಮಕ್ಕಳಿಂದ ಅದರ ಪುನರಾವರ್ತನೆ ಮಾಡಿಸದಿರುವಿಕೆ. ಏಕೆಂದರೆ ಮಕ್ಕಳಿಗೆ ಅದು ಪೂರ್ಣವಾಗಿ ತಿಳಿದಿರುವುದಿಲ್ಲ.

8) ಒಂದು ಕಥೆಯನ್ನು ಮಕ್ಕಳಿಗೆ 5-6 ಸಲ ಬೇರೆಬೇರೆ ದಿವಸಗಳಲ್ಲಿ ಹೇಳುವಿಕೆ. ಮೊದಲಸಲ ಹೇಳಿದಾಗ ಕಥೆಯ ಉತ್ಸುಕತೆಯಿಂದ ಗಡಿಬಿಡಿಯಲ್ಲಿ ಕೇಳುತ್ತಾರೆ. ಎರಡನೆಯಸಲ ಹೇಳಿದಾಗ ಅವರ ಲಕ್ಷ್ಯದಲ್ಲಿ ಸ್ವಲ್ಪ ಸ್ವಲ್ಪ ಉಳಿಯುತ್ತದೆ. ಒಂದು ಕಥೆ ಅವರಿಗೆ ಚನ್ನಾಗಿ ತಿಳಿಯಿತೆಂದರೆ ಅವರೇ ಬೇರೆ ಕಥೆ ಹೇಳಿ ಎಂದು ಕೇಳುತ್ತಾರೆ. 4-5 ತಿಂಗಳ ನಂತರ ಮತ್ತೊಮ್ಮೆ ಪುನರಾವರ್ತನೆಯೆಂದು ಇದೇ ಕಥೆ ಹೇಳಬೇಕು. ಪ್ರತಿಸಲ ಕಡಮೆಯೆಂದರೆ ಮೂರು ಕಥೆ ಹೇಳಬೇಕು. ಒಂದು ಬಹಳ ಹಳೆಯದು. ಎರಡನೆಯದು 2-3 ಸಲ ಹೇಳಿರುವಂಥದ್ದು ಹಾಗೂ ಮೂರನೆಯದು ಹೊಸದು ಆಗಿರಬೇಕು.

ಒಂದು ವರ್ಷದಲ್ಲಿ ಮಕ್ಕಳಿಗೆ 25-30 ಕಥೆ ಹೇಳುವಷ್ಟು ಕಥಾಸಂಗ್ರಹ ಶಿಕ್ಷಕಿಯಲ್ಲಿರಬೇಕು.

9) ಮಕ್ಕಳಿಗೆ ಪರಿಚಿತ ಹಾಗೂ ವಾಸ್ತವವಾದ ಪರಿಸ್ಥಿತಿ, ಪ್ರಾಣಿ, ಪಕ್ಷಿ ಇತ್ಯಾದಿಯಾಗಿ ಕೂಡಿದ ಕಥೆಗಳನ್ನೇ ಹೆಚ್ಚಾಗಿ ಹೇಳುವಿಕೆ. ಯಕ್ಷಿಣಿ ಕಥೆಗಳು ಕಲ್ಪನೆಗೆ ಸಾಕಷ್ಟು ಪ್ರೋತ್ಸಾಹ ಕೊಡುತ್ತವೆಯಾದರೂ, ಅತಿಯಾಗಿದ್ದು ವಾಸ್ತವಿಕತೆಯನ್ನು ಅಲ್ಲಗಳೆಯುವಂತಿರಬಾರದು. ಭೂತ-ಪ್ರೇತಗಳ ಕಥೆಯನ್ನು ಸಹ ರಂಜನೀಯವಾಗಿ ಬಣ್ಣಿಸಬಾರದು. ಮಕ್ಕಳು ಇದರಿಂದ ಭಯ ವಿಹ್ವಲರಾಗುತ್ತಾರೆ. ಕಥೆಗಳು ಮಕ್ಕಳ ಕಲ್ಪನೆಗೆ ನಿಲುಕಬಹುದಾದ ವಿಷಯಗಳನ್ನೊಳಗೊಂಡಿದ್ದು ಮುಂದಿನ ಕಲ್ಪನೆಗೆ ಅವಕಾಶವಿತ್ತು ತನ್ಮೂಲಕ ಆನಂದ ಕೊಡುವಂತಿರಬೇಕು. ಕಾಗೆ, ಗುಬ್ಬಿ, ಗಿಳಿ, ನರಿ, ಗುಡ್ಡ, ನದಿ, ಗಿಡ, ಹೂವು ಇತ್ಯಾದಿಗಳು ಕಥೆಯಲ್ಲಿ ಸಮಾವೇಶವಾಗುವಂತೆ ವೈಜ್ಞಾನಿಕ ಪ್ರಗತಿ, ಸಂಶೋಧನೆಗಳು, ಪ್ರವಾಸಗಳ ಬಗ್ಗೆಯೂ ಅದ್ಭುತ ರಮ್ಯ ವಿಷಯಗಳ ಬಗ್ಗೆಯೂ ಕಥೆಹೇಳಬಹುದು. ಮಕ್ಕಳಿಗೆ ಹೇಳುವ ಕಥೆಗಳನ್ನು 3 ರೀತಿ ವಿಂಗಡಿಸಬಹುದು. ಬಹಳ ಚಿಕ್ಕಮಕ್ಕಳಿಗೆ ಹೇಳಬಹುದಾದ ಸುಲಭ, ಸರಳ ಭಾಷೆಯ ಕಥೆಗಳು. ಪ್ರಸಂಗ ಒಂದೇ ಇದ್ದು ಪಾತ್ರಗಳು ಕಡಮೆ ಇರುವ ಕಾಗೆ, ಗುಬ್ಬಿಗಳ ಕಥೆಗಳನ್ನಿಲ್ಲಿ ಹೆಸರಿಸಬಹುದು. ಅದೇ ಅದೇ ಶಬ್ದ ಮೇಲಿಂದ ಮೇಲೆ ಕಥೆಯಲ್ಲಿ

ಬರುತ್ತಿದ್ದರೆ ಉದಾಹರಣೆಗೆ ಗುಬ್ಬಿ ಕಾಗೆ ಕಥೆ, ನರಿ ದ್ರಾಕ್ಷಿ, ನರಿ ಬಕಪಕ್ಷಿ, ಕಾಗೆ ಮತ್ತು ಹೂಜಿ, ಓಡುವ ಕುಂಬಳಕಾಯಿ, ಮಕೂರ್ ಇತ್ಯಾದಿ ಕೇಳಲು ಇನ್ನೂ ರಮ್ಯವಾಗಿರುತ್ತವೆ. 3½ಯಿಂದ 5 ವರ್ಷ ವಯಸ್ಸಿನ ಮಕ್ಕಳಿಗೆ ಹೇಳುವಂಥವು ಎರಡನೆಯ ಬಗೆಯ ಕಥೆಗಳು. ಇವುಗಳಲ್ಲಿ ಸನ್ನಿವೇಶ ಒಂದೊಂದಾಗಿ ಕ್ರಮೇಣ ಬೆಳೆಯುತ್ತ ಹೋಗಬಹುದು. ಶಬ್ದಗಳ ಪುನರಾವರ್ತನೆಯಾದರೆ ಮಕ್ಕಳಿಗೆ ಕೇಳಲು ಇನ್ನೂ ಇಷ್ಟ. ಈ ಕಥೆಗಳ ಭಾಷೆಯೂ ಸುಲಭ ಸರಳವಾಗಿರಬೇಕು.

5ರಿಂದ ಮುಂದಿನ ವಯಸ್ಸಿನ ಮಕ್ಕಳಿಗೆ ಇಲಿ ಮತ್ತು ಸಿಂಹ, ಮೊಲ ಮತ್ತು ಸಿಂಹ ನಾಯಿ ಮತ್ತು ಎಲುಬು ಇಂಥ ಕಥೆಗಳಲ್ಲಿಯ ಚತುರತೆ, ಪ್ರಸಂಗದ ಗಂಭೀರತೆ, ಸ್ವಲ್ಪ ಸ್ವಲ್ಪ ತಿಳಿಯುತ್ತವೆ.' ಆದ್ದರಿಂದ ಸ್ವಲ್ಪ ಕಠಿಣವಾದರೂ ಮೋಜೆನಿಸುವ ಕಥೆ ಇವರಿಗೆ ಹಿಡಿಸಬಲ್ಲದು. ಹೀಗೆ ಹೇಳುವ ಕಥೆ ಮೂರು ಪ್ರಕಾರದವಿರುತ್ತವೆ. 1) ಕಥೆಯಲ್ಲಿ ಸ್ವಭಾವ ವಿಶೇಷ ಕಂಡುಬಂದು ಅದರಿಂದಾಗಿ ಮೋಜೆನಿಸುವಂಥವು. ಉದಾಹರಣೆಗೆ ಕಾಗೆ ಮತ್ತು ನರಿ, ನರಿ ಮತ್ತು ಮೊಸಳೆ, ಬೆಕ್ಕು ಕೋತಿ, ಸಿಂಪಿಗನು ಮತ್ತು ಮಂಗಗಳ ಕಥೆಗಳನ್ನು ಸೂಚಿಸಬಹುದು. 2) ಈ ಗುಂಪಿನ ಮಕ್ಕಳಿಗೆ ಯಕ್ಷಿಣಿ ಕಥೆಗಳೂ ಹಿಡಿಸುತ್ತವೆ ; ಜಾದೂ ಕೂಡ ಇದರಲ್ಲಿ ಸೇರಬಹುದು. ಅದ್ಭುತ ರಮ್ಯ ಕಥೆಗಳನ್ನು ಹೇಳುವಾಗ ಪೃಥ್ವಿಯ ಉತ್ಪತ್ತಿ, ಐತಿಹಾಸಿಕ ಕಥೆ, ಸಾಹಸಗಳು, ವೈಜ್ಞಾನಿಕ ಸಂಶೋಧನೆಗಳನ್ನು ಹೇಳಬೇಕು. 3) ಕಡೆಯದಾಗಿ ಐತಿಹಾಸಿಕ ಕಥೆಗಳನ್ನು ಸಹ ಸರಳ, ಸುಲಭ ಭಾಷೆಯಲ್ಲಿ ಹೇಳಬಹುದು. ಒಟ್ಟಿನಲ್ಲಿ ಕಥೆ ಹೇಳುವಾಗ ಮಕ್ಕಳ ವಯಸ್ಸು, ಗ್ರಹಣಶಕ್ತಿ, ಅವರ ಅಭಿರುಚಿ, ಅವರು ಬೆಳೆದು ಬಂದ ವಾತಾರಣಗಳನ್ನು ಲಕ್ಷಿಸಿ ಕಥೆ ಹೇಳುವುದು ಮುಖ್ಯ.

ಶಿಶುವಿಹಾರ ಶಿಕ್ಷಕಿಯರು ಬಹಳಷ್ಟು ಕಥೆಗಳನ್ನು ಸಂಗ್ರಹಿಸಬೇಕಲ್ಲದೆ ಮಕ್ಕಳಿಗೆ ರಂಜನೀಯವಾಗುವಂತೆ ಬಣ್ಣಿಸಿ ಮನಂಬುಗಿಸಬೇಕಾದುದು ಮುಖ್ಯ.

ಹರಟೆ

ಭಾಷೆ, ವ್ಯವಹಾರ ಮತ್ತು ಅಭಿವ್ಯಕ್ತಿಗಳ ಒಂದು ಅನಿವಾರ್ಯ ಮಾಧ್ಯಮಗಳಲ್ಲೊಂದು. ಯಾರೇ ಒಬ್ಬ ಮಿತ್ರರ ಭೇಟಿಯಾದಾಗಲೂ ಮುಕ್ತಮನಸ್ಸಿನಿಂದ ಹರಟೆ ಹೊಡೆದಾಗಲೇ ಸಮಾಧಾನ. ಮಕ್ಕಳೂ ಕೂಡ ಅಷ್ಟೇ ಭಾವನಾ ಪ್ರಧಾನರಿರುತ್ತಾರೆ. ಅವರಿಗೂ ತಮ್ಮ ವಿಷಯಗಳನ್ನು ತಮ್ಮ ಮನೆಯ ಅಕ್ಕಪಕ್ಕದ ಪರಿಚಯದವರ ವಿಷಯಗಳನ್ನು ಹೇಳಬೇಕೆಂಬ ಲವಲವಿಕೆಯಾಗುತ್ತದೆ. ಮಕ್ಕಳು ಶಿಶುವಿಹಾರಕ್ಕೆ ಹೊಸದಾಗಿ ಬರುವಾಗ ಮನೆಯ ಪರಿಚಿತ ವಾತಾವರಣದಿಂದ ಬಂದಿರುತ್ತಾರೆ. ಶಿಶುವಿಹಾರದ ವಾತಾವರಣ, ಜನರೆಲ್ಲ ಹೊಸದಾಗಿ ಕಂಡಾಗ ಸಹಜವಾಗಿಯೇ ಹೆದರುತ್ತಾರೆ. ಶಿಕ್ಷಕಿ ಇಂಥ ಮಕ್ಕಳ ವಿಶ್ವಾಸಗಳಿಸಬೇಕು. ಮನೆಯಂತೆಯೇ ಪ್ರೀತಿ, ವಾತ್ಸಲ್ಯ,

ಸುರಕ್ಷಿತ ವಾತಾವರಣಗಳಿದ್ದರೆ ಮಕ್ಕಳು ನಿರ್ಭಯದಿಂದ ವ್ಯವಹರಿಸಲು ಪ್ರಾರಂಭಿಸುತ್ತಾರೆ. ಇದನ್ನು ಸಾಧಿಸಲು ಶಿಕ್ಷಕಿ ಹಾಗೂ ಇತರ ಮಕ್ಕಳು ಮುಕ್ತಮನಸ್ಸಿನಿಂದ ಹರಟೆ ಹೊಡೆಯುವುದೇ ಉತ್ತಮೋಪಾಯ. ಒಂದೇ ಸ್ವಭಾವದ ನಾಲ್ಕಾರು ಮಕ್ಕಳು ಸೇರುತ್ತವೆ; ಹರಟೆ ಶುರುವಾಗುತ್ತದೆ. ಇದಕ್ಕೆ ಇಂಥದೇ ವಿಷಯ, ಗತಿ, ವೇಳೆ ಇರಬೇಕೆಂದೇನಿಲ್ಲ. ಶಿಕ್ಷಕಿ ಹರಟೆ ಪ್ರಾರಂಭಿಸಿದಾಗಲೂ ಇಂಥದೇ ವಿಷಯವಿರಬೇಕೆಂದೇನಿಲ್ಲ. ಮಕ್ಕಳ ಬಟ್ಟೆ, ಅವರ ಅಲಂಕಾರ, ಊಟ ಅಥವಾ ಬೇರೆ ಯಾವುದೋ ಪ್ರಸಂಗದ ನೆನಪಿನಿಂದ ಶುರುವಾದುದು ಬೇರೆ ಬೇರೆ ವಿಷಯಗಳನ್ನು ಮಕ್ಕಳು ಸೂಚಿಸಿದಂತೆ ಹರಟುತ್ತ ಹೋಗಬೇಕು. ಶಿಕ್ಷಕಿಯೇ ಹೆಚ್ಚು ಮಾತನಾಡದೆ ಮಕ್ಕಳಿಗೆ ಮಾತನಾಡಲು ಹೆಚ್ಚಿನ ಅವಕಾಶವಿರಬೇಕು. ಮನೆಯ ವಾತಾವರಣವಿದ್ದು ಮಕ್ಕಳು ಬಿಚ್ಚು ಮನಸ್ಸಿನಿಂದ ಹರಟೆ ಹೊಡೆಯುವಂತಿರಬೇಕು. ಇದರಿಂದ ಶಿಕ್ಷಕಿ ಮಕ್ಕಳ ವಿಶ್ವಾಸವನ್ನು ಸುಲಭವಾಗಿ ಗಳಿಸಬಲ್ಲಳು.

ಹರಟೆಯ ವೇಳೆಯಲ್ಲಿ ಕೌಟುಂಬಿಕ ವಾತಾವರಣವಿರಬೇಕಾದುದು ಅವಶ್ಯ. ಶಿಕ್ಷಕಿ ಒಂದು ಚಿಕ್ಕ ಸ್ಟೂಲ್ ಅಥವಾ ಪೆಟ್ಟಿಗೆಯ ಮೇಲೆ ಕುಳಿತು ಮಕ್ಕಳನ್ನೆಲ್ಲ ತನ್ನ ಸುತ್ತಲೂ ಕೂರಿಸಿಕೊಳ್ಳಬೇಕು. ಕೆಲವು ಮಕ್ಕಳು ನಿಂತುಕೊಳ್ಳಲು ಇಷ್ಟಪಟ್ಟರೆ ಅಡ್ಡಿಪಡಿಸಬಾರದು. ಕೆಲವು ಮಕ್ಕಳು ಶಿಕ್ಷಕಿಯ ತೀರ ಹತ್ತಿರ ಕುಳಿತುಕೊಳ್ಳಬಹುದು. ಹರಟೆಗೆ ಪ್ರಾರಂಭಿಸಿದಾಗ ಅನೇಕ ಮಕ್ಕಳು ತಾವೂ ಮಾತಾಡಬೇಕೆಂದು ಬಯಸುವುದು ಸಹಜ. ಆದರೆ ಎಲ್ಲರೂ ಒಟ್ಟಿಗೆ ಮಾತನಾಡಲಾರಂಭಿಸಿದರೆ ಗೊಂದಲವಾಗುವುದು ಸಹಜ. ಆದ್ದರಿಂದ ಮಾತಾಡಲಿರುವವರು ಒಬ್ಬರನಂತರ ಇನ್ನೊಬ್ಬರು ಸರದಿಯಲ್ಲಿ ಮಾತನಾಡುವಂತೆ ವ್ಯವಸ್ಥೆ ಮಾಡಬೇಕು. ಕೆಲವು ಮಕ್ಕಳು ಯಾವಾಗಲೂ ತಾವೇ ಮಾತನಾಡುತ್ತಿರಬೇಕೆಂದು ಬಯಸುತ್ತಾರೆ; ಸ್ವಲ್ಪ ನಾಚಿಕೆ ಸ್ವಭಾವದ ಮಕ್ಕಳು ಹಿಂದೆಯೇ ಉಳಿಯುತ್ತಾರೆ. ಶಿಕ್ಷಕಿಯಾದವಳು ಹೀಗೆ ಮೆತ್ತಗಿರುವ ಮಕ್ಕಳಿಗೂ ಮಾತನಾಡುವ ಅವಕಾಶ ಮಾಡಿಕೊಡಬೇಕಲ್ಲದೆ ಮಾತನಾಡುವಲ್ಲಿ ಚುರುಕಾಗಿದ್ದ ಮಕ್ಕಳನ್ನು ಕೆಲಮಟ್ಟಿಗೆ ನಿಧಾನಿಸಬೇಕು; ಆದರೆ ಅವರನ್ನೆಂದಿಗೂ ನಿರಾಸೆಗೊಳಿಸಬಾರದು. ಹಾಗೆಯೇ ಒಬ್ಬರ ನಂತರ ಒಬ್ಬರು ಮಾತನಾಡುವ ನಿಯಮವನ್ನು ಮಾತ್ರ ಸಡಿಲಗೊಳಿಸಬಾರದು. ಕೆಲವು ಮಕ್ಕಳಿಗೆ ತಮ್ಮ ಮನೆಯಲ್ಲಿ ಎಲ್ಲವೂ ಇದೆಯೆಂದು ಹೇಳುವ ಆಸೆಯಿರುತ್ತದೆ. ಮೋಟಾರ್‌ಕಾರಿನ ವಿಷಯ ಬಂದರೆ ಹಸುರು, ಹಳದಿ, ಎಲ್ಲತರದ ಮೋಟಾರ್ ಇದೆಯೆಂದೂ ಹಣ್ಣು, ಆಟಿಕೆಗಳ ವಿಷಯ ಬಂದರೆ ಅದೆಲ್ಲವೂ ತಮ್ಮಲ್ಲಿದೆಯೆಂದೂ ಹೇಳುತ್ತಾರೆ. ಅವರ ಉತ್ಸಾಹಕ್ಕೆ ಭಂಗತರಬಾರದು ಮತ್ತು ಅದನ್ನು ತಿದ್ದಲೂ ಹೋಗಬಾರದು. ಇದು ವಸ್ತುಪರಿಚಯದ ಪಾಠವಲ್ಲ; ಹರಟೆ ಮಾತ್ರ ಎಂಬುದನ್ನು ನೆನಪಿಡಬೇಕು.

ಹರಟೆಗಾಗಿ ನಿರ್ದಿಷ್ಟ ವಿಷಯವಿಲ್ಲದಿದ್ದರೂ ಶಿಕ್ಷಕಿಯಾದವಳು ಹರಟೆಯನ್ನು ಯಾವ ವಿಷಯದಿಂದ ಪ್ರಾರಂಭಿಸಿ ಹೇಗೆ ಮುಂದುವರಿಸಬೇಕೆಂಬುದನ್ನು ಮೊದಲೇ ಯೋಚಿಸಬೇಕು. ಹರಟೆಯಲ್ಲಿ ಸಮಾವೇಶಗೊಳಿಸಬಹುದಾದ ವಿಷಯಗಳನ್ನು ಸ್ಥೂಲವಾಗಿ ಇಲ್ಲಿ ಹೇಳಲಾಗಿದೆ:

1) **ಸುದ್ದಿ**: ಯಾವುದಾದರೊಂದು ಘಟನೆ ಇದ್ದರೆ ಅದನ್ನು ದೊಡ್ಡವರಾದ ನಮಗೂ ಕೂಡ ಬೇರೆಯವರಿಗೆ ಹೇಳಬೇಕೆನಿಸುತ್ತದೆ. ಮಕ್ಕಳ ಅನುಭವಜ್ಞಾನ ಸೀಮಿತವಾದದ್ದಿರುವುದರಿಂದ ನಮಗೆ ಸಾಮಾನ್ಯವಾದ ವಿಷಯಗಳೂ ಕೂಡ ಅವರಿಗೆ ಹೊಸತು, ಆಶ್ಚರ್ಯಕರ ಎನ್ನಿಸುತ್ತದೆ. ಆದ್ದರಿಂದ ಈ ಹೊಸ ಅನುಭವಗಳನ್ನು ಅವರು ವ್ಯಕ್ತಪಡಿಸಲು ಇಷ್ಟಪಡುತ್ತಾರೆ. 'ನಮ್ಮಣ್ಣಗೆ ಹೊಸ ಅಂಗಿ ತಂದಿದ್ದಾರೆ,' 'ತಂಗಿ ಹಾಲು ಚೆಲ್ಲಿದರೆ ಬೆಕ್ಕು ಅದನ್ನೆಲ್ಲ ಕುಡಿದು ಬಿಟ್ಟಿತು,' 'ಈ ದಿನ ನಮ್ಮ ಮನೆಗೆ ದೊಡ್ಡಪ್ಪ ಬಂದಿದ್ದರು'—ಹೀಗೆ ಅನೇಕ ವಿಷಯಗಳು ಅವರ ಹೃದಯದಲ್ಲಿ ತಳಮಳಗೊಳ್ಳುತ್ತಿರುತ್ತವೆ. ಆದರೆ ಯಾವ ಯಾವ ವಿಷಯ ಹೇಗೆ ಶುರುಮಾಡಬೇಕೆಂಬುದು ಮಕ್ಕಳಿಗೆ ತಿಳಿಯದು. ಆಗ ಮೊದಲಿಗೆ 'ಈ ದಿನ ಮೋರೆ ಯಾರು ತೊಳೆದರು ?' 'ಏನು ಊಟ ಮಾಡಿಬಂದೆ ?' 'ಮನೆಯಲ್ಲಿ ಏನೇನು ಕೆಲಸ ಮಾಡಿದಿರಿ ?' ಎಂದು ಕೇಳುವ ಪ್ರಶ್ನೆ, ಸೂಚನೆಗಳಿಂದ ಮನೆಯು ನೆನಪು ಬಂದು ಮಕ್ಕಳು ಮನೆಯ ಸುದ್ದಿಗಳನ್ನು ಆರಂಭಿಸುತ್ತಾರೆ. ಮನೆಯ ನೆನಪು ಬಂದು ತೀರ ಸಂಬಂಧದ ಅನುಭವಸ್ಮರಣೆ ಹೇಳುವುದರಿಂದ ಹರಟೆಯಲ್ಲಿ ತಲ್ಲೀನರಾಗುತ್ತಾರೆ. ಕೆಲವೊಮ್ಮೆ ಮಕ್ಕಳು ಮನೆ ಅಥವಾ ಇತರ ಸುದ್ದಿ ಹೇಳುವಾಗ ಸೌಜನ್ಯಕ್ಕೆ ಬಹಿರಂಗಪಡಿಸದ ಕೆಲವಿಷಯಗಳನ್ನು ಸಹ ತಿಳಿಯದೇ ಹೇಳಲುಪಕ್ರಮಿಸುತ್ತಾರೆ. ಅಂಥ ಸಂದರ್ಭಗಳಲ್ಲಿ ಶಿಕ್ಷಕಿ ನಾಜೂಕಾಗಿ ಬೇರೆಕಡೆಗೆ ವಿಷಯಾಂತರಿಸಬೇಕು.

2) ಪೋಷಾಕು ಮತ್ತು ಸ್ವಚ್ಛತೆ.

3) ಹಬ್ಬ, ಉತ್ಸವ, ಮನೆಗೆ ಬಂದ ಅತಿಥಿಗಳು.

4) ವಸ್ತು, ಚಿತ್ರಗಳನ್ನು ತೋರಿಸಿ ಗಿಡ, ಮರ, ಗುಡ್ಡ, ನದಿ, ಪಶುಪಕ್ಷಿಗಳ ಬಗ್ಗೆ ಮಾತಾಡುವುದು. ಹೀಗೆ ಹರಟೆ ಹೊಡೆಯುವಾಗ ವಸ್ತುಗಳ ಅಥವಾ ಪ್ರಾಣಿಗಳ ಬಗ್ಗೆ ಅಂದರೆ ಬೆಕ್ಕಿಗೆ ಹಲ್ಲುಗಳು ಎಷ್ಟು, ಹುಲಿಯ ಮೈಮೇಲೆ ಪಟ್ಟಿಗಳ ಅಳತೆ ಎಷ್ಟು ಎಂದು ಸೂಕ್ಷ್ಮ ವಿವರಗಳನ್ನು ಕೇಳಬಾರದು. ಚಿತ್ರಗಳಲ್ಲಿ ಎದ್ದುಕಾಣುವ ಹಾಗೂ ಸ್ಪಷ್ಟವಿದ್ದ ವಿವರಗಳನ್ನು ತಿಳಿಸಿದರೆ ಸಾಕು.

ವಸ್ತುಪರಿಚಯಕ್ಕೆ ಮಕ್ಕಳ ಗಮನ ಅಥವಾ ಕಲ್ಪನೆಗೆ ಎಟುಕುವ ಯಾವ ವಸ್ತುವಾದರೂ ಸರಿ. ಉದಾಹರಣೆಗೆ ತರಕಾರಿ, ಹಣ್ಣುಗಳು, ಅಡಿಗೆ, ವಾಹನ, ಪ್ರಾಣಿ,

ವಿಶೇಷ ಆಕಾರದ ಹಿತ್ತಾಳೆ, ತಾಮ್ರ ಮತ್ತಿತರ ಪಾತ್ರೆಗಳು; ಕೊಡೆ, ಬಟ್ಟೆ, ಚಪ್ಪಲಿ; ಕೋಣೆಯಲ್ಲಿರತಕ್ಕ ವಸ್ತುಗಳು; ಕಪ್ಪುಹಲಗೆ, ಪುಸ್ತಕ; ಪ್ರತ್ಯಕ್ಷವಾಗಿ ತೋರಿಸಿದ ಹಣ್ಣು; ಬೆಕ್ಕು, ನಾಯಿ. ಕೋಳಿ ಇತ್ಯಾದಿ ಪಶುಪಕ್ಷಿಗಳು; ಪ್ರತ್ಯಕ್ಷವಾಗಿ ಕಾಣುವ ಗಿಡ, ಮರ, ದರಿಕಂದರಗಳು ಇತ್ಯಾದಿ. ಹೀಗೆ ವಿಷಯ ಷುರುಮಾಡುವುದು ಹರಟೆಗೆ ಓಘ ಕೊಡುವುದಕ್ಕಾಗಿಯೇ ಹೊರತು ವಿಷಯದ ಅಭ್ಯಾಸಕ್ಕಾಗಿ ಅಲ್ಲ.

ಹರಟೆ ಒಂದು ಸಾಮೂಹಿಕ ಚಟುವಟಿಕೆ. ಆದ್ದರಿಂದ ಮಕ್ಕಳು ಹೊಸದಾಗಿ ಶಾಲೆಗೆ ಬರತೊಡಗಿದಂತೆ ಶಿಶುವಿಹಾರದ ಪ್ರಾರಂಭದಲ್ಲಿ ಅಥವಾ ಉಪಾಹಾರದ ಮೊದಲು ಅಥವಾ ಮಕ್ಕಳು ಮನೆಗೆ ಹೋಗುವ ಮೊದಲು, ಪ್ರತಿದಿನ ಅರ್ಧತಾಸು ಹರಟೆವೇಳೆ ನಿಗದಿಪಡಿಸಿದರೂ ಮುಂದೆ ಮಕ್ಕಳು ಮತ್ತು ಶಿಕ್ಷಕಿಯ ಗುರುತು, ವಿಶ್ವಾಸ ಸುಧಾರಿಸಿದಂತೆ ವಾರದಲ್ಲಿ ಎರಡು ಸಲ ಇದ್ದರೂ ಸಾಕು.

ಹರಟೆಯಿಂದ ಷುರುವಾದ ವಸ್ತುಪರಿಚಯ ಮುಂದೆ ವಿಸ್ತಾರಗೊಳ್ಳುತ್ತದೆ. ಇಲ್ಲಿ ಮಕ್ಕಳು ಬಿಚ್ಚುಮನಸ್ಸಿನಿಂದ ಮಾತಾಡುವುದು ಮುಖ್ಯ. ಹರಟೆಯ ಇನ್ನೊಂದು ಉಪಯೋಗವೆಂದರೆ ಮಕ್ಕಳ ಭಾಷಾಜ್ಞಾನ, ಶಬ್ದ ಭಂಡಾರ ಬೆಳೆಯುವಿಕೆ. ಮಕ್ಕಳು ಹೀಗೆ ಹರಟೆ ಹೊಡೆಯುವಾಗ ಕಂಡುಕೊಂಡ ಶಬ್ದ ಸಂಪತ್ತಿಯನ್ನು ನಿತ್ಯಬಳಕೆಯಲ್ಲಿ ತಮ್ಮ ವಿಚಾರ, ಕಲ್ಪನೆ ಅಭಿಪ್ರಾಯಗಳಲ್ಲಿ ವ್ಯಕ್ತಪಡಿಸಲು ಪ್ರಯತ್ನಿಸುತ್ತಾರೆ. ಶಬ್ದ, ಅರ್ಥ, ಉಚ್ಚಾರಗಳನ್ನೆಲ್ಲ ಕಲಿಯತೊಡಗುತ್ತಾರೆ. ಕುಟುಂಬದಲ್ಲಿಯ ಇತರರು ಉಪಯೋಗಿಸುವ ವಸ್ತು, ಆಡುವ ಮಾತು, ಇರುವ ರೀತಿಗಳು, ಮೇಲಿಂದ ಮೇಲೆ ಅನುಭವಕ್ಕೆ ಬರುವುದರಿಂದ ಅವುಗಳ ಕಲ್ಪನೆ, ಶಬ್ದಗಳು ಸ್ಪಷ್ಟವಾಗುತ್ತ ನೆನಪಿನಲ್ಲಿ ಸಹಜವಾಗಿ ಉಳಿಯುತ್ತವೆ. ಆದರೆ ಇನ್ನೂ ಅನೇಕ ವಸ್ತುಗಳು ಅಂದರೆ ಮೆಣಸು, ಜೀರಿಗೆಯಂಥ ಅಡಿಗೆವಸ್ತುಗಳು ಹಾಗೂ ಅಕ್ಕಪಕ್ಕದಲ್ಲಿಯ ಅನೇಕ ವಸ್ತುಗಳ ಪರಿಚಯ ಇರುವುದಿಲ್ಲ. ಏಕೆಂದರೆ ಅವುಗಳೊಟ್ಟಿಗೆ ಅವರ ಸಂಬಂಧ ಪ್ರತ್ಯಕ್ಷ ಇಲ್ಲವೇ ನಿಕಟವಾಗಿರುವುದಿಲ್ಲ. ಅನೇಕ ದೊಡ್ಡ ಮಕ್ಕಳಿಗೇ ತೊಗರಿಬೇಳೆ, ಕಡ್ಲೆಬೇಳೆಗಳ ವ್ಯತ್ಯಾಸ ಗೊತ್ತಾಗುವುದಿಲ್ಲ. ಶಿಶುವಿಹಾರದಲ್ಲಿ ವಸ್ತುಪರಿಚಯ ಮುಖೇನ ಮಕ್ಕಳಿಗೆ ಇಂಥ ಅವಕಾಶಗಳನ್ನೊದಗಿಸಲಾಗುತ್ತದೆ. ಹರಟೆಯಿಂದ ಅನೇಕವೇಳೆ ವಸ್ತುವಿನ ಸೂಕ್ಷ್ಮ ವಿವರಗಳನ್ನು ಮಕ್ಕಳ ಗಮನಕ್ಕೆ ತರುವುದರಿಂದ ಅವುಗಳ ಬಗ್ಗೆ ಅವರ ಕಲ್ಪನೆ, ಅನುಭವಗಳನ್ನು ಬೆಳೆಸಿ ಶಬ್ದ ಭಂಡಾರ ಹೆಚ್ಚಿಸಲು ಸಹಾಯವಾಗುತ್ತದೆ. ಹರಟೆ ವೇಳೆಯಲ್ಲಿ, ಶಿಶುವಿಹಾರದಲ್ಲಿ ಪಾಲಿಸಬಹುದಾದ ನಿಯಮಗಳನ್ನೂ ಸಹ ಮಕ್ಕಳ ಗಮನಕ್ಕೆ ತಂದು ಅವುಗಳನ್ನು ಪಾಲಿಸುವಲ್ಲಿ ನೆರವಾಗಲು ಅನುಕೂಲವಾಗುತ್ತದೆ. ಆದರೆ ಹರಟೆಯ ಸಹಜತೆ ಮಾತ್ರ ಇದರಿಂದ ಕಡಮೆಯಾಗಬಾರದು; ಶಿಕ್ಷಕಿ ಮತ್ತು ಮಕ್ಕಳ ಸ್ನೇಹ ಹೆಚ್ಚುವಂತಿರಬೇಕು. ಈ ಹರಟೆ ವೈಯಕ್ತಿಕ ಹಾಗೂ ಸಾಮೂಹಿಕ

ವಾಗಿರಬಹುದು. ಹರಟೆಗಳಿಂದ ಮಕ್ಕಳಿಗೆ ಸಾಮೂಹಿಕವಾಗಿ ನಾಲ್ಕು ಜನರೆದುರು ತಮ್ಮ ವಿಚಾರ, ಕಲ್ಪನೆ, ಅನುಭವಗಳನ್ನು ಹೇಳುವ ದಿಟ್ಟತನ ಬರುತ್ತದೆ. ಹಾಗೆಯೇ ಹರಟೆಯಿಂದ ದೊರಕುವ ಮಾನಸಿಕ ಸಮಾಧಾನವೂ ಬಾಲವಿಕಾಸದ ದೃಷ್ಟಿಯಿಂದ ಬಹಳ ಮಹತ್ವದ್ದಾಗಿರುತ್ತದೆ.

ಅಧ್ಯಾಯ 10

ಪ್ರವಾಸ

ಚಿಕ್ಕಮಕ್ಕಳಿಗೆ ಹೊರಗೆ ತಿರುಗಾಡುವುದು ಬಹಳ ಇಷ್ಟ. ಅಸಹಾಯಕತೆಯಿಂದಾಗಿ ತಾವಾಗಿಯೇ ಹೊರಗೆ ಹೋಗುವುದು ಸಾಧ್ಯವಾಗುವುದಿಲ್ಲ. ಎಂತಲೇ ಮನೆಯಲ್ಲಿ ಯಾರಾದರೂ ಹೋಗುವುದು ಕಂಡರೆ ತಾವೂ ಬರುವುದಾಗಿ ಹಟ ಹಿಡಿಯುತ್ತಾರೆ. ದೊಡ್ಡವರು ಮಕ್ಕಳಿಗೆ ಏನಾದರೂ ಲೋಭ ತೋರಿಸಿ, ಆಟದಲ್ಲಿ ಮೈಮರೆಸಿ ಅಥವಾ ಒತ್ತಾಯದಿಂದ ಬಿಡಿಸಿಕೊಂಡು ಹೋಗುತ್ತಾರೆ. ಹೀಗೆ ಮಾಡುವುದಕ್ಕಿಂತ ನಿರ್ದಿಷ್ಟ ವೇಳೆಯಲ್ಲಿ ಹೊರಗೆ ಕರೆದುಕೊಂಡು ಹೋಗಿ ಉಳಿದ ವೇಳೆ, ಮನೆಯಲ್ಲಿರಲು ತಿಳಿಸಿ ಹೇಳಿದರೆ ಅಷ್ಟೊಂದು ಹಠ ಹಿಡಿಯಲಾರರು.

ಮಕ್ಕಳ ಅನುಭವ, ಭಾಷೆ ಮತ್ತು ಲೋಕಾನುಭವಗಳು ಶ್ರೀಮಂತವಾಗಬೇಕಾದುದು ಅವಶ್ಯ. ಆದರೆ ಮನೆಯವರು ತಮ್ಮ ಕಾರ್ಯಬಾಹುಲ್ಯದಿಂದಲೋ, ಇನ್ನಾವ ಕಾರಣದಿಂದಲೋ ಮಕ್ಕಳನ್ನು ಎಲ್ಲ ಕಡೆಗೂ ತಮ್ಮ ಜೊತೆ ಕರೆದೊಯ್ಯಲಾಗುವುದಿಲ್ಲ. ಅದಕ್ಕಾಗಿ ಶಿಶುವಿಹಾರಗಳಲ್ಲಿ ಪ್ರವಾಸಗಳನ್ನೇರ್ಪಡಿಸಬೇಕು. ಇದರಿಂದ ಮಕ್ಕಳ ದೈಹಿಕ ಚಲನವಲನೆ, ಸೃಷ್ಟಿ ಪರಿಚಯ ಮತ್ತು ಮನುಷ್ಯ, ಪ್ರಾಣಿ ಜೀವನ ಪರಿಚಯವೂ ಸಾಧ್ಯವಾಗುವುದಲ್ಲದೆ, ದಿಟ್ಟತನ, ಆತ್ಮವಿಶ್ವಾಸಗಳ ಬೆಳವಣಿಗೆಯೂ ಸಾಧ್ಯವಾಗುತ್ತದೆ. ಸೃಷ್ಟಿಪರಿಚಯದಲ್ಲಿ ಹೊಸ ಅನುಭವ, ವೈಜ್ಞಾನಿಕ ದೃಷ್ಟಿ, ಸೃಷ್ಟಿ ಸೌಂದರ್ಯದ ಆಸ್ವಾದನೆಗಳು ಜೀವನದ ರೀತಿನೀತಿಗಳನ್ನು ತಿಳಿಯಲು ಅನುಮಾಡಿ ಕೊಡುತ್ತವೆ, ನೂತನಾನುಭವಗಳಿಂದ ದೃಷ್ಟಿಕೋನ ವಿಶಾಲವಾಗುತ್ತದೆ. ಸೃಷ್ಟಿಯಲ್ಲಿಯ ವಿವಿಧತೆ ಹಾಗೂ ವೈಚಿತ್ರ್ಯದ ಕಲ್ಪನೆ ಬರುತ್ತದೆ.

ಮಕ್ಕಳ ಜ್ಞಾನ ಮತ್ತು ಮನೋವಿಕಾಸಗಳು ಪ್ರತ್ಯಕ್ಷಾನುಭವಗಳ ಮುಖಾಂತರ ಬೇರೂರುತ್ತವೆ. ಪ್ರವಾಸದಿಂದಲೂ ಹೊಸ ಹೊಸ ಪ್ರತ್ಯಕ್ಷಾನುಭವಗಳುಂಟಾಗುತ್ತವೆ. ಸೃಷ್ಟಿಯಲ್ಲಿರುವ ಬೇರೆ ಬೇರೆ ಪ್ರಕಾರದ ಬಣ್ಣಗಳು, ಆಕಾರ, ಗಂಧ, ಶಬ್ದಗಳನ್ನು ತಿಳಿಯಲು ಅಲ್ಲಲ್ಲಿ ಸುತ್ತುವುದು ಅವಶ್ಯ. ಹೀಗೆ ಹೊರಟಾಗ ಮಕ್ಕಳು ಅವುಗಳನ್ನು ಕುರಿತು ಅನೇಕ ಪ್ರಶ್ನೆ ಕೇಳುವುದು ಸಹಜ. ಅದು ಮಕ್ಕಳ ಜಿಜ್ಞಾಸೆಯನ್ನು ತೋರಿಸುತ್ತದೆ. ಅನುಭವದಿಂದಾಗಿ ಮಾನಸಿಕ ವಿಕಾಸ ಸಾಧಿಸುವ ಗತಿ ಈ ವಯಸ್ಸಿನಲ್ಲಿ ತೀವ್ರವಾಗಿದ್ದು ಜಿಜ್ಞಾಸೆಯೂ ಅಷ್ಟೇ ಜಾಗೃತವಾಗಿರುತ್ತದೆ. ಇದರ ಪರಿಪೋಷಣೆಗೆ ಪ್ರವಾಸ ಸಹಕಾರಿ.

ಭೌಗೋಳಿಕವಾಗಿ ನದಿ, ಕೆರೆ, ಗುಡ್ಡ, ಕಾಡು ಮುಂತಾದುವುಗಳನ್ನು ಪ್ರವಾಸ ಮುಖೇನ ಪ್ರತ್ಯಕ್ಷ ಕಂಡಾಗ ಕಲ್ಪನೆ ಮಾಡಿಕೊಳ್ಳುವುದು ಸುಲಭ. ಈ ವಿಷಯಗಳ ಬಗ್ಗೆ ಅದೆಷ್ಟೇ ಪಾಠ ಮಾಡಿದರೂ ಸರಿಯಾದ ಕಲ್ಪನೆ ಮಕ್ಕಳಿಗೆ ಬರುವುದಿಲ್ಲ. ಹಾಗೆಯೇ ಹತ್ತಿರದಲ್ಲಿ ಪ್ರಾಣಿಸಂಗ್ರಹಾಲಯ ಇದ್ದರೆ ಮಕ್ಕಳನ್ನು ಅಲ್ಲಿಗೆ ಕರೆದೊಯ್ದು ಪ್ರಾಣಿಜೀವನ, ಅವುಗಳ ಅಕಾರ, ಬಣ್ಣ ಮತ್ತು ದೇಹರಚನೆಯ ವಿಶೇಷತೆಗಳನ್ನು ಪ್ರತ್ಯಕ್ಷವಾಗಿ ತೋರಿಸುವುದು ಸ್ಪಷ್ಟ ಕಲ್ಪನೆಗೆ ಸಹಕಾರಿ. ಗಿಣಿ ಒಂದೇ ಪಕ್ಷಿಯಾದರೂ ಅದರಲ್ಲಿ ಬೇರೆ ಬೇರೆ ಬಣ್ಣದ, ಜಾತಿಯ ಗಿಳಿಗಳ ಪರಿಚಯ ಅಲ್ಲಿ ಮಾಡಿಕೊಡಬಹುದು. ಅಲ್ಲಿಗೆ ಮಕ್ಕಳನ್ನು ಕರೆದೊಯ್ಯುವುದಿದ್ದರೆ ಅವರಿಗೆ ಏನು ತೋರಿಸಬೇಕೆಂಬುದನ್ನು ಮೊದಲೇ ನಿಶ್ಚಿತಪಡಿಸಿಕೊಂಡಿರಬೇಕು ಮಾತ್ರವಲ್ಲ, ಅವರು ಈ ಎಲ್ಲ ಪ್ರಾಣಿ, ವಸ್ತುಗಳನ್ನು ತೃಪ್ತಿಯಾಗುವಂತೆ ನೋಡಲು ಅವಕಾಶ ಮಾಡಿಕೊಡಬೇಕು. ಹಾಗೆಯೇ ಮಕ್ಕಳನ್ನು ತೋಟಗಳಿಗೆ ಕರೆದುಕೊಂಡು ಹೋಗುವುದರಿಂದ ವನಸ್ಪತಿ (ಸಸ್ಯ) ಜೀವನದ ಪರಿಚಯ ಮಾಡಿಕೊಡುವುದು ಸಾಧ್ಯವಾಗುತ್ತದೆ. ಅವುಗಳ ಹೆಸರೂ ಕೂಡ ಮಕ್ಕಳಿಗೆ ಗೊತ್ತಾಗುತ್ತದೆ. ವಸ್ತುಸಂಗ್ರಹಾಲಯ(ಮ್ಯೂಸಿಯಂ)ಗಳಿಗೆ ಕರೆದುಕೊಂಡು ಹೋಗುವುದರಿಂದ ಪ್ರಾಣಿ, ವನಸ್ಪತಿ (ಸಸ್ಯ), ಭೂಮಿಯಲ್ಲಿ ಸಿಗತಕ್ಕ ವಿವಿಧ ವಸ್ತುಗಳು, ಖನಿಜಗಳು, ಕಲ್ಲುಮಣ್ಣುಗಳು, ಅವುಗಳ ಆಕಾರ, ಬಣ್ಣ, ಇತರ ಮಾಹಿತಿಗಳ ಪರಿಚಯ ಸಾಧ್ಯವಾಗುತ್ತದೆ. ಇವುಗಳನ್ನು ನೋಡುವುದರಿಂದ ಮಕ್ಕಳ ವೈಜ್ಞಾನಿಕ ದೃಷ್ಟಿ ತಂತಾನೆ ಬೆಳೆಯುತ್ತದೆ. ಜಿಜ್ಞಾಸೆಯಿಂದಾಗಿ ವೈಜ್ಞಾನಿಕ ವಿವರಗಳನ್ನು ಇನ್ನೂ ಹೆಚ್ಚಿಗೆ ತಿಳಿದುಕೊಳ್ಳಲು ಮಾರ್ಗವಾಗುತ್ತದೆ. ಅದೇ ರೀತಿ ಮಕ್ಕಳಿಗೆ ಮನುಷ್ಯ ಶಕ್ತಿಯ, ಅವನ ರಚನಾ ಕೌಶಲ್ಯದ ಪರಿಚಯವಾಗುತ್ತದೆ. ಮೋಟಾರ್, ವಿಮಾನ, ಹಡಗು, ರೈಲು, ಗ್ರಾಮಫೋನ್, ರೇಡಿಯೋ, ಟೆಲಿಫೋನ್, ಶಿಲ್ಪಕಲೆ, ಚಿತ್ರಕಲೆ ಇತ್ಯಾದಿಯಾಗಿ ಸದಾನೋಡಲು ಸಿಗದಿರುವ ವಸ್ತುಗಳನ್ನೂ ಅವುಗಳ ರಚನಾಕ್ರಮ ವಿವರವನ್ನೂ ಮಕ್ಕಳು ತಿಳಿಯುವಂತಾಗುತ್ತದೆ. ಇದರಿಂದ ಈ ದಿಶೆಯಲ್ಲಿ ವಿಚಾರ ಮಾಡಲು ಸಹ ಪ್ರಚೋದನೆ ಸಿಗಬಹುದು.

ಚಿಕ್ಕ ಮಕ್ಕಳನ್ನು ದೂರ ಪ್ರವಾಸಕ್ಕೆ ಕರೆದೊಯ್ಯದೆ ಶಾಲೆಯ ಅಕ್ಕಪಕ್ಕದಲ್ಲೇ ಇರುವಂಥ ಸ್ವಲ್ಪದೂರದ ದಿನ್ನೆಗೆ ಅರ್ಧ ಅಥವಾ ಮುಕ್ಕಾಲು ಗಂಟೆ ಕಾಲ ಕರೆದೊಯ್ಯಬೇಕು. ಇಬ್ಬರು ಅಥವಾ ಮೂರು ಮಕ್ಕಳ ಜೊತೆ ಮಾಡಿ ಒಂದು ಜೊತೆಯ ಹಿಂದೆ ಇನ್ನೊಂದು ಜೊತೆ ಹೋಗುವಂತೆ ನೋಡಿಕೊಳ್ಳಬೇಕು. ಎಲ್ಲ ಮಕ್ಕಳ ಹಾಜರಿ ತೆಗೆದುಕೊಂಡು ಜೊತೆಯಲ್ಲಿಯೇ ಹೊರಡಿಸಬೇಕು. ಶಿಕ್ಷಕಿ ಒಮ್ಮೆ ಕೊನೆಗೆ, ಇನ್ನೊಮ್ಮೆ ಮಧ್ಯ ಮತ್ತೊಮ್ಮೆ ಸಾಲಿನ ಮೊದಲಿಗೆ ಇದ್ದು ಮಕ್ಕಳನ್ನು ನೋಡಿಕೊಳ್ಳುತ್ತಿರಬೇಕು. ಮುಂದಿನ ಜೋಡಿ ಸಾವಕಾಶವಾಗಿ ಹೋಗುತ್ತಿದ್ದು ಹಿಂದಿನವರು ಮಧ್ಯದಲ್ಲಿ 'ಅಂತರ' ಬೀಳದಂತೆ ಮುಂದಿನವರನ್ನು ಹಿಂಬಾಲಿಸ

ಬೇಕು. ರಸ್ತೆ ನಿಯಮಕ್ಕನುಗುಣವಾಗಿ ರಸ್ತೆಯ ಎಡಬದಿಯಲ್ಲಿ ಹೋಗುವಂತೆ ರೂಢಿಮಾಡಿಸಬೇಕು. ರಸ್ತೆಯಲ್ಲಿ ಸಾಗುತ್ತಿರುವಾಗ 'ಇದನ್ನು ನೋಡಿರಿ', 'ಅದನ್ನು ನೋಡಿರಿ', ಎಂದು ಆಗಾಗ ಮಕ್ಕಳಿಗೆ ಸೂಚಿಸಬಾರದು. ವಿಶೇಷವಾಗಿ ತೋರಿಸುವಂಥವನ್ನು ಮಾತ್ರ ಮಕ್ಕಳನ್ನು ನಿಲ್ಲಿಸಿ, ತೋರಿಸಿ ಮತ್ತೆ ಮುಂದುವರಿಸಬೇಕು. ಉಳಿದದ್ದನ್ನು ಅವರೇ ನೋಡಲು ಬಿಡಬೇಕು. ಮಕ್ಕಳು ತಮ್ಮತಮ್ಮಲ್ಲೇ ಮಾತನಾಡುತ್ತಿದ್ದರೂ ಅಡ್ಡಿ ಇಲ್ಲ; ಆದರೆ ದೊಡ್ಡ ಗಲಾಟೆಯಾಗಬಾರದಷ್ಟೆ. ಹೋಗಬೇಕಾದ ಸ್ಥಳ ಮುಟ್ಟಿ, ಮತ್ತೆ ಅಲ್ಲಿಂದ ವಾಪಸ್ ಬರುವಾಗ ಮೊದಲಿನ ಪದ್ಧತಿಯನ್ನೇ ಅನುಸರಿಸಬೇಕು. ಶಾಲೆಗೆ ಬಂದಮೇಲೆ ಕೈಕಾಲು, ಮುಖ ತೊಳೆದು 15–20 ನಿಮಿಷ ಮಕ್ಕಳು ವಿಶ್ರಮಿಸಿಕೊಳ್ಳಲು ಅವಕಾಶಕೊಡಬೇಕು. ಕೆಲವು ಮಕ್ಕಳಿಗೆ ನಿದ್ದೆ ಬರುವುದಿಲ್ಲ, ಆದರೂ ಕೂಡ ಶಾಂತರೀತಿಯಿಂದ ಮಲಗಲೇಬೇಕು. ಇದಕ್ಕಾಗಿ ಕೋಣೆಯಲ್ಲಿ ಸ್ವಲ್ಪ ಕತ್ತಲೆ ಮಾಡಬೇಕು. ಸುಗಂಧಬತ್ತಿ ಹಚ್ಚಿಡುವುದರಿಂದ ಶಾಂತತೆಯ ವಾತಾವರಣ ನಿರ್ಮಿಸಲು ಸಹಾಯವಾಗುತ್ತದೆ.

ಇನ್ನೊಂದು ರೀತಿಯ ಪ್ರವಾಸವೆಂದರೆ, ಊರಿನಲ್ಲಿಯ ಅಥವಾ ಊರಿನ ಅಕ್ಕಪಕ್ಕದ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೋಗುವುದು. ಕುಂಬಾರ, ಬಡಿಗಿ, ಸಿಂಪಿಗರಾದಿ ವಿವಿಧೋದ್ಯೋಗಿಗಳ ಅಂಗಡಿಗಳಿಗೆ ಅಥವಾ ಅವರ ಕೆಲಸದ ಸ್ಥಳಗಳಿಗೆ ಮಕ್ಕಳನ್ನು ಕರೆದೊಯ್ದು ಅಲ್ಲಿ ನಡೆಯುವ ಕೆಲಸಕಾರ್ಯ, ಅವರು ಉಪಯೋಗಿಸುವ ವಸ್ತುಗಳು, ಉಪಕರಣಗಳನ್ನು ಮಕ್ಕಳಿಗೆ ತೋರಿಸಿ, ಅವುಗಳ ಹೆಸರನ್ನು ತಿಳಿಸಿ ಪರಿಚಯ ಮಾಡಿಕೊಡಬಹುದು.

ಪಾತ್ರೆಗಳ ಅಂಗಡಿ, ಬಟ್ಟೆಯಂಗಡಿ, ತರಕಾರಿ ಮಾರುಕಟ್ಟೆ, ಮಂಡಿಪೇಟೆಗಳಿಗೂ ಮಕ್ಕಳನ್ನು ಕರೆದೊಯ್ಯಬಹುದು. ಅಲ್ಲಿಯ ವಸ್ತುಗಳನ್ನು ಪ್ರದರ್ಶಿಸಿರುವ ರೀತಿ, ಅವರ ಕೊಡು-ಕೊಳ್ಳುವ ವ್ಯವಹಾರಗಳ ರೀತಿನೀತಿ, ಆಸ್ಪತ್ರೆ, ಅಂಚೆಕಛೇರಿ, ಶಾಲೆ, ಕೋರ್ಟು, ರೈಲುನಿಲ್ದಾಣ ಇವುಗಳನ್ನು ತೋರಿಸಬೇಕು. ತೆಂಗು, ಮಾವು, ಬಾಳೆ ಮುಂತಾಗಿ ಹಣ್ಣಿನ ತೋಟಗಳು, ದೇವಸ್ಥಾನ, ಕೆರೆ, ನದಿ, ಹೀಗೆ ಹತ್ತಿರವಿದ್ದ ಕೆಲವು ನೈಸರ್ಗಿಕ ಸೊಬಗಿನ ತಾಣಗಳನ್ನೂ ಸಹ ಮಕ್ಕಳಿಗೆ ತೋರಿಸಬಹುದು.

ಇಂಥ ಪ್ರವಾಸದ ವಿವರಗಳನ್ನು ಮಕ್ಕಳು ಸ್ಥೂಲವಾಗಿ ಹೇಳಲು ಬರುವಂತೆ ಪ್ರೋತ್ಸಾಹಿಸಬೇಕು. ಸಾಮಾನ್ಯವಾಗಿ ಪ್ರವಾಸಕ್ಕೆ ಹೋಗಿ ಬಂದ ಮರುದಿನ ಸಂಬಂಧಪಟ್ಟ ವಿಷಯದ ಮೇಲೆ ಹರಟೆ ಶುರುಮಾಡಬೇಕು. ಇದರಿಂದ ಮಕ್ಕಳಿಗೆ ಪ್ರವಾಸದ ವಿಷಯಗಳನ್ನು ಮತ್ತೆ ನೆನಪು ತಂದುಕೊಟ್ಟ ಹಾಗಾಗುತ್ತದೆ.

ಪ್ರವಾಸದಿಂದ ಬರುವ ಇತರ ಪ್ರಯೋಜನಗಳೆಂದರೆ ಮಕ್ಕಳಿಗೆ ಲಭಿಸುವ ವ್ಯಾಯಾಮ ಮತ್ತು ಮನೋಲ್ಲಾಸ ಆನಂದಗಳು. ಮಗುವಿನ ಶಿಕ್ಷಣ ಯಾವಾಗಲೂ

ಸ್ವಯಂಶಿಕ್ಷಣವಾಗಿರಬೇಕು. ಅದಕ್ಕೆ ಬೇಕಾದ ಸನ್ನಿವೇಶಗಳೂ ಪ್ರವಾಸದಿಂದೊದಗಿ ಬರುತ್ತವೆ. ತನ್ನ ಸ್ವಂತ ಅನುಭವದ ಮೂಲಕ ಮಗು ವಿಷಯವನ್ನು ಗ್ರಹಿಸುತ್ತದೆ. ಸ್ವಚ್ಛತೆ, ವ್ಯವಸ್ಥಿತತನದ ಬಗ್ಗೆ ಪ್ರವಾಸಗಳಲ್ಲಿ ಹೆಚ್ಚು ಗಮನ ಕೊಡಬೇಕಾಗಿರುವುದರಿಂದ ಅವನ್ನು ರೂಢಿಸಿಕೊಳ್ಳಲು ಮಗುವಿಗೆ ಒಳ್ಳೆಯ ಅವಕಾಶ ಸಿಕ್ಕುತ್ತದೆ. ಯಾವ ಸ್ಥಳಕ್ಕೆ ಮಕ್ಕಳನ್ನು ಕರೆದೊಯ್ಯಬೇಕೆಂದಿರುತ್ತದೋ ಅದನ್ನು ಶಿಕ್ಷಕಿ ಮೊದಲೇ ನೋಡಿರಬೇಕಲ್ಲದೆ ಪ್ರವಾಸಕ್ಕೆ ಮೊದಲೇ ಸಂಬಂಧಿಸಿದವರ ಪರವಾನಿಗೆ ಪಡೆದಿರಬೇಕು. ಆಗ ಯಾವ ಅಡ್ಡಿ ಆತಂಕಗಳಿಲ್ಲದೆ ಪ್ರವಾಸ ಸುಗುಮವಾಗಿ ಜರುಗುತ್ತದೆ. ಹೊರಡುವಾಗ ಮಕ್ಕಳ ಹಾಜರಿ ತೆಗೆದುಕೊಳ್ಳಲು ಮರೆಯಬಾರದು. ಹಾಗೆಯೇ ತಾಳ, ತಂಬಿಗೆ, ಕೋಲು, ಮುಂತಾದವುಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಟಿಂಕ್ಚರ್ ಅಯೋಡಿನ್, ಸ್ವಲ್ಪ ಅರಳೆ, ಮುಳ್ಳು ತೆಗೆಯಲು ಸೂಜಿ ಹೀಗೆ ತಾತ್ಕಾಲಿಕ ಹಾಗೂ ಪ್ರಥಮ ಚಿಕಿತ್ಸೆಗೆ ಬೇಕಾಗುವ ಸಲಕರಣೆಗಳನ್ನೂ ಒಯ್ಯಲು ಮರೆಯಬಾರದು.

ಬೆಳಗಿನಿಂದ ಸಾಯಂಕಾಲದವರೆಗೆ ಅಥವಾ 2-3 ದಿನಗಳ ದೀರ್ಘ ಪ್ರವಾಸಗಳು ಶಿಕ್ಷಕಿ ಹಾಗೂ ಮಕ್ಕಳಲ್ಲಿ ಸಾಕಷ್ಟು ವಿಶ್ವಾಸವಿದ್ದು ಪಾಲಕರಿಗೂ ಸಮ್ಮತವಾಗಿದ್ದರೆ ಮಾತ್ರ ಸಾಧ್ಯ. ಶಿಕ್ಷಕಿ, ಮಕ್ಕಳು ಒಟ್ಟಿಗೆ ಬಹುಕಾಲ ಜೊತೆಯಲ್ಲಿರಲು ಇದರಿಂದ ಸಾಧ್ಯವಾಗುತ್ತದೆ. ತತ್ಫಲವಾಗಿ ವ್ಯವಸ್ಥಿತತನ, ವೈಯಕ್ತಿಕ ಹಾಗೂ ಸುತ್ತಲಿನ ಸ್ವಚ್ಛತೆ, ತನ್ನ ವಸ್ತುಗಳ ಜೋಪಾನ, ಇತರರಿಗೆ ಸಹಾಯ ಮಾಡುವುದು, ಸಾಂಘಿಕ ಜೀವನ ಇತ್ಯಾದಿಯಾಗಿ ಅನೇಕ ಅನುಭವಗಳು ಮಕ್ಕಳಿಗೆ ಉಂಟಾಗುತ್ತವೆ. ಹಾಗೆಯೇ ಮಕ್ಕಳ ಸ್ವಭಾವ ವೈಶಿಷ್ಟ್ಯಗಳೂ ಶಿಕ್ಷಕಿಗೆ ತಿಳಿಯುತ್ತದೆ.

ಪ್ರವಾಸಪೂರ್ವ ಸಿದ್ಧತೆಗಳು

(1) ದೀರ್ಘ ಪ್ರವಾಸಗಳಿಗೆ ಹೋಗುವ ಮುನ್ನ, ಹೋಗಬೇಕಾದ ಸ್ಥಳದ ವಸತಿ, ನೀರು, ಮಲಮೂತ್ರ ವಿಸರ್ಜನೆಯ ವ್ಯವಸ್ಥೆ, ವೈದ್ಯಕೀಯ ಸಹಾಯ-ಇವುಗಳು ದೊರಕುವ ಸೌಲಭ್ಯಗಳ ವಿವರಗಳನ್ನು ಮೊದಲೇ ತಿಳಿಯಬೇಕು. ಊರಲ್ಲಿಯ ಅಥವಾ ಸ್ಥಳಕ್ಕೆ ಸಂಬಂಧಿಸಿದ ಪ್ರಮುಖ ವ್ಯಕ್ತಿಗೆ ತಾವು ಬರುವುದಾಗಿ ಮೊದಲೇ ತಿಳಿಸಿ ಅವಶ್ಯವಿದ್ದಲ್ಲಿ ಪರವಾನಿಗೆ ಪಡೆಯಬೇಕು.

(2) ಪಾಲಕರಿಗೆ ಪ್ರವಾಸದ ಬಗ್ಗೆ ಪೂರ್ಣ ಮಾಹಿತಿ ಒದಗಿಸಬೇಕು. ಮುಖ್ಯವಾಗಿ ಖರ್ಚು, ಸ್ಥಳ ವಿವರ, ವಸತಿ ಮತ್ತು ಊಟಗಳ ವಿವರಗಳನ್ನು ತಿಳಿಸಿ ಪೂರ್ವಭಾವಿಯಾಗಿ ಅವರ ಒಪ್ಪಿಗೆ ಪಡೆಯಬೇಕು.

(3) ರೈಲುಗಾಡಿಯ ಮುಖೇನ ಹೋಗುವುದಿದ್ದರೆ ರಿಯಾಯಿತಿ ವಗ್ಗೆರೆ ಪಡೆದು ಮೊದಲೇ ವ್ಯವಸ್ಥೆ ಮಾಡಿಕೊಳ್ಳಬೇಕು.

(4) ಊಟೋಪಚಾರ ವ್ಯವಸ್ಥೆಮಾಡುವಾಗ ಆರೋಗ್ಯದ ದೃಷ್ಟಿಯಿಂದ ವಿಚಾರಮಾಡಬೇಕು.

(5) ಪ್ರಥಮಚಿಕಿತ್ಸೆಗೆ ಬೇಕಾಗುವ ಔಷಧಗಳು ಮತ್ತು ತಲೆನೋವು, ಹೊಟ್ಟೆ ನೋವು ಮುಂತಾದವುಗಳಿಗೆ ಬೇಕಾಗುವ ಔಷಧಿಗಳನ್ನೂ ಜೊತೆಯಲ್ಲಿ ತೆಗೆದುಕೊಂಡು ಹೋಗಿರಬೇಕು. ನಿಂಬೆ, ಲವಂಗ, ಬಿಸಿನೀರುಚೀಲ, ಥರ್ಮಾಮಿಟರ್‌ಗಳು ಸಹ ಸಂಗಡ ವಿರಬೇಕು.

(6) ಮಕ್ಕಳು ತಮ್ಮ ಜೊತೆಯಲ್ಲಿ ಬಟ್ಟೆ, ಹಾಸಿಗೆ, ಲೋಟ ಇತ್ಯಾದಿ ಅವಶ್ಯಕ ವಸ್ತುಗಳನ್ನು ತರುವಂತೆ ನೋಡಿಕೊಳ್ಳಬೇಕು. ಪ್ರತಿಯೊಂದು ವಸ್ತುವಿನ ಮೇಲೂ ಆಯಾ ಮಗುವಿನ ಹೆಸರು ಅಥವಾ ಚಿಹ್ನೆಯಿರಬೇಕು. ಮನೆಯಿಂದ ಊಟ, ತಿಂಡಿ ತರುವುದಿದ್ದರೆ ಯಾವುದನ್ನು ಕೊಡಬೇಕೆಂಬುದನ್ನು ಪಾಲಕರಿಗೆ ಮೊದಲೇ ತಿಳಿಸಬೇಕು. ಹಾಗೆಯೇ ಮಗುವಿಗೆ ಊಟದ ವಿಚಾರದಲ್ಲಿ ವಿಶಿಷ್ಟ ಅಭ್ಯಾಸಗಳೇನಾದರೂ ಇದ್ದಲ್ಲಿ ಮೊದಲೇ ವಿಚಾರಿಸಿ ತಿಳಿದುಕೊಳ್ಳಬೇಕು.

ಹೊರಡುವ ವೇಳೆಯಲ್ಲಿ, ಸ್ಥಳಮುಟ್ಟಿದ ಮೇಲೆ, ಊಟಕ್ಕೆ ಕುಳಿತಾಗ, ಮಲಗುವ ಮುನ್ನ, ಹೀಗೆ ಆಗಾಗ ಮಕ್ಕಳ ಹಾಜರಿ ತೆಗೆದುಕೊಳ್ಳಬೇಕು. ಮಕ್ಕಳನ್ನು ಕರೆದೊಯ್ಯುವ ಸ್ಥಳ, ವೇಳೆ, ವಾಹನ ಸೌಕರ್ಯ ಮುಂತಾದುವುಗಳ ಬಗ್ಗೆ ಮೊದಲೇ ವಿಚಾರಿಸಿ ವ್ಯವಸ್ಥೆ ಮಾಡಿರಬೇಕು. ಕೆಲವು ಮಕ್ಕಳಿಗೆ ರಾತ್ರಿ ತಾಯಿಯ ಹತ್ತಿರ ಮಲಗುವ ರೂಢಿ ಇರುತ್ತದೆ. ಇಂಥ ಮಕ್ಕಳು ರಾತ್ರಿ ನಿದ್ರೆಗೆಟ್ಟು ಅಸ್ವಸ್ಥರಾಗುತ್ತಾರೆ; ಅವರ ಹತ್ತಿರ ಕುಳಿತು ಶಿಕ್ಷಕಿ ಅವರನ್ನು ತಟ್ಟಿ ನಿದ್ದೆ ಮಾಡುವಂತೆ ಸಹಾಯಮಾಡ ಬೇಕು. ಕೆಲವು ಮಕ್ಕಳಿಗೆ ಎಷ್ಟು ತಿನ್ನಬೇಕೆಂದು ತಿಳಿಯದೆ ಅಜೀರ್ಣ ಮಾಡಿಕೊಳ್ಳು ತ್ತಾರೆ. ಆ ಕಡೆಗೂ ಶಿಕ್ಷಕಿ ಲಕ್ಷ್ಯ ಕೊಟ್ಟು ಆರೋಗ್ಯ ಕಾಯಬೇಕು.

ದೀರ್ಘ ಪ್ರವಾಸಕ್ಕೆ ಮಕ್ಕಳನ್ನು ಕರೆದೊಯ್ಯುವುದು ಬಹಳ ಜವಾಬ್ದಾರಿಯ ಕೆಲಸ. ಆದರೆ ಮಕ್ಕಳ ವಿಕಾಸದ ದೃಷ್ಟಿಯಿಂದ ಇಂಥ ಪ್ರವಾಸಗಳು ಅವಶ್ಯ. ಈ ದಿಸೆಯಲ್ಲಿ ಮಕ್ಕಳನ್ನು ವಿವಿಧ ಬಗೆಯ ವಾಹನಗಳಲ್ಲಿ ಪ್ರವಾಸಕ್ಕೆ ಕರೆದೊಯ್ಯುವುದು ಮಕ್ಕಳ ಅನುಭವ, ಆನಂದಗಳನ್ನು ಹೆಚ್ಚಿಸಲು ಅನುಕೂಲಕರ.

ಸಂಗ್ರಹ : ಬಣ್ಣ ಬಣ್ಣದ ಬಟ್ಟೆಯ ತುಂಡುಗಳು, ಗರಿ, ಗಾಜು, ಕಲ್ಲು, ಎಲೆ, ಹೂವು, ಪಾತರಗಿತ್ತಿ, ಟಿಕೀಟು, ಶಂಖ, ಕಪ್ಪೆಚಿಪ್ಪು ಇಂಥ ಅನೇಕ ವಸ್ತುಗಳನ್ನು ಸಂಗ್ರಹಿ ಸುವುದು ಮಕ್ಕಳ ಅಭ್ಯಾಸ. ಅದಕ್ಕೆ ಉತ್ತೇಜನ ಕೊಡಬೇಕು. ಪ್ರವಾಸಗಳು ಈ ಸಂಗ್ರಹಕ್ಕೆ ಅನುಕೂಲವಾಗಿರುತ್ತವೆ.

ಶಿಶುವಿಹಾರದಲ್ಲಿ, ಸಂಗ್ರಹಿಸಿದ ಇಂಥ ವಸ್ತುಗಳನ್ನು ಇಡಲು ನಿಶ್ಚಿತ ಸ್ಥಳವಿರಬೇಕು. ಅದಕ್ಕಾಗಿ ಡಬ್ಬಿ ಇಲ್ಲವೇ ಕಪಾಟು ಇರಬೇಕು. ತಂದ ವಸ್ತುಗಳನ್ನು ವರ್ಗೀಕರಿಸಿ, ಅವುಗಳ ಉಪಯುಕ್ತತೆ, ಆಕೃತಿ ರಚನೆಗನುಸಾರವಾಗಿ ಸ್ವಚ್ಛವಾಗಿ, ವ್ಯವಸ್ಥಿತವಾಗಿ ಮನೋಹರ ರೀತಿಯಲ್ಲಿ ಜೋಡಿಸಿಡುವಂತೆ ನೋಡಿಕೊಳ್ಳಬೇಕು. ಅವುಗಳನ್ನು ಆಗಾಗ್ಗೆ ಸ್ವಚ್ಛ ಮಾಡುವುದು, ಆಗಾಗ ಸ್ಥಾನ ಬದಲಿಸಿ ಸುಂದರವಾಗಿ ಕಾಣುವಂತೆ ಮಾಡಿ ಅವುಗಳನ್ನು ಕುರಿತು ಹರಟೆ ಹೊಡೆಯುವುದರಿಂದ ಮಕ್ಕಳ ಜ್ಞಾನ ಹೆಚ್ಚಿಸಲು, ಅನುಕೂಲವಾಗುತ್ತದೆ. ಮಕ್ಕಳಿಗೆ ಸಾಮಾನ್ಯವಾಗಿ ಜಗತ್ತಿನ ವಸ್ತುಗಳ ಹಾಗೂ ಜೀವನದ ಪರಿಚಯವಾಗಬೇಕು. ಅದಕ್ಕಾಗಿ ಆಗಾಗ್ಗೆ ಪ್ರದರ್ಶನ ಏರ್ಪಡಿಸಬೇಕು. ಇದರಿಂದ ಅವರ ಶಬ್ದ ಸಂಗ್ರಹ, ಕಲ್ಪನೆ ಹೆಚ್ಚಲು ಅವಕಾಶವಾಗುತ್ತದೆ. ಬೇರೆಬೇರೆ ಪ್ರಕಾರದ ಪಾತ್ರೆಗಳು, ಬಟ್ಟೆ, ಧಾನ್ಯ, ಉಡುಪು, ಆಭರಣ, ತರಕಾರಿ, ಹಣ್ಣು ಹೂವು ಮುಂತಾದುವುಗಳನ್ನು ವ್ಯವಸ್ಥಿತವಾಗಿ ಇಟ್ಟು ತೋರಿಸಬೇಕು ; ಅವುಗಳ ಮೇಲೆ ಚೀಟಿ ಅಂಟಿಸಬೇಕು ; ವೀಕ್ಷಕರು ಒಂದು ಕಡೆಯಿಂದ ಬಂದು ಮತ್ತೊಂದು ಕಡೆಗೆ ಹೋಗುವ ವ್ಯವಸ್ಥೆಯನ್ನು ಸುಣ್ಣದಿಂದ ಗುರ್ತಿಸಬೇಕು ; ಮಕ್ಕಳು ಗುಂಪು ಗುಂಪಾಗಿ ಒಳಗೆಹೋಗಲು ಬಿಡಬೇಕು. ಪ್ರದರ್ಶನ ವಸ್ತುಗಳ ವಿವರಗಳನ್ನೆಲ್ಲ ಶಿಕ್ಷಕಿಯೇ ಹೇಳದೆ ಅವರೇ ನಿರೀಕ್ಷಿಸಲು ಅವಕಾಶ ಮಾಡಿಕೊಡಬೇಕು. ಪ್ರದರ್ಶನದ ಚಿಕ್ಕ ಚಿಕ್ಕ ವಿಭಾಗಗಳ ಮೇಲ್ವಿಚಾರಣೆ ವ್ಯವಸ್ಥೆಗಳನ್ನು ನೋಡಿಕೊಳ್ಳಲು ಸಹ ಮಕ್ಕಳಿಗೆ ವಹಿಸಬೇಕು. ಇದರಿಂದ ಜವಾಬ್ದಾರಿಯಿಂದ ಕೆಲಸ ಮಾಡುವುದು, ದಿಟ್ಟತನ ಮುಂತಾದ ಸ್ವಭಾವ ಬೆಳೆಯಲು ಅವಕಾಶವಾಗುತ್ತದೆ. ತಿಂಗಳಲ್ಲಿ ಒಮ್ಮೆಯಾದರೂ ಇಂಥ ಪ್ರದರ್ಶನ ಏರ್ಪಡಿಸುವುದು ಒಳ್ಳೆಯದು.

ಅಧ್ಯಾಯ 11

ಕೆಲವು ಅವಶ್ಯ ಸಾಧನ ಸಲಕರಣೆಗಳು

ಕೆಲವು ಅವಶ್ಯ ಸಾಧನ ಸಲಕರಣೆಗಳು

ಶಿಶುವಿಹಾರವನ್ನು ಸುವ್ಯವಸ್ಥಿತವಾಗಿ ನಡೆಸಿಕೊಂಡು ಹೋಗಲು ಕೆಲವು ಪತ್ರಿಕೆಗಳು, ರಿಜಿಸ್ಟರ್‌ಗಳು ಹಾಗೂ ಅವುಗಳ ಸಮೀಕ್ಷಣೆ ಬಹಳ ಅವಶ್ಯ. ಇದರಿಂದ ಮಕ್ಕಳ ಕಾರ್ಯಪ್ರಗತಿ ಕಂಡುಬರುವುದಲ್ಲದೆ ಪಾಲಕರು, ವ್ಯವಸ್ಥಾಪಕರಿಗೂ ವಿಹಾರದ ಚಟುವಟಿಕೆ ಪ್ರಗತಿಗಳ ಮಾಹಿತಿ ದೊರೆಯುವಂತಾಗಿ ಸುಧಾರಣೆಗೆ ನೆರವಾಗುತ್ತದೆ.

I 1) **ಸಾಮಾನ್ಯ ರಿಜಿಸ್ಟರ್ :** ಅನೇಕ ಮಕ್ಕಳು ಶಿಶುವಿಹಾರಗಳಲ್ಲಿ ಒಂದು ಎರಡು ಅಥವಾ ಮೂರು ವರ್ಷಗಳವರೆಗೆ ಓದಿ ಮುಂದೆ ಪ್ರಾಥಮಿಕ ಶಾಲೆಗೆ ಹೋಗುತ್ತಾರೆ. ಹೀಗೆ ಶಿಶುವಿಹಾರಕ್ಕೆ ಒಟ್ಟು ಎಷ್ಟು ಮಕ್ಕಳು ಸೇರಿದರು, ವರ್ಷ ವರ್ಷದ ಸಂಖ್ಯೆ, ಅವುಗಳ ಏರಿಳಿತಗಳ ಮಾಹಿತಿ ಸಿಕ್ಕುವಂತೆ ಒಂದು ಸಾಮಾನ್ಯ ರಿಜಿಸ್ಟರ್ ಇರಬೇಕು. ಇದರ ಅನುಕ್ರಮ ಸಂಖ್ಯೆ ವರ್ಷದಿಂದ ವರ್ಷಕ್ಕೆ ಮುಂದುವರಿಯುತ್ತಾ ಹೋಗಬೇಕು. ಪ್ರತಿ ಮಗುವಿನ ಹುಟ್ಟಿದ ತಾರೀಖು, ಪಾಲಕರ ಹೆಸರು, ಅವರ ಉದ್ಯೋಗ ಹಾಗೂ ಸರಾಸರಿ ವಾರ್ಷಿಕ ಆದಾಯ (ಉತ್ಪನ್ನ) ಗಳ ಮಾಹಿತಿ ಅದರಲ್ಲಿರಬೇಕು.

ಮಕ್ಕಳು ಹುಟ್ಟಿದ ತಾರೀಖು ಕಂಡುಹಿಡಿಯುವುದು ಹಳ್ಳಿಗಳಲ್ಲಿ ಅಷ್ಟು ಸುಲಭವಲ್ಲ. ಪಾಲಕರು ಹಬ್ಬಗಳು, ಮಳೆ, ನಕ್ಷತ್ರ, ಮಾಸಗಳ ಮೇಲಿಂದ ಕೆಲ ತಾರೀಖುಗಳನ್ನು ಹೇಳಬಹುದು; ಜನನ ಮರಣ ರಿಜಿಸ್ಟರ್‌ನಿಂದ ತಾರೀಖು ಸಿಕ್ಕಬಹುದು. ಹೀಗೆ ಬೇರೆಬೇರೆ ರೀತಿಯಿಂದ ಸಿಗತಕ್ಕ ಮಾಹಿತಿ ಸಂಗ್ರಹಿಸಿ ನಿರ್ದಿಷ್ಟ ತಾರೀಖನ್ನು ಪಾಲಕರಿಂದ ತಿಳಿದು ಬರೆಯಬೇಕು. ಪ್ರವೇಶ ಪತ್ರವನ್ನು ಪಾಲಕರಿಂದ ಪಡೆದು ರಿಜಿಸ್ಟರ್‌ನಲ್ಲಿ ವಿಷಯ ನಮೂದಿಸಬೇಕು.

2) **ಹಾಜರಿ ಪುಸ್ತಕ :** ಮಗುವಿಗೆ ಒಮ್ಮೆ ಶಿಶುವಿಹಾರಕ್ಕೆ ಪ್ರವೇಶ ಸಿಕ್ಕ ಮೇಲೆ ಪ್ರತಿತಿಂಗಳ ಹಾಜರಿ ಪುಸ್ತಕದಲ್ಲಿ ಅದರ ಹೆಸರು ನಮೂದಿಸಬೇಕು. ತಿಂಗಳಲ್ಲಿ ಒಟ್ಟು ಹಾಜರಿದ್ದ ಮಕ್ಕಳ ಸಂಖ್ಯೆಯಿಂದ ಸರಾಸರಿ ಹಾಜರಿಯೆಷ್ಟೆಂದು ಕಂಡುಹಿಡಿಯಬೇಕು. ಇದರಿಂದ ಮಕ್ಕಳು ವರ್ಷದಲ್ಲಿ ಶಾಲೆಗೆ ಹಾಜರಾಗುವ ಏರಿಳಿತಗಳನ್ನು

ತಿಳಿಯಲು ಸಾಧ್ಯವಾಗುತ್ತದೆ. ಈ ಸಂಖ್ಯೆ ಕಡಮೆಯಾದಲ್ಲಿ ಶಿಕ್ಷಕಿ ಅದರ ಕಾರಣ ಹುಡುಕಿ ಮಕ್ಕಳು ತಪ್ಪದೆ ಹಾಜರಾಗುವಂತೆ ನೋಡಿಕೊಳ್ಳಲು ಸಾಧ್ಯವಾಗುತ್ತದೆ.

3) **ಪ್ರಗತಿಯ ರಿಜಿಸ್ಟರ್ :** ಶಿಶುವಿಹಾರದ ಮಕ್ಕಳಿಗೆ 'ಪರೀಕ್ಷೆ'ಗಳನ್ನು ಮಾಡಲಾಗುವುದಿಲ್ಲ. ಆದಾಗ್ಯೂ ಅವರು ದಿನದಿಂದ ದಿನಕ್ಕೆ ಪ್ರಗತಿ ಹೊಂದುತ್ತಿರುವ ಬಗ್ಗೆ ವರದಿ ಇಡುವುದು ಬಹಳ ಅವಶ್ಯ. ಆದಕಾರಣ ಅವರ ವಿಕಾಸದಲ್ಲಿ ಆಗುತ್ತಿರುವ ತೊಂದರೆಗಳು, ಅವರ ಸ್ವಭಾವ, ವರ್ತನೆಗಳ ವಿವರವನ್ನು ಬರೆದಿಡುವುದರಿಂದ ಶಿಕ್ಷಕಿ ಹಾಗೂ ಪಾಲಕರು ಮಗುವಿನ ವಿಕಾಸಕ್ಕೆ ಬೇಕಾದ ನೆರವನ್ನು ತಿಳಿದು ನೀಡಲು ಸಾಧ್ಯವಾಗುತ್ತದೆ. ಮಗುವಿನ ವೈಯಕ್ತಿಕ ಹಾಗೂ ಸಾಮಾಜಿಕ ಬೆಳವಣಿಗೆಗಳ ಮಾಹಿತಿ ಇದರಲ್ಲಿ ಸಿಕ್ಕುವಂತಾಗುತ್ತದೆ. ಪ್ರತಿಯೊಂದು ಮಗುವಿನ ಬಗ್ಗೆಯೂ ಅದರ ಊಟ, ನಿದ್ದೆ, ವರ್ತನೆ, ಹೀಗೆ ಎಲ್ಲ ಚಟುವಟಿಕೆಗಳಲ್ಲಿ ಎಂದರೆ ಶಾರೀರಕ, ಬೌದ್ಧಿಕ, ಮಾನಸಿಕ ಬೆಳವಣಿಗೆಗಳಲ್ಲಿ ಕಂಡ ವಿವರಗಳನ್ನು ಬರೆದಿಡಬೇಕು. ಈ ವಿವರ ಪಾಲಕರಿಗೂ ತಿಳಿದಿರುವಂತೆ ನೋಡಿಕೊಳ್ಳುವುದು ಅವಶ್ಯ.

4) **ಆರೋಗ್ಯ ಪತ್ರಿಕೆ:** ಗ್ರಾಮೀಣ ಅಭಿವೃದ್ಧಿಯ ಅನೇಕ ಯೋಜನೆಗಳಲ್ಲಿ ಮಕ್ಕಳಿಗೆ ಆಹಾರ ಕೊಡುವ ಯೋಜನೆಯಿದ್ದು ಅವರ ಒಟ್ಟು ಆರೋಗ್ಯ ಸುಧಾರಣೆ ಕಡೆಗೆ ಲಕ್ಷ್ಯಕೊಡಲಾಗುತ್ತದೆ. ಇದಕ್ಕಾಗಿ ಮಗುವಿನ ಆರೋಗ್ಯಕ್ಕೆ ಸಂಬಂಧಿಸಿದ ತೂಕ, ಎತ್ತರ ಇತ್ಯಾದಿ ಸಮಗ್ರ ಆರೋಗ್ಯ ಮಾಹಿತಿಗಳನ್ನು ಬರೆದಿಡಬೇಕಾಗುತ್ತದೆ. ಇದಕ್ಕಾಗಿ ಈ ಯೋಜನೆಯ ವಿಶಿಷ್ಟ ಕಾರ್ಡುಗಳನ್ನು ಶಿಶುವಿಹಾರಗಳಿಗೆ ಕೊಟ್ಟಿದ್ದರೆ ಅಂಥ ಕಾರ್ಡುಗಳಲ್ಲಿ, ಇಲ್ಲದ ಪಕ್ಷದಲ್ಲಿ ಕನಿಷ್ಠ ಪಕ್ಷ 6 ತಿಂಗಳಿಗೊಮ್ಮೆ ಡಾಕ್ಟರಿಂದ ಮಕ್ಕಳ ಆರೋಗ್ಯ ಪರೀಕ್ಷೆಮಾಡಿಸಿ ವಿವರವಿಡಬೇಕು. ಹಾಗೆಯೇ ಶಿಕ್ಷಕಿ ಪ್ರತಿ ತಿಂಗಳು ಮಕ್ಕಳ ತೂಕ ಹಾಗೂ ಎತ್ತರವನ್ನು ಮೂರು ಅಥವಾ ಆರು ತಿಂಗಳಿಗೊಮ್ಮೆ ಪರೀಕ್ಷಿಸಿ ನಮೂದಿಸಿಡಬೇಕು. ಇದರಿಂದ ಮಗುವಿನಲ್ಲಿ ವಯಸ್ಸಿಗೆ ತಕ್ಕ ಬೆಳವಣಿಗೆ ಇದೆಯೋ ಇಲ್ಲವೋ ಎಂಬುದು ತಿಳಿಯುತ್ತದೆ. ಇದಕ್ಕಾಗಿ ಶಿಶುವಿಹಾರದ ಯಾವುದಾದರೊಂದು ಗೋಡೆ ಅಥವಾ ಕಂಬದ ಮೇಲೆ ಅಳತೆ ಗೋಲಿನ ಗುರುತುಮಾಡಿಟ್ಟಿರಬೇಕು; ಮಾಹಿತಿಯನ್ನು ಬೇರೆ ರಿಜಿಸ್ಟರ್‌ನಲ್ಲಿ ಬರೆದಿಡಬೇಕು.

5) **ಡೆಡ್‌ಸ್ಟಾಕ್ ರಿಜಿಸ್ಟರ್ :** ಶಿಶುವಿಹಾರಕ್ಕಾಗಿ ಕೊಂಡ ಅಥವಾ ದೇಣಿಗೆ ಬಂದ ವಸ್ತುಗಳ ಸಂಖ್ಯೆ, ಬೆಲೆಗಳ ವಿವರಗಳನ್ನು ಇದರಲ್ಲಿ ಬರೆದಿಡಬೇಕು.

6) **ಪತ್ರವ್ಯವಹಾರದ ರಿಜಿಸ್ಟರ್ :** ಸಂಸ್ಥೆಗೆ ಬಂದ ಪತ್ರಗಳು, ಅವುಗಳ ಸಂಖ್ಯೆ, ವಿಷಯ, ಯಾರಿಂದ ಬಂದಿದ್ದು ಎಂಬ ಬಗ್ಗೆ ಮಾಹಿತಿ ಇಡಬೇಕು. ಅದರಂತೆ

ವಿಷಯಾನುಸಾರ ಫೈಲ್ ಮಾಡಿ ಆಯಾ ಫೈಲಿನಲ್ಲಿ ಕಾಗದ ಪತ್ರಗಳನ್ನು ಸೇರಿಸಿಡಬೇಕು. ಹಾಗೆಯೇ ಸಂಸ್ಥೆಯಿಂದ ಹೊರಗೆ ಕಳುಹಿಸಲಾದ ಕಾಗದ ಪತ್ರಗಳ ಮಾಹಿತಿಯನ್ನೂ ಇಡಬೇಕು. ಇದಕ್ಕಾಗಿ ಖರ್ಚುಮಾಡಿದ ಅಂಚೆವೆಚ್ಚ ಇತ್ಯಾದಿಗಳ ಮಾಹಿತಿ ಸಹ ಇಡಬೇಕು.

7) **ಜಮಾಖರ್ಚಿನ ಪುಸ್ತಕ: ಅ) ರಸೀದಿ ಪುಸ್ತಕ:** ಮಕ್ಕಳ ಫೀ, ಜನರಿಂದ ಬಂದ ವಂತಿಗೆ, ದೇಣಿಗೆ ಇವುಗಳಿಗೆ ರಸೀದಿ ಚೀಟಿ ಕೊಟ್ಟು ಅದರ ಇನ್ನೊಂದು ಪ್ರತಿಯನ್ನು ಶಿಶುವಿಹಾರದಲ್ಲಿಟ್ಟಿರಬೇಕು. ಜಮಾ ಪುಸ್ತಕದಲ್ಲಿ ಪಾವತಿ ಪುಸ್ತಕದ ನಂಬರು ಹಾಗೂ ದುಡ್ಡಿನ ಸಂಖ್ಯೆ ಬರೆದು ಲೆಕ್ಕವಿಡಬೇಕು.

(ಆ) **ಖರೀದಿ ರಸೀದಿಗಳ ಫೈಲ್:** ಸಾಮಾನುಗಳನ್ನು ಖರೀದಿ ಮಾಡಿದ ಬಗ್ಗೆ ರಸೀದಿಗಳನ್ನಿಟ್ಟು ಅವುಗಳಿಗೆ ನಂಬರು, ಹಣಕೊಟ್ಟ ದಿನಾಂಕ ಹಾಗೂ ಖರೀದಿಸಿ ಡೆಡ್‌ಸ್ಟಾಕ್ ಅಥವಾ ಇತರ ರಿಜಿಸ್ಟರ್‌ನಲ್ಲಿ ಬರೆದ ಬಗ್ಗೆ ಆ ರಿಜಿಸ್ಟರ್ ಪುಟಸಂಖ್ಯೆ ಹಾಕಿ ಸರ್ಟಿಫಿಕೇಟ್ ಬರೆದು ಶಿಶುವಿಹಾರದಲ್ಲೇ ಇಡುವ ಹಾಗಿದ್ದರೆ ಇಡಬೇಕು; ಮೇಲಿನ ಆಫೀಸಿಗೆ ಕಳಿಸುವ ಹಾಗಿದ್ದರೆ ಅದರ ವಿವರ ಬರೆದು ಕಳುಹಿಸಬೇಕು.

(ಇ) **ದೈನಿಕ ಆಯವ್ಯಯ:** ಈ ಪುಸ್ತಕದಲ್ಲಿ ದಿನದ ಜಮಾಖರ್ಚು ಬರೆದು ಉಳಿದ ಹಣವನ್ನು ಗುಣಿಸಿಡಬೇಕು.

*ಈ) **ಖಾತೆವಹಿ:*** ಪ್ರತಿಯೊಂದು ಬಾಬ್ತಿಗೆ ಪಗಾರ, ಉಪಾಹಾರ, ಚಿಲ್ಲರೆ ವೆಚ್ಚ, ಸಾಮಾನಿನ ಖರೀದಿ, ಹೀಗೆ ಬೇರೆಬೇರೆ ವಿಷಯಗಳಿಗೆ ಖರ್ಚುಮಾಡಲು ವರ್ಷದ ಮೊದಲಿಗೆ ಹಣದ ಮೊತ್ತವನ್ನು ಗೊತ್ತುಮಾಡಿದ್ದು ಆ ಅಂದಾಜಿನಂತೆ ಖರ್ಚಾದ ಮಾಹಿತಿಯನ್ನು ಆ ಪುಸ್ತಕದಲ್ಲಿ ಆಯಾ ಭಾಗದಲ್ಲಿ ಬರೆದಿಡಬೇಕು. ಹೆಚ್ಚು ಖರ್ಚು ಇದ್ದಲ್ಲಿ ಪ್ರತಿ ತಿಂಗಳೂ, ಇಲ್ಲವಾದಲ್ಲಿ 3 ತಿಂಗಳಿಗೊಮ್ಮೆ ದೈನಿಕ ಆಯ ವ್ಯಯದಿಂದ ತೆಗೆದ ಮಾಹಿತಿ ಇದರಲ್ಲಿ ಬರೆಯಬೇಕು.

II **ಬಾಲವಾಡಿಯ ಅಂದಾಜು ಪತ್ರಿಕೆಯ ವಿಷಯಗಳು:** ಇದರಲ್ಲಿ ಬರುವ ಆವರ್ತ ಖರ್ಚಿನಲ್ಲಿ — 1) ಪಗಾರ – ಶಿಕ್ಷಕಿ, ಸಹಾಯಕಿ 2) ಬಾಡಿಗೆ 3) ಎಣ್ಣೆ, ಸೋಪು, ಸ್ವಚ್ಛತೆಯ ಸಾಮಾನು 4) ಉಪಾಹಾರ 5) ಪತ್ರವ್ಯವಹಾರ 6) ಬಣ್ಣ, ದಾರ, ಕಾಗದ, ಸೀಮೆಸುಣ್ಣದ ಬಳಪ ಇತ್ಯಾದಿ ಶೈಕ್ಷಣಿಕ ಸಾಧನಗಳು ಮತ್ತು ಅನಾವರ್ತ ವೆಚ್ಚದಲ್ಲಿ,

1) ಸ್ವಚ್ಛತೆಯ ಸಾಧನಗಳು 2) ಜೀವನ ವ್ಯವಹಾರದ ಸಾಧನಗಳು 3) ಸಂಗೀತ ಹಾಗೂ ಕೈಕೆಲಸದ ಸಾಧನಗಳು 4) ಮುಕ್ತವ್ಯವಸಾಯ ಸಾಧನಗಳು

5) ಕ್ರೀಡಾಂಗಣದ ಸಾಧನಗಳು 6) ಪೀಠೋಪಕರಣಗಳು 7) ಮಾದರಿಗಳು ಹಾಗೂ 8) ಮಕ್ಕಳ ಹಾಗೂ ಶಿಕ್ಷಕರ ಓದಿಗಾಗಿ ಏರ್ಪಡಿಸುವ ವಾಚನಾಲಯ ವಸ್ತು ವೆಚ್ಚಗಳ ವಿವರಗಳು ಸೇರುತ್ತವೆ. ಹಾಗೆಯೇ ಶಿಶುವಿಹಾರಕ್ಕೆ ಸಿಗಬಹುದಾದ ಸಹಾಯಧನ, ವಂತಿಗೆ, ಮಕ್ಕಳ ಫೀ, ಹಣ ಹಾಗೂ ವಸ್ತು, ಶ್ರಮದ ರೂಪದಲ್ಲಿ ಸಿಗತಕ್ಕ ಸೌಲಭ್ಯಗಳನ್ನನುಲಕ್ಷಿಸಿ ಮೇಲಿನ ಅಂದಾಜು ಪತ್ರಿಕೆಯಲ್ಲಿ ಕಾಣಿಸಿದ ಖರ್ಚುಗಳನ್ನು ವಿವರಿಸಬಹುದು.

III **ಶಿಶುವಿಹಾರಕ್ಕೆ ಬೇಕಾಗುವ ಸಾಧನೋಪಕರಣಗಳು :** ಶಿಕ್ಷಣದ ಗುರಿ ಸಾಧಿಸಲು ತಕ್ಕ ಸಾಧನ ಸಲಕರಣೆಗಳು ಬೇಕು. ಇವು ಹೆಚ್ಚಾಗಿ ಕಚ್ಚಾ ಸಾಮಗ್ರಿಗಳಾಗಿದ್ದು ಮಕ್ಕಳು ತಮಗೆ ಬೇಕಾದ ವಸ್ತು ಮತ್ತು ಚಟುವಟಿಕೆಗಳನ್ನು ಅವುಗಳಿಂದ ಮಾಡುವಂತಿರಬೇಕು.

1) **ಕೈತೋಟ, ಸ್ವಚ್ಛತೆ ಹಾಗೂ ಇತರ ಸಾಧನಗಳು :** ದೊಡ್ಡ ಬಕೆಟ್ 3, ಚಿಕ್ಕ ಬಕೆಟ್ 6, ಕಬ್ಬಿಣದ ಬುಟ್ಟಿ 6, ನೀರಿನ ಜಾರಿ 6, ಚಿಕ್ಕ ಗುದ್ದಲಿ 6, ಸಲಿಕೆ 6, ಕುರುಪಿ 12, ಬಿದಿರಿನ ಬುಟ್ಟಿ 6, ನೀರು ಶೇಖರಿಸಲು ಟಾಕಿ (ಡ್ರಂ), ಹರಿವೆ 2, ಅಡಿಗೆ ಪಾತ್ರೆ ದೊಡ್ಡವು 4, ಕುಡಿಯುವ ನೀರಿನ ಪಾತ್ರೆ 1, ಬೇಸಿನ್, ಪರಾತ 2, ಕನ್ನಡಿ 1, ಬಾಚಣಿಕೆ 12, ಕರವಸ್ತ್ರ 12, ಚಿಕ್ಕ ಟವೆಲ್ 6, ಡಸ್ಟರ್ 12, ಉಗುರು ತೆಗೆಯಲು ಚಿಕ್ಕ ಕತ್ತರಿ 4, ಸ್ನಾನದ ಟವೆಲ್ 6, ಊಟದ ತಟ್ಟೆ 40, ಕುಡಿಯುವ ನೀರಿನ ಲೋಟ 40 ಮತ್ತು ಪ್ಲಾಸ್ಟಿಕ್ ಮಗ್ 4.

2) **ಜೀವನ ವ್ಯವಹಾರದ ಸಾಧನಗಳು (ಸಣ್ಣ ಗಾತ್ರದವು) :** ಬೀಸುವ ಕಲ್ಲು 1, ಮೊರ 6, ಪಾತ್ರೆ ಸಣ್ಣದು, ದೊಡ್ಡದು 12, ಕಡಬತ್ ಕಲ್ಲು 1, ಚಾಕು 4, ಕೂಡುವ ಮಣೆ 4, ಸಾಣಿಗೆ 2, ಬಾಟಲಿ 6, ದೊಡ್ಡ ಚಮಚ 3, ಚಿಕ್ಕ ಚಮಚ 6, ಹೆರೆಯುವ ಮಣೆ 2, ತಕ್ಕಡಿ 1, ಹೋಳಿಗೆ ಮಣೆ, ಲಟ್ಟಣಿಗೆ 2, ಚಿಕ್ಕ, ದೊಡ್ಡ ಡಬ್ಬಿಗಳು 12, ಚಿಕ್ಕ, ದೊಡ್ಡ ಪಾತ್ರೆಗಳು 12, ಒನಕೆ 1, ಕಡೆಗೋಲು 2, ಬಟನ್ ಫ್ರೇಮ್ 12, ಹುಕ್ 2, ಮಣ್ಣಿನ ಗಡಿಗೆ 3 ಇತ್ಯಾದಿ.

3) **ಸಂಗೀತ ಮತ್ತು ಕೈಕೆಲಸ ಸಾಧನಗಳು :** ತಾಳ 6 ಜೊತೆ, ಖಂಜರ 1, ಡ್ರಮ್ 2, ಕೋಲು 12 ಜೊತೆ, ಘಂಟೆ 1, ಗೆಜ್ಜೆ 1 ಗಂಟು, ಮಣ್ಣು, ಬಣ್ಣ, ಬೆಂಡು, ರಟ್ಟು, ಬಣ್ಣದ ಕಾಗದ, ಹೊಲಿಗೆ ಬಟ್ಟೆ, ಸೂಜಿ, ಕತ್ತರಿ, ಇತ್ಯಾದಿ.

4) **ಪೀಠೋಪಕರಣಗಳು :** ಟೇಬಲ್ ದೊಡ್ಡದು 1, ಕುರ್ಚಿ 4, ಕಪಾಟು 1, ಷೆಲ್ಫ್ 2, ಕೂಡುವ ಹಲಗೆ 12, ಚಿಕ್ಕ ಸ್ಟೂಲ್ 3, ಆಸನಗಳು 20, ಜಮಖಾನೆ 1, ಕಪ್ಪು ಹಲಗೆ 1, ಚಿತ್ರದ ಕೆಲಸಕ್ಕೆ ಬೋರ್ಡು 12.

4) **ಮುಕ್ತ ವ್ಯವಸಾಯೋಪಕರಣಗಳು :** ಒಳಗೆ ಪೊಳ್ಳಾಗಿದ್ದ ಡಬ್ಬಿಗಳು 6, ಮಡಿಕೆ ಹಾಕುವ ಸಾಧನಗಳು, ರಟ್ಟಿನ ಮೇಲೆ ತೆಗೆದ ವಿವಿಧ ಆಕೃತಿಗಳು, ದಾರ, ಬೀಜಗಳು ಮತ್ತು ಆಟಿಕೆಗಳು.

5) **ಕ್ರೀಡಾಂಗಣದ ಸಾಧನಗಳು :** ಜಾರುಬಂಡೆ, ಒಂಟಿಹಗ್ಗದ ಜೋಡು, ನೀರಿನ ಅಗಲವಾದ ಕಡಮೆ ಆಳದ ಹೌದು, ಜೋಕಾಲಿ, ಧಡಂಧಡಿಕೆ (ಏತ), ಇಟ್ಟಿಗೆಯ ಸಾಲುಗಳು, ಉಸುಕಿನ ತಗ್ಗು, ಜಾಳಿಗೆ, ಸಿಂಗಲ್‌ಬಾರ್, ಡಬಲ್‌ಬಾರ್, ರಂಕಲ್‌ರಾಟೆ (ಚಕ್ರ) ಗಳಲ್ಲದೆ ಆಟಿಕೆಗಳು, ಖಾಲಿಡಬ್ಬ, ಗಾಲಿಗಳು ಇತ್ಯಾದಿ.

ಶಿಶುವಿಹಾರದ ಕಾರ್ಯಕ್ರಮಗಳು

ಶಿಶುವಿಹಾರವನ್ನು ಪ್ರಾರಂಭಿಸಿದ ಮೇಲೆ ಅಲ್ಲಿ ನಡೆಸಬೇಕಾದ ಕಾರ್ಯಕ್ರಮಗಳಾವುವೆಂಬುದನ್ನು ನಿಶ್ಚಯಿಸಬೇಕು. ಶಿಶುವಿಹಾರದಲ್ಲಿ ದೊಡ್ಡ ಮಕ್ಕಳಿಗಿರುವಂತೆ ಕಡ್ಡಾಯವಾಗಿ ವೇಳಾಪತ್ರಿಕೆಯಿಲ್ಲದಿದ್ದರೂ ಯಾವಯಾವ ಕಾರ್ಯಕ್ರಮಗಳಿರಬೇಕು, ಅದನ್ನು ಎಷ್ಟು ವೇಳೆ ನಡೆಸಬಹುದೆಂದು ನಿಶ್ಚಯಿಸದೇ ಹೋದರೆ ಸಾಧಿಸಬೇಕಾದ ಪ್ರಗತಿಯಾಗುವುದಿಲ್ಲ. ಆದ್ದರಿಂದ 2½ ಯಿಂದ 6 ವರ್ಷದ ಮಕ್ಕಳ ಸರ್ವಾಂಗೀಣ ಉನ್ನತಿಗೆ ಬೇಕಾದ ಕಾರ್ಯಕ್ರಮಗಳ ಯೋಜನೆಯಾಗಬೇಕು.

1) ಮಕ್ಕಳಿಗೆ ಕೆಲಸಮಾಡುವ ಉತ್ಸಾಹ ಈ ವಯಸ್ಸಿನಲ್ಲಿ ಬಹಳವಾಗಿರುತ್ತದೆ. ಮಕ್ಕಳ ನಿರೀಕ್ಷಣೆ ಹಾಗೂ ಅನುಕರಣ ಶಕ್ತಿ ಅಧಿಕವಿರುತ್ತದೆ. ತಮ್ಮ ಜೀವನದಲ್ಲಿ ಬರುವ ಪ್ರಸಂಗ, ವಾತಾವರಣಗಳ ವೀಕ್ಷಣೆ ಮಾಡುವುದಲ್ಲದೆ ತಮಗಿಂತ ದೊಡ್ಡವರು ಮಾಡಿದ್ದನ್ನೆಲ್ಲ ಅನುಕರಣೆ ಮಾಡಲು ಯತ್ನಿಸುತ್ತಾರೆ. ಅವರ ಕ್ರಿಯಾಶಕ್ತಿ ಬೆಳವಣಿಗೆಯಾಗುವಂತಿದ್ದು ಸ್ನಾಯುಗಳ ಉಪಯೋಗ ಮಾಡುವಂತಹ ಚಟುವಟಿಕೆಗಳನ್ನು ಕೊಡಬೇಕು.

2) ಈ ವಯಸ್ಸಿನಲ್ಲಿ ಮಕ್ಕಳ ಜ್ಞಾನೇಂದ್ರಿಯಗಳು ಬಹಳ ಚುರುಕಾಗಿರುವುದರಿಂದ ದರ್ಶನ, ಶ್ರವಣ, ರುಚಿ, ಸ್ಪರ್ಶ ಹಾಗೂ ವಾಸನೆಗಳ ಬಗ್ಗೆ ವಿವಿಧ ಉಪಕರಣಗಳ ಮೂಲಕ ಒಳ್ಳೆಯ ತರಬೇತಿ ಸಿಕ್ಕುವಂತಹ ವ್ಯವಸ್ಥೆಯಿರಬೇಕು. ಇದಕ್ಕೆ ವಾತಾವರಣವೂ ಅನುಕೂಲವಿದ್ದು ಸಮೃದ್ಧ ಅನುಭವಗಳನ್ನು ಮಕ್ಕಳು ಪಡೆಯುವಂತಾಗಬೇಕು.

3) ಮಗುವಿನ ಭಾಷಾಜ್ಞಾನ ತೀವ್ರವಾಗಿ ಬೆಳೆಯುತ್ತಿರುತ್ತದೆ. ಅದಕ್ಕೆ ಸಹಾಯುವಾಗುವಂತೆ ಸ್ಪಷ್ಟ, ಸುಲಭ ಭಾಷೆಯನ್ನು ಕೇಳಲು ಮತ್ತು ಉಚ್ಚರಿಸಲು ಮಕ್ಕಳಿಗೆ ತಕ್ಕ ಅವಕಾಶ ಸಿಗಬೇಕು ; ಅವರ ಶಬ್ದ ಸಂಪತ್ತು ಹೆಚ್ಚಾಗಬೇಕು, ಶುದ್ಧವಾಗಿ ವಾಕ್ಯರಚನೆ ಮಾಡಿ ಮಾತನಾಡುವ ಅಭ್ಯಾಸ ಬರಬೇಕು. ಅದಕ್ಕೆ ತಕ್ಕಂತಹ ಭಾಷಾಭ್ಯಾಸ ಕಾರ್ಯಕ್ರಮವನ್ನು ಯೋಚಿಸಬೇಕು.

4) ಮಕ್ಕಳು ತಮ್ಮ ಕೆಲಸ ತಾವೇ ಮಾಡಲು ಇಷ್ಟಪಡುತ್ತಾರೆ. ಈ ಸ್ವಾವಲಂಬನ ಪ್ರವೃತ್ತಿಗೆ ಪ್ರೋತ್ಸಾಹ ಸಿಕ್ಕುವಂತಹ ಚಟುವಟಿಕೆಗಳಿಗೆ ಅವಕಾಶವಿರಬೇಕು. ಸ್ವಚ್ಛತೆ, ಮುಕ್ತವ್ಯವಸಾಯ ಹಾಗೂ ವ್ಯವಹಾರಿಕ ಜೀವನ ಚಟುವಟಿಕೆಗಳು ಇದಕ್ಕೆ ಅನುಕೂಲವಿರುವುದರಿಂದ ಇಂಥ ಚಟುವಟಿಕೆಗಳಿಗೆ ಸಾಕಷ್ಟು ಅವಕಾಶಗಳಿರಬೇಕು.

5) ಮಕ್ಕಳ ಸ್ವಭಾವ ಈ ಕಾಲದಲ್ಲಿ ಬಹಳ ಸಂಸ್ಕಾರಕ್ಷಮವಾಗಿರುತ್ತದೆ. ಮಗು ಸಮಾಜದ ರೀತಿ ನೀತಿಗಳು, ಮೌಲ್ಯಗಳನ್ನು ತಿಳಿದು ತನ್ನ ಜೀವನದಲ್ಲಿ ಆಚರಣೆಗೆ ತರಲು ಯತ್ನಿಸುತ್ತದೆ. ಅದಕಾರಣ ಅದು ಸುಸಂಸ್ಕೃತವಾಗಿ ಬದುಕಿ ಉತ್ತಮ ನಾಗರಿಕ, ಸಮಾಜಜೀವಿಯಾಗಿ ಬದುಕಲು ಬೇಕಾದ ಸಾಮಾಜಿಕ ಶಿಕ್ಷಣಕ್ಕೆ ತಕ್ಕ ತರಬೇತಿಯೋಜನೆಯಿರಬೇಕು.

ಶಿಕ್ಷಕಿಯಾದವಳು ಶಿಶುವಿಹಾರಕ್ಕೆ ಬರುವ ಮಕ್ಕಳ ವಯಸ್ಸು, ಬೌದ್ಧಿಕ ಮತ್ತು ಮಾನಸಿಕ ಸ್ಥಿತಿಗಳನ್ನನುಲಕ್ಷಿಸಿ ತನ್ನ ದೈನಿಕ, ವಾರಿಕ, ಮಾಸಿಕ ಮತ್ತು ವಾರ್ಷಿಕ ಕಾರ್ಯಕ್ರಮಗಳ ಅಂದಾಜು ಪತ್ರಿಕೆಯನ್ನು ಸಿದ್ಧಪಡಿಸಬೇಕು. ಇದರಿಂದ ತನ್ನ ಕಾರ್ಯಯೋಜನೆಯು ಮೂಲೋದ್ದೇಶ ಎಷ್ಟರಮಟ್ಟಿಗೆ ಸಫಲವಾಯಿತು ; ಇಲ್ಲದ ಪಕ್ಷದಲ್ಲಿ ಕಾರಣಗಳೇನೆಂಬುದನ್ನು ಕೂಲಂಕಷವಾಗಿ ವಿಚಾರಿಸಿ ಕಾರ್ಯ ಸಫಲತೆಗಾಗಿ ಪುನರ್ಯೋಜಿಸಲು ಸಾಧ್ಯವಾಗುತ್ತದೆ. ಮಕ್ಕಳ ಸುತ್ತ ಸಮೃದ್ಧ ವಾತಾವರಣ ನಿರ್ಮಿಸಬೇಕಾಗುತ್ತದೆ ; ಅವರ ಭಾಷಾಭಿವೃದ್ಧಿ, ಕ್ರಿಯಾಶೀಲತೆ ಮತ್ತು ಜ್ಞಾನೇಂದ್ರಿಯಗಳ ವಿಕಾಸಕ್ಕೆ ತಕ್ಕ ಅವಕಾಶವೊದಗಿಸಿ, ನೆರವೀಯಬೇಕಾಗುತ್ತದೆ. ಹಾಗೆಯೇ ಸಂಯಮ, ವ್ಯವಸ್ಥಿತತನ ಹಾಗೂ ಸಾಮಾಜಿಕ ದೃಷ್ಟಿಗಳು ಬೆಳೆಯುವಂತೆ ಆಸ್ಥೆವಹಿಸಬೇಕಾಗುತ್ತದೆ. ಇವೆಲ್ಲವೂ ಪೂರ್ವಯೋಜನೆಯಿಲ್ಲದೆ ಸಾಧಿಸಲಾಗದುವು. ಅಂದಾಜು ಪತ್ರಿಕೆ ತಯಾರಿಸಿ ಆಯಾ ತಿಂಗಳು, ವಾರಗಳಲ್ಲಿ ಹೇಳಬೇಕಾದ ಹಾಡು, ಕಥೆ, ಕವನ, ಗೀತೆ, ಆಡಬೇಕಾದ ಆಟ, ಕೈಕೆಲಸ, ಉಪಾಹಾರದ ವ್ಯವಸ್ಥೆ, ಇಂದ್ರಿಯ ಶಿಕ್ಷಣ, ಭಾಷಾಭ್ಯಾಸ ಇತ್ಯಾದಿಯಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಮಾತ್ರವಲ್ಲ ತಿಂಗಳ ಕೊನೆಗೆ, ಹಾಕಿದ ಯೋಜನೆಯಲ್ಲಿ ಎಷ್ಟು ಸಾಧಿಸಲಾಯಿತು, ಸಾಧಿಸದೇ ಇರುವುದಕ್ಕೆ ಕಾರಣಗಳೇನು ಎಂದು ತಿಳಿದು ಕಾರ್ಯಕ್ರಮವನ್ನು ತಿದ್ದಿಕೊಳ್ಳಬೇಕಾಗುತ್ತದೆ.

ಕಾರ್ಯಕ್ರಮದ ಮಾಸಿಕ ಅಂದಾಜು ಪತ್ರಿಕೆಯಲ್ಲಿ ಈ ಕೆಳಗಿನ ವಿಷಯಗಳನ್ನು ಸೇರಿಸಬಹುದು :

1) **ಸ್ವಚ್ಛತೆ** – ಹಲ್ಲು ಉಜ್ಜುವುದು, ತಲೆ ಬಾಚುವುದು, ಉಗುರು ತೆಗೆಯುವುದು.

2) **ಪರಿಸರದ ಸ್ವಚ್ಛತೆ** – ಕಸಗುಡಿಸುವುದು, ಒರೆಸುವುದು ಇತ್ಯಾದಿ.

3) **ವ್ಯವಸ್ಥೆ** – ಸಾಧನೋಪಕರಣಗಳನ್ನು ಆಯಾಸ್ಥಳದಲ್ಲಿ ಸ್ವಚ್ಛಮಾಡಿ ಜೋಪಾನವಾಗಿಡುವುದು.

4) **ಸಂಗೀತ** – ಪ್ರಾರ್ಥನೆ, ಭಜನೆ, ಬಾಲಗೀತೆ, ಅಭಿನಯಗೀತೆ, ಆಟದ ಹಾಡುಗಳು ಇತ್ಯಾದಿ.

5) **ಕಥೆ** – ನರಿ–ದ್ರಾಕ್ಷಿಹಣ್ಣು, ಕಾಗೆ-ಗುಬ್ಬಿ ಮುಂತಾದವುಗಳು.

6) **ಹರಟೆ** – ಗೊಂಬೆಯ ಮದುವೆ, ಊಟದ ವ್ಯವಸ್ಥೆ ಇತ್ಯಾದಿ.

7) **ಬಾಲನಾಟಕ, ಗೊಂಬೆನಾಟಕ** – ಸಿಂಹಿಗ ಮತ್ತು ಕೋತಿಗಳು ಇತ್ಯಾದಿ.

8) **ಆಟಗಳು** – ಹುಲಿಯಣ್ಣ ಹುಲಿಯಣ್ಣ ತಡವೇಕೆ ? ಇತ್ಯಾದಿ.

9) **ವಸ್ತು ಪರಿಚಯ** – ತರಕಾರಿ, ಹಣ್ಣುಗಳು, ಧಾನ್ಯಗಳು ಮುಂತಾದವುಗಳು.

10) **ಪ್ರದರ್ಶನ** – ಉಡುಪು, ಬಟ್ಟೆಗಳು ಇತ್ಯಾದಿ.

11) **ಪ್ರವಾಸ** – ಪ್ರಾಣಿಸಂಗ್ರಹಾಲಯ, ನದಿ, ತೋಟಗಳ ಸಂದರ್ಶನ.

12) **ಉಪಾಹಾರ** – ಉಪ್ಪಿಟ್ಟು, ರಾಗಿಇಡ್ಲಿ, ಕಿಚಡಿ ಇತ್ಯಾದಿ.

13) **ಕೈತೋಟ** – ಮಡಿಮಾಡುವುದು, ಬೀಜಬಿತ್ತುವುದು, ನೀರುಣಿಸುವುದು ಹಾಗೂ ಮಣ್ಣುಬೀಜಗಳ ಪರಿಚಯ.

14) **ಆಟ** – ಸಾಮೂಹಿಕ, ವೈಯಕ್ತಿಕ, ಒಳಾಂಗಣ ಆಟ, ಹೊರಾಂಗಣ ಆಟ.

ಹೀಗೆ ಶಿಕ್ಷಕಿ ತಾನು ಮಕ್ಕಳಿಗೆ ಕಲಿಸಬಹುದಾದ, ಸಂಘಟಿಸಬಹುದಾದ ವಿಷಯಗಳ ಬಗ್ಗೆ ಮೊದಲೇ ಚೆನ್ನಾಗಿ ವಿಚಾರಮಾಡಿ, ಸಾಧ್ಯಾಸಾಧ್ಯತೆಗಳನ್ನು ಅಳೆದು ಕಾರ್ಯಕ್ರಮದ ಅಂದಾಜು ಪತ್ರಿಕೆ ತಯಾರಿಸಿ ಅದನ್ನು ಅಷ್ಟೇ ಶ್ರದ್ಧೆಯಿಂದ ಪೂರೈಸಲು ಯತ್ನಿಸಬೇಕು. ಒಂದುವೇಳೆ ಕೆಲವನ್ನು ಸಾಧಿಸಲು ಸಾಧ್ಯವಾಗದೇ ಹೋದರೆ ಕಾರಣಗಳನ್ನು ವಿಮರ್ಶಿಸಿ ಬರೆದಿಡಬೇಕು. ಇದರಿಂದ ಮುಂದಿನ ಯೋಜನೆಗಳ ತಯಾರಿಕೆಗೆ ಪ್ರಯೋಜನವಾಗುತ್ತದೆ. ಹಾಗೆಯೇ ಶಿಶುವಿಹಾರದ ಸಂಚಾಲಕರಿಗೂ, ಪಾಲಕರಿಗೂ ಸಹ ಇಂಥ ಪತ್ರಿಕೆಯಿಂದ ಮಕ್ಕಳು ಪಡೆಯುತ್ತಿರುವ ಶಿಕ್ಷಣ ಹಾಗೂ ಅವರ ಪ್ರಗತಿಗಳ ಬಗ್ಗೆ ಅರಿವಾಗಿ ಪ್ರಗತಿಗೆ ಬೇಕಾಗುವ ಸಹಾಯ, ಸಲಕರಣೆಗಳನ್ನೊದಗಿಸಿ ನೆರವಾಗಲು ಅನುಕೂಲವಾಗುತ್ತದೆ.

ಪಾರಿಭಾಷಿಕ ಶಬ್ದಕೋಶ

(i) ಇಂಗ್ಲಿಷ್ – ಕನ್ನಡ

A

Amaranth	ದಂಟು
Anxiety	ಉದ್ವಿಗ್ನತೆ
Attendance register	ಹಾಜರಿ ಪುಸ್ತಕ

B

Bell	ಘಂಟೆ
Black board	ಕರಿಹಲಗೆ, ಕಪ್ಪು ಹಲಗೆ

C

Cap	ಕುಲಾವಿ
Catechu	ಕಾಚು
Chalkpiece	ಸೀಮೆಸುಣ್ಣ (ಬಿಡು)
Cheap rate	ಸೋವಿಯದರ
Circle	ವರ್ತುಲ
Clay	ಜೇಡಿ (ಎರೆ)
Constructive work	ರಚನಾತ್ಮಕ ಕ್ರಿಯೆ
Copying	ಅನುಲೇಖನ
Cork	ಬೂಚು

D

Doll with movable limbs	ಕೀಲುಗೊಂಬೆ
Donation	ವಂತಿಗೆ

E

Egoistic tendency	ಅಹಂ ಪ್ರವೃತ್ತಿ
Environment	ಪರಿಸರ
Estimate sheet	ಅಂದಾಜು ಪತ್ರಿಕೆ
Excursion	ಪ್ರವಾಸ

F

Feather	ಗರಿ
Fenugreek	ಮೆಂತ್ಯ
Fine wheat flour	ಮೈದಾಹಿಟ್ಟು
Folding	ಮಡಿಕೆ
Free play	ಮುಕ್ತವ್ಯವಸಾಯ

G

Gap	ಅಂತರ
Gesture song	ಅಭಿನಯ ಗೀತೆ
Group	ಸಮೂಹ
Gum	ವಸಡು

H

Hand work	ಕೈಕೆಲಸ
Heap of moist soil	ಅರಲಿನ ಗುಂಪಿ
High jump	ಉಚ್ಚಗಿತ, ಎತ್ತರಜಿ

I

Imitation	ಅನುಕರಣ
Indoor game	ಒಳಾಂಗಣ ಆಟ
Intellectual	ಬೌದ್ಧಿಕ
Involuntary muscle	ಕ್ರಿಯಾವಿರೋಧಿ ಸ್ನಾಯು

L

Ladder	ನಿಚ್ಚಣಿಕೆ
Lentil	ಚೆನ್ನಂಗಿ
Lint	ಅರಳೆ
Long jump	ಉದ್ದಜಿಗಿತ

M

Marble	ಗೋಲಿ
March song	ಕೂಚಗೀತೆ
Merry goround	ರಂಕಲ್‌ರಾಟೆ
Mental health	ಮಾನಸಿಕ ಆರೋಗ್ಯ
Model	ನಮೂನೆ
Muscle	ಸ್ನಾಯು

N

Nursery school	ಶಿಶುವಿಹಾರ, ಬಾಲವಾಡಿ

O

Oil paint	ತೈಲಬಣ್ಣ (ತೈಲವರ್ಣ)
Outdoor game	ಹೊರಾಂಗಣ ಆಟ

P

Paste	ಅಂಟು
Perfumery stick	ಊದಿನ ಕಡ್ಡಿ
Personal	ವೈಯಕ್ತಿಕ
Pith	ಬೆಂಡು
Plank	ಫಳಿ, ಹಲಗೆ
Pronunciation	ಉಚ್ಚಾರ
Practical	ಪ್ರಾಯೋಗಿಕ
Prayer song	ಪ್ರಾರ್ಥನಾಗೀತೆ
Problem child	ಸಮಸ್ಯೆಯ ಮಗು
Plant	ವನಸ್ಪತಿ (ಸಸ್ಯ)

R

Right angle	ಕಾಟಕೋನ
Rocking boat	ತೂಗುವ ಹಡಗು
Rope swinging ladder	ತೂಗಾಡುವ ಹಗ್ಗದ ನಿಚ್ಚಣಿಕೆ

S

Sale stone	ಮಟ್ಟಿಕಲ್ಲು
Sand	ಉಸುಕು (ಮರಳು)
Scent	ಸುಗಂಧ
Self confidence	ಆತ್ಮ ವಿಶ್ವಾಸ
Sensory nurve	ಜ್ಞಾನತಂತು
Sensory organ	ಜ್ಞಾನೇಂದ್ರಿಯ
Shell	ಕಪ್ಪೆ ಚಿಪ್ಪು
Sliding rock	ಜಾರುಬಂಡೆ
Smell	ವಾಸನೆ
Sound	ಧ್ವನಿ
Sparrow	ಗುಬ್ಬಿ
Stalk	ದೇಟು
Swing	ಉಯ್ಯಾಲೆ
System	ವ್ಯವಸ್ಥೆ

T

Tailor	ಸಿಂಪಿಗ
Taste	ರುಚಿ
Top	ಬಗಾಟ ಬುಗುರಿ (ಮರದ ಬುಗುರಿ)
Tooth powder	ಹಲ್ಲುಪುಡಿ, ದಂತೋಜ್ವಲಪುಡಿ
Touch	ಸ್ಪರ್ಶ

V

Visual perception	ದರ್ಶನ
Vocal chord	ಧ್ವನಿಪೆಟ್ಟಿಗೆ
Voluntary muscle	ಕ್ರಿಯಾಶೀಲಸ್ನಾಯು

W

Walking belt	ನಡೆಯುವ ಪಟ್ಟಿ
Water paint	ನೀರುಬಣ್ಣ (ಜಲವರ್ಣ)

(II) ಕನ್ನಡ – ಇಂಗ್ಲಿಷ್

	ಅ
ಅಂಟು	Paste
ಅಂತರ	Gap
ಅಂದಾಜು ಪತ್ರಿಕೆ	Estimate sheet
ಅನುಕರಣ	*Imitation*
ಅನುಲೇಖನ	Copying
ಅಭಿನಯಗೀತೆ	Gesture song
ಅರಲಿನ ಗುಂಪೆ	Heap of moist soil
ಅರಳೆ	Lint
ಅಹಂ ಪ್ರವೃತ್ತಿ	Egoistic tendency
	ಆ
ಆತ್ಮವಿಶ್ವಾಸ	Self confidence
	ಉ
ಉಚ್ಚಾರ	Pronunciation
ಉಚ್ಚ ಗಿತ, ಎತ್ತರಜಿಗಿತ	High jump
ಉದ್ದಜಿಗಿತ	Long jump
ಉದ್ವಿಗ್ನತೆ	Anxiety
ಉಯ್ಯಾಲೆ (ಜೋಕಾಲಿ)	Swing
ಉಸುಕು (ಮರಳು)	Sand
ಊದಿನಕಡ್ಡಿ	Perfumery stick
	ಒ
ಒಳಾಂಗಣ ಆಟ	Indoor game
	ಕ
ಕಪ್ಪೆ ಚಿಪ್ಪು	Shell
ಕರಿಹಲಗೆ	Black board
ಕಾಚು	Catechu
ಕಾಟಕೋನ	Right angle
ಕೀಲುಗೊಂಬೆ	Doll with movable limbs
ಕುಲಾವಿ	Cap
ಕೂಚಗೀತೆ	March song
ಕ್ರಿಯಾಶೀಲ ಸ್ನಾಯು	Voluntary muscle
ಕ್ರಿಯಾವಿರೋಧಿ ಸ್ನಾಯು	Involuntary muscle
ಕೈಕೆಲಸ	Hand work
	ಗ
ಗಡಿಗೆ	Earthen pot
ಗರಿ	Feather
ಗುಬ್ಬಿ	*Sparrow*
ಗೋಲಿ	Marble
	ಘ
ಘಂಟೆ	Bell
	ಚ
ಚೆನ್ನಂಗಿ	Lentil
	ಜ
ಜಾರುಬಂಡೆ	Sliding rock
ಜ್ಞಾನತಂತು	Sensory nurve
ಜ್ಞಾನೇಂದ್ರಿಯ	Sensory organ
ಜುಮ್ಮಾ	'Jumma'
ಜೇಡಿ (ಎರೆ)	Clay
	ತ
ತೂಗುವ ಹಡಗು	Rocking boat
ತೈಲಬಣ್ಣ	Oil paint
	ದ
ದಂಟು	Amaranth
ದರ್ಶನ	Visual perception
ದೇಟು	Stalk

ಧ

ಧ್ವನಿ	Sound
ಧ್ವನಿಪೆಟ್ಟಿಗೆ	Vocal chord

ನ

ನಡೆಯುವ ಪಟ್ಟಿ	Walking belt
ನಮೂನೆ	Model
ನಿಚ್ಚಣಿಕೆ	Ladder
ನೀರುಬಣ್ಣ	Water paint

ಪ

ಪರಿಸರ	Environment
ಪ್ರವಾಸ	Excursion
ಪ್ರಾರ್ಥನಾಗೀತೆ	Prayer song
ಪ್ರಾಯೋಗಿಕ	Practical

ಫ

ಫಳಿ, ಫಲಕ, ಹಲಗೆ	Plank, Board

ಬ

ಬಗಾಟ ಬುಗುರಿ	Top
ಬ್ಯಾಗಡಿ	Talk like powder
ಬೂಚು	Cork
ಬೆಂಡು	Pith
ಬೌದ್ಧಿಕ	Intellectual

ಮ

ಮಟ್ಟಿಕಲ್ಲು	Sale stone
ಮಡಕೆ	One of the pulses
ಮಡಿಕೆ	Folding
ಮಾನಸಿಕ ಆರೋಗ್ಯ	Mental health
ಮುಕ್ತವ್ಯವಸಾಯ	Free play
ಮೆಂತ್ಯ	Fenugreek
ಮೈದಾಹಿಟ್ಟು	Fine wheat flour

ರ

ರಂಕಲ್ ರಾಟೆ	Merry go round
ರಚನಾತ್ಮಕ ಕ್ರಿಯೆ	Constructive work
ರುಚಿ	Taste

ವ

ವಂತಿಗೆ	Donation
ವನಸ್ಪತಿ (ಸಸ್ಯ)	Plant
ವರ್ತುಲ	Circle
ವಸಡು	Gum
ವ್ಯವಸ್ಥೆ	System
ವಾಸನೆ	Smell
ವೈಯಕ್ತಿಕ	Personal

ಶ

ಶಿಶುವಿಹಾರ, ಬಾಲವಾಡಿ	Nursery school

ಸ

ಸಮಸ್ಯೆಯ ಮಗು	Problem child
ಸ್ಪರ್ಶ	Touch
ಸಾಮೂಹಿಕ	Group
ಸ್ನಾಯು	Muscle
ಸಿಂಪಿಗ	Tailor
ಸೀಮೆಸುಣ್ಣ (ಖಡು)	Chalkpiece
ಸುಗಂಧ	Scent
ಸೋವಿಯದರ	Cheap rate

ಹ

ಹಗ್ಗದ ತೂಗಾಡುವ ನಿಚ್ಚಣಿಕೆ	Rope swinging ladder
ಹಲ್ಲುಪುಡಿ, ದಂತೋಜ್ವಲಪುಡಿ	Tooth powder
ಹಾಜರಿ ಪುಸ್ತಕ	Attendance register
ಹೊರಾಂಗಣ ಆಟ	Outdoor game

ಆಧಾರ ಗ್ರಂಥಗಳ ಪಟ್ಟಿ

1. Amita Verma, *Chetan Balwadi*. Baroda : Amita Verma for Chetan Balawadi M. S. University, 1962.

2. Department of Psychological foundations, 1964. *The Child*. Bulletin No. 4, June 1964. New Delhi : National Council of Educational Research and Training, 1964.

3. Elizabeth B. Hurlock, *Child Development*. New York : Mc Graw Hill Book Company, Inc., 1956.

4. Katherine H. Read, *The Nursery School*. Philadelphia : W.B. Saunders Company, 1955.

5. Maria Montessori, *The Secret of Childhood*. Calcutta : Orient Longmans Ltd., 1961.

6. Nirmala Kher, May Ellen Durrett and Kamala Bhocta : *An Introduction to Child Development*. Bombay : Asia Publishing House, 1962.

7. Tarabai Modak, *Balwadis in Rural Areas*. New Delhi : Directorate of Extension and Training, Ministry of Food and Agriculture, 1958.

8. ಬಿ. ಕುಪ್ಪುಸ್ವಾಮಿ, ಮಕ್ಕಳ ಮನಸ್ಸು. ಮೈಸೂರು : ಎಚ್. ರಾಮಣ್ಣ, ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, 1950.

9. ಬಿ. ಕುಪ್ಪುಸ್ವಾಮಿ ನಾಯಿಡು, ಮಕ್ಕಳ ಭಾವ ಜೀವನ. ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ, 1957.

10. ಜೆ. ಕೃಷ್ಣಶಾಸ್ತ್ರಿ, ಕಿಂಡರ್‌ಗಾರ್ಟನ್ ಕಥೆಗಳು. ಬೆಂಗಳೂರು : ದಿ ಪವರ್ ಪ್ರಿಂಟಿಂಗ್ ವರ್ಕ್ಸ್, 1930.

11. ಸಿ. ರಂಗಾಚಾರ್, ಶಿಶುವಿಹಾರಗಳು. ಮೈಸೂರು : ಮೈಸೂರು ವಿಶ್ವವಿದ್ಯಾನಿಲಯ, 1960.

ಕೃಷಿ ವಿಶ್ವವಿದ್ಯಾನಿಲಯದ ಕನ್ನಡ ಪ್ರಕಟಣೆಗಳು

1.	ಸುಭಿಕ್ಷತೆಗೆ ತೆರೆದ ಬಾಗಿಲು (ಪ್ರತಿಗಳು ಮುಗಿದಿವೆ)		1–50
2.	ಪೀಡೆ ನಿರ್ವಹಣೆ (")		3–75
3.	ಮೈಸೂರು ರಾಜ್ಯದಲ್ಲಿ ಕೃಷಿ (")	ಕ್ಯಾಲಿಕೊ	10–00
4.	ಕೀಟ ಹತೋಟಿ (")		10–00
5.	ತರಕಾರಿ ಬೇಸಾಯ (")		10–00
6.	ಕೀಟ ವಿಂಗಡಣೆ		12–00
7.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ ಭಾಗ–1		5–00
8.	ಕೃಷಿ ರಸಾಯನಶಾಸ್ತ್ರ ಶಬ್ದಾರ್ಥ ನಿರೂಪಣಾವಳಿ	ಸಾದಾ ಪ್ರತಿ	3–75
		ಕ್ಯಾಲಿಕೋ	5–00
9.	ಮಣ್ಣು ಮತ್ತು ನೀರು ಸಂರಕ್ಷಣಾ ಕೈಪಿಡಿ	ಸಾದಾ ಪ್ರತಿ	12–00
		ಕ್ಯಾಲಿಕೊ	15–00
10.	ರೈತರ ನೆಚ್ಚುಮೆಚ್ಚಿನ ಮರಗಳು	ಸಾದಾ ಪ್ರತಿ	12–00
		ಕ್ಯಾಲಿಕೊ	15–00
11.	ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ ಭಾಗ–2	ಸಾದಾ ಪ್ರತಿ	9–00
		ಕ್ಯಾಲಿಕೊ	12–00
12.	ಮಣ್ಣು ಮತ್ತು ನೀರು ನಿರ್ವಹಣೆ	ಸಾದಾ ಪ್ರತಿ	12–00
		ಕ್ಯಾಲಿಕೊ	15–00
13.	ಕಳೆಗಳು ಮತ್ತು ಕಳೆಗಳ ನಿಯಂತ್ರಣ	ಸಾದಾ ಪ್ರತಿ	12–00
		ಕ್ಯಾಲಿಕೊ	15–00
14.	ಮಣ್ಣು	ಸಾದಾ ಪ್ರತಿ	9–00
		ಕ್ಯಾಲಿಕೊ	12–00
15.	ಕೃಷಿ ಸಹಕಾರ	ಸಾದಾ ಪ್ರತಿ	5–00
		ಕ್ಯಾಲಿಕೊ	8–00
16.	ಗೋ ಸಂಪತ್ತು	ಸಾದಾ ಪ್ರತಿ	5–00
		ಕ್ಯಾಲಿಕೊ	8–00
17.	ಧಾನ್ಯ ದಾಸ್ತಾನು ತತ್ವ ಮತ್ತು ಪದ್ಧತಿಗಳು	ಸಾದಾ ಪ್ರತಿ	6–00
		ಕ್ಯಾಲಿಕೊ	9–00

18. ಮಣ್ಣಿನ ಫಲವತ್ತತೆ ಹಾಗೂ ಉತ್ಪಾದಕತೆ	ಸಾದಾ ಪ್ರತಿ	14–00
	ಕ್ಯಾಲಿಕೊ	17–00
19. ಪಶುವೈದ್ಯಕೀಯ ವಿಜ್ಞಾನ	ಸಾದಾ ಪ್ರತಿ	6–00
	ಕ್ಯಾಲಿಕೊ	9–00
20. ಹೊಲದ ಬೆಳೆಗಳಿಗೆ ಬೀಳುವ ಕೆಲವು ಕೀಟಗಳು	ಸಾದಾ ಪ್ರತಿ	6–50
	ಕ್ಯಾಲಿಕೊ	9–50
21. ಟ್ರ್ಯಾಕ್ಟರು ಹಾಗೂ ಟ್ರ್ಯಾಕ್ಟರುಗಳನ್ನು ಸುಸ್ಥಿತಿಯಲ್ಲಿಡುವ ಕ್ರಮಗಳು	ಸಾದಾ ಪ್ರತಿ	6–00
	ಕ್ಯಾಲಿಕೊ	10–00
22. ಸಾಕುಪ್ರಾಣಿಗಳ ಶರೀರ ಕ್ರಿಯಾಶಾಸ್ತ್ರ ಭಾಗ–3	ಸಾದಾ ಪ್ರತಿ	8–00
	ಕ್ಯಾಲಿಕೊ	12–00
23. ಕೃಷಿ ವಿಸ್ತರಣ ಶಿಕ್ಷಣ ಪದ್ಧತಿಗಳು	ಸಾದಾ ಪ್ರತಿ	9–00
	ಕ್ಯಾಲಿಕೊ	13–00
24. ಸಸ್ಯವರ್ಗೀಕರಣ ಶಾಸ್ತ್ರ	ಸಾದಾ ಪ್ರತಿ	12–00
	ಕ್ಯಾಲಿಕೊ	16–00
25. ಶಿಶುವಿಹಾರ	ಸಾದಾ ಪ್ರತಿ	7–50
	ಕ್ಯಾಲಿಕೊ	10–50
26. ಕಣಜದ ಪೀಡೆಗಳು ಮತ್ತು ಅವುಗಳ ಹತೋಟಿ		(ಅಚ್ಚಿನಲ್ಲಿದೆ)
27. ಬೀಜಗಣಿತ		,,
28. ಗಣಿತಶಾಸ್ತ್ರ ಪ್ರವೇಶಿಕೆ (ಭಾಗ I)		,,
29. ,, (ಭಾಗ II)		,,
30. ಕಡಲ ಮೀನುಗಾರಿಕೆ		,,
31. ಧಾನ್ಯದ ಬೆಳೆಗಳಿಗೆ ಬೀಳುವ ಕೀಟಗಳು		,,
32. ಸಾಕುಪ್ರಾಣಿಗಳ ಎಲುಬು ಶಾಸ್ತ್ರ		,,
33. ಕೃಷಿ ಎಂಜಿನಿಯರಿಂಗ್ ಪಠ್ಯ ಪುಸ್ತಕ (ಸಮೀಕ್ಷಣೆ)		,,
34. ಪೌಷ್ಟಿಕ ಆಹಾರ		,,
35. ಕ್ಯಾನಿಂಗ್		,,